ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಏಪ್ರಿಲ್ 2 ಮಂಗಳವಾರ 2024

ಸಂಪುಟ: 44 | ಸಂಚಿಕೆ: 344 |
ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com,
website: www.mysurumithra.com

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

₹4



ಇಂದು ಮುಲಕನಾಡು ಭವನಕ್ಕೆ ಶ್ರೀ ಶೃಂಗೇರಿ ಶ್ರೀಗಳ ಭೇಟಿ

ಮೈಸೂರು,ಏ.1–ಮೈಸೂರು ವಿಜಯನಗರ 3ನೇ ಹಂತದಲ್ಲಿರುವ ಮುಲಕನಾಡು ಭವನಕ್ಕೆ ನಾಳೆ (ಏ.2) ಮಧ್ಯಾಹ್ನ 4 ಗಂಟೆಗೆ ಶ್ರೀ ಶೃಂಗೇರಿ ಶಾರದಾ ಪೀಠಾಧಿಪತಿಗಳಾದ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳು ಭೇಟಿ ನೀಡಲಿದ್ದು, ಅಲ್ಲಿ ವಿಶೇಷ ಪ್ರವಚನ, ಧಾರ್ಮಿಕ ಕಾರ್ಯಕ್ರಮ ಮತ್ತು ಆಶೀರ್ವಚನ ನೀಡಲಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಕೆ.ಎನ್.ಗುರುಮೂರ್ತಿ–9886590060 ಮತ್ತು 9916138371 ಅವರನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಕುಂಬಾರಕೊಪ್ಪಲು ಮಾರಮ್ಮ ಜಾತ್ರೆ: ಭಕ್ತ ಸಮೂಹದಿಂದ ಮೆರವಣಿಗೆ

ಹಲವು ಧಾರ್ಮಿಕ ಕೈಂಕರ್ಯ





ಮೈಸೂರು, ಏ.1(ಎಂಕೆ)– ಮೈಸೂರಿನ ಕುಂಬಾರಕೊಪ್ಪಲು ಗ್ರಾಮ ದೇವತೆ ಶ್ರೀ ಮಾರಮ್ಮ ಜಾತ್ರಾ ಮಹೋತ್ಸವ ಭಕ್ತಿ–ಭಾವದಿಂದ ನೆರವೇರಿತು.

ಶನಿವಾರದಿಂದ ಆರಂಭಗೊಂಡ ಮೂರು ದಿನಗಳ ಮಾರಮ್ಮ ದೇವಿಯ ಜಾತ್ರಾ ಮಹೋತ್ಸವ ಉತ್ಸವ ಮೂರ್ತಿ ಮೆರವಣಿಗೆಯೊಂದಿಗೆ ಸಂಪನ್ನಗೊಂಡಿತು. ಭಾನುವಾರ ಮಧ್ಯಾಹ್ನದಿಂದ ದೇವಿಗೆ ತಂಬಿಟ್ಟು ಆರತಿ ಮೂಲಕ ವಿಶೇಷ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಯಿತು.

ಸೋಮವಾರ ಸಂಜೆ 4 ಗಂಟೆಯಿಂದ ಕುಂಬಾರಕೊಪ್ಪಲಿನ ಮಹದೇಶ್ವರಸ್ವಾಮಿ ದೇವಸ್ಥಾನದಿಂದ ಸಾಗಿದ ಮಾರಮ್ಮ ದೇವಿಯ ಉತ್ಸವ ಮೂರ್ತಿಯನ್ನು ಮಾರಿಗುಡಿವರೆಗೆ ಮೆರವಣಿಗೆ ಮಾಡಲಾಯಿತು. ಮೆರವಣಿಗೆ ದೇವಿಯ ಉತ್ಸವ ಮೂರ್ತಿ ಎದುರು ನೂರಾರು ಭಕ್ತರು ಹೆಜ್ಜೆ ಹಾಕುತ್ತಾ ಸಾಗಿದರೆ, ಹಿಂದಿನಿಂದ ಬಾಯಿಗೆ ಬೀಗ ಹಾಕಿಕೊಂಡು, ಕೈಯಲ್ಲಿ ಪಂಜು ಹಿಡಿದು ಸಾಗಿದ ಸಾವಿರಾರು ಮಂದಿ ಭಕ್ತರು, ಇಷ್ಟಾರ್ಥ ಸಿದ್ದಿಗಾಗಿ ಹರಕೆ ಸಲ್ಲಿಸಿ, ಪ್ರಾರ್ಥಿಸಿದರು.

ದೇವಿಯ ಉತ್ಸವ ಉತ್ಸವ ಮೂರ್ತಿ ದೇವಸ್ಥಾನದ ಬಳಿಗೆ ಆಗಮಿಸುತ್ತಿದ್ದಂತೆ ನೆರೆದಿದ್ದ ಭಕ್ತ ಸಮೂಹದಲ್ಲಿ ಜೈಕಾರ ಕೂಗುವ ಮೂಲಕ ದೇವಿಯ ಕೃಪೆಗೆ ಪಾತ್ರರಾದರು. ನಗರ ಪಾಲಿಕೆ ಮಾಜಿ ಸದಸ್ಯರಾದ ಕೆ.ಟಿ.ಚೆಲುವೇಗೌಡ, ಪೈಲ್ವಾನ್ ಶ್ರೀನಿವಾಸ್, ಕೆ.ವಿ.ಶ್ರೀಧರ್, ಉಷಾ ಕುಮಾರ್, ಮೈಸೂರು ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು, ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

ಮಾರಮ್ಮ ಜಾತ್ರೋತ್ಸವದಲ್ಲಿ ಯದುವೀರ್ ಭಾಗಿ...



ಕುಂಬಾರಕೊಪ್ಪಲು ಶ್ರೀ ಮಾರಮ್ಮ ಜಾತ್ರಾ ಜಾತ್ರೋತ್ಸವದಲ್ಲಿ ಭಾಗಿಯಾದ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಗ್ರಾಮಸ್ಥರು ಪೂರ್ಣಕುಂಭ ಸ್ವಾಗತ ಕೋರುವ ಮೂಲಕ ಅಭಿಮಾನ ತೋರಿದರು. ಜೆಡಿಎಸ್ ನಗರಾಧ್ಯಕ್ಷ ಚೆಲುವೇಗೌಡ ಸೇರಿದಂತೆ ಜೆಡಿಎಸ್ ಹಾಗೂ ಬಿಜೆಪಿಯ ಸ್ಥಳೀಯ ಮುಖಂಡರು ಸಾಥ್ ನೀಡಿದರು. ಬಳಿಕ ಯದುವೀರ್ ಮಾರಮ್ಮ ದೇವಿಗೆ ವಿಶೇಷ ಪೂಜೆ ಸಲ್ಲಿಸಿ, ಲೋಕಸಭಾ ಚುನಾವಣೆಯಲ್ಲಿ ಗ್ರಾಮಸ್ಥರು ಬೆಂಬಲ ನೀಡುವಂತೆ ಕೋರಿದರು.

ಕ್ರಿಕೆಟ್ ಬೆಟ್ಟಿಂಗ್; ಮೂವರ ಬಂಧನ

ಮೈಸೂರು, ಏ.1(ಎಂಕೆ)–ಕ್ರಿಕೆಟ್ ಬೆಟ್ಟಿಂಗ್ ನಡೆಸುತ್ತಿದ್ದ ಮೂವರನ್ನು ಬಂಧಿಸಿರುವ ಸಿಸಿಬಿ ಪೊಲೀಸರು, ಬಂಧಿತರಿಂದ 30,500 ರೂ. ನಗದು ಹಣ, ಮೊಬೈಲ್ ಮತ್ತು ಟಿವಿಯನ್ನು ವಶಕ್ಕೆ ಪಡೆದಿದ್ದಾರೆ. ಆಲನಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ಯರಗನಹಳ್ಳಿ ಗ್ರಾಮದ ರಾಮಮಂದಿರ ರಸ್ತೆ, ಸರ್ಕಾರಿ ಶಾಲೆ ಹಿಂಭಾಗದಲ್ಲಿರುವ ಮನೆಯ ಮೇಲೆ ಮಾ.24 ರಂದು ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಸಿಸಿಬಿ ಪೊಲೀಸರು, ಕ್ರಿಕೆಟ್ ಬೆಟ್ಟಿಂಗ್ ಜೂಜಾಟದಲ್ಲಿ ತೊಡಗಿದ್ದ ಇಬ್ಬರನ್ನು ವಶಕ್ಕೆ ಪಡೆದು 28,200 ರೂ., ಒಂದು ಟಿವಿ ಮತ್ತು 2 ಮೊಬೈಲ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಈ ಸಂಬಂಧ ಆಲನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಹಾಗೆಯೇ ಮಾ.25 ರಂದು ಎನ್.ಆರ್.ಮೊಹಲ್ಲಾ ಸೆಂಟ್ ಮೇರೀಸ್ ರಸ್ತೆ, 7ನೇ ಕ್ರಾಸ್‌ನಲ್ಲಿರುವ ಮನೆಯ ಮೇಲೆ ದಾಳಿ ನಡೆಸಿ, ಕ್ರಿಕೆಟ್ ಜೂಜಾಟದಲ್ಲಿ ತೊಡಗಿದ್ದ ಒಬ್ಬನನ್ನು ಬಂಧಿಸಿ, ಆತನ ಬಳಿ ಇದ್ದ 2,300 ರೂ., 2 ಮೊಬೈಲ್ ವಶಕ್ಕೆ ಪಡೆದಿದ್ದಾರೆ. ಈ ಸಂಬಂಧ ನರಸಿಂಹರಾಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಫರ್‌ಫೆಕ್ಟ್ ವೆಂಚರ್ ಕಂಪನಿ ವಂಚನೆ ಆರೋಪ; ಪ್ರಕರಣ ದಾಖಲು

ಮೈಸೂರು, ಏ.1(ಎಂಕೆ)–ಅಮಾಯಕರಿಗೆ ಹೆಚ್ಚಿನ ಹಣ ನೀಡುವುದಾಗಿ ಆಮಿಷವೊಡ್ಡಿ ಜನರಿಂದ ಹಣ ವಸೂಲಿ ಮಾಡಿ ವಂಚಿಸುತ್ತಿದ್ದ ಶ್ರೀ ಫರ್‌ಫೆಕ್ಟ್ ವೆಂಚರ್ ಕಂಪನಿ ವಿರುದ್ಧ ಲಕ್ಷ್ಮಿಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಗರದ ಚಾಮರಾಜಪುರಂ ವಾಣಿವಿಲಾಸ ರಸ್ತೆಯಲ್ಲಿರುವ ಶ್ರೀ ಫರ್‌ಫೆಕ್ಟ್ ವೆಂಚರ್ ಕಂಪನಿಯವರು ಅಮಾಯಕರಿಗೆ ಹೆಚ್ಚಿನ ಹಣವನ್ನು ನೀಡುವುದಾಗಿ ಆಮಿಷವೊಡ್ಡಿ ಸಾರ್ವಜನಿಕರಿಂದ ಹಣ ಪಡೆದು ನಂತರ ಹಣವನ್ನು ವಾಪಸ್ ನೀಡದೆ ವಂಚಿಸಿರುವುದಾಗಿ ದೂರು ನೀಡಿರುವ ಹಿನ್ನಲೆ ಕಂಪನಿ ಸಿಇಓ ವಿರುದ್ಧ ಪ್ರಕರಣ ದಾಖಲಾಗಿದೆ. ಈ ಕಂಪನಿಯಲ್ಲಿ ಹಣ ಹೂಡಿಕೆ ಮಾಡಿ ಕಳೆದುಕೊಂಡಿರುವ ಸಾರ್ವಜನಿಕರು ತಮ್ಮ ಬಳಿ ಇರುವ ದಾಖಲೆಗಳೊಂದಿಗೆ ಲಕ್ಷ್ಮಿಪುರಂ ಠಾಣೆ ಸಂಪರ್ಕಿಸುವಂತೆ ಪತ್ರಿಕಾ ಪ್ರಕಟಣೆಯಲ್ಲಿ ಕೋರಲಾಗಿದೆ.

ನಿಧನ



ಶ್ರೀಮತಿ ಸಾವಿತ್ರಿ

ಮೈಸೂರು,ಏ.1–ಮೈಸೂರಿನ ಊಟಿ ರಸ್ತೆಯ ದತ್ತನಗರದ ನಿವಾಸಿ ಶ್ರೀಮತಿ ಸಾವಿತ್ರಿ (64) ಅವರು ಶುಕ್ರವಾರ ಹೃದಯಾಘಾತದಿಂದ ನಿಧನರಾದರು. ಮೃತರು ಪತಿ ಹನುಮಂತಪ್ಪ ಮತ್ತು ಮಕ್ಕಳಾದ ಕವಿತಾ, ಶ್ವೇತ, ಮಮತ ಹಾಗೂ ಅಪಾರ ಬಂಧು–ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಜಿಲ್ಲೆಯಲ್ಲಿ ಜಾನುವಾರುಗಳಿಗೆ ಕಾಲುಬಾಯಿ ಜ್ವರದ ಲಸಿಕಾ ಅಭಿಯಾನ ಆರಂಭ

- 6 ತಿಂಗಳು ಮೇಲ್ಪಟ್ಟ ಜಾನುವಾರುಗಳಿಗೆ ಉಚಿತ ಲಸಿಕೆ
- 4–5 ತಿಂಗಳ ಕರುಗಳಿಗೆ ವ್ಯಾಕ್ಸಿನ್, ಬೂಸ್ಟರ್ ಡೋಸ್
- ಜಿಲ್ಲೆಯಲ್ಲಿ 5.15 ಲಕ್ಷ ಜಾನುವಾರುಗಳಿಗೆ ಲಸಿಕೆ ಹಾಕುವ ಗುರಿ

ಮೈಸೂರು,ಏ.1(ಎಂಟಿವೈ)– ಕಾಲುಬಾಯಿ ಜ್ವರದಿಂದ ಜಾನುವಾರುಗಳನ್ನು ರಕ್ಷಿಸುವ ನಿಟ್ಟಿನಲ್ಲಿ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಮೈಸೂರು ಜಿಲ್ಲೆಯಲ್ಲಿ ಸೋಮವಾರದಿಂದ 1 ತಿಂಗಳ ಕಾಲ ಕಾಲುಬಾಯಿ ಜ್ವರದ ಲಸಿಕಾ ಅಭಿಯಾನ ಆರಂಭಿಸಿದ್ದು, ಜಿಲ್ಲೆಯಲ್ಲಿ 5.15 ಲಕ್ಷ ಜಾನುವಾರುಗಳಿಗೆ ಲಸಿಕೆ ಹಾಕುವ ಗುರಿ ಹೊಂದಲಾಗಿದೆ.

ಮೈಸೂರಿನ ಧನ್ವಂತ್ರಿ ರಸ್ತೆಯಲ್ಲಿರುವ ಪಶು ಆಸ್ಪತ್ರೆ ಆವರಣದಲ್ಲಿ ಸೋಮವಾರ ಬೆಳಗ್ಗೆ 5ನೇ ಸುತ್ತಿನ ಕಾಲುಬಾಯಿ ಜ್ವರದ ರಾಷ್ಟ್ರೀಯ ಅಭಿಯಾನಕ್ಕೆ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಉಪನಿರ್ದೇಶಕ ಡಾ.ನಾಗರಾಜು ಜಾನುವಾರುಗಳಿಗೆ ಪೂಜೆ ಸಲ್ಲಿಸಿ, ಕಾಲುಬಾಯಿ ಜ್ವರ ಲಸಿಕೆ ಹಾಕುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ಜಾನುವಾರುಗಳನ್ನು ಕಾಡುವ ಕಾಲುಬಾಯಿ ಜ್ವರದಿಂದ ರಕ್ಷಿಸಲು ಪಶುಪಾಲನಾ ಹಾಗೂ ಪಶುವೈದ್ಯಕೀಯ ಸೇವಾ ಇಲಾಖೆ ಏ.1ರಿಂದ 30ರವರೆಗೆ ಮೈಸೂರು ನಗರ ಸೇರಿದಂತೆ ಜಿಲ್ಲೆಯಲ್ಲಿ ವಿಶೇಷ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಜಿಲ್ಲೆಯಲ್ಲಿ 194 ಪಶು ಆಸ್ಪತ್ರೆಗಳಿದ್ದು, ಅವುಗಳಲ್ಲಿ ಸೇವೆ ಸಲ್ಲಿಸುವ ಇಲಾಖೆ ಪಶುವೈದ್ಯರು, ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. 6 ತಿಂಗಳು ಮೇಲ್ಪಟ್ಟ ಜಾನುವಾರುಗಳಿಗೆ ಲಸಿಕಾ ಹಾಕಲಾಗುವುದು. ಜಿಲ್ಲೆಯಲ್ಲಿ 5.15 ಲಕ್ಷ ಜಾನುವಾರುಗಳಿದ್ದು, ಎರಡು ಪಶು ವೈದ್ಯಕೀಯ ಆಸ್ಪತ್ರೆಗಳ ಸಿಬ್ಬಂದಿ ಒಳಗೊಂಡ ತಂಡವನ್ನು ರಚಿಸಲಾಗಿದೆ. ಈ ತಂಡ ಆಯಾ ಪಶುವೈದ್ಯಕೀಯ ಆಸ್ಪತ್ರೆ ವ್ಯಾಪ್ತಿಗೆ ಸೇರುವ ಗ್ರಾಮಗಳಿಗೆ ತೆರಳಿ ಲಸಿಕೆ ಹಾಕಲಿದೆ ಎಂದು.

ಬಿಸಿಲಿನ ಬೇಗೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಪ್ರತಿದಿನ ಬೆಳಗ್ಗೆ 6 ಗಂಟೆಯಿಂದ 9 ಗಂಟೆವರೆಗೆ ಲಸಿಕೆ ಹಾಕಿ, ನಂತರ ಪಶು ಆಸ್ಪತ್ರೆಗಳಲ್ಲಿ ಕರ್ತವ್ಯ ಮುಂದುವರೆಸುವಂತೆ ತಿಳಿಸಲಾಗಿದೆ. ಪ್ರತಿಯೊಬ್ಬ ವೈದ್ಯರಿಗೂ ದಿನಕ್ಕೆ ತಲಾ 100 ಜಾನುವಾರುಗಳಿಗೆ ಲಸಿಕೆ ಹಾಕುವ ಗುರಿ ನೀಡಲಾಗಿದೆ ಎಂದರು.

ರೈತರು ಹಾಗೂ ಗೋಪಾಲಕರು ತಮ್ಮ ಜಾನುವಾರುಗಳನ್ನು ಕಾಲುಬಾಯಿ ಜ್ವರದಿಂದ ರಕ್ಷಿಸಿಕೊಳ್ಳಲು, ತಪ್ಪದೆ ಲಸಿಕೆ ಹಾಕಿಸಿಕೊಳ್ಳಬೇಕು. ರೈತರು ಹಾಗೂ ಜಾನುವಾರುಗಳಿಗೆ ಆಗುವ ತೊಂದರೆ ತಪ್ಪಿಸಲು ಪಶುಪಾಲನಾ ಇಲಾಖೆ ವತಿಯಿಂದಲೇ ಮನೆ ಬಾಗಿಲಿಗೆ ಸಿಬ್ಬಂದಿಗಳನ್ನು ಕಳುಹಿಸುತ್ತಿದೆ. ಈ ಅವಕಾಶವನ್ನು ಬಳಸಿಕೊಂಡು ತಮ್ಮ ಜಾನುವಾರುಗಳನ್ನು ರಕ್ಷಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ರಾಜ್ಯ ವಲಯದ ಜಂಟಿ ನಿರ್ದೇಶಕ ಡಾ.ಸುರೇಶ, ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಡಾ.ವಿಜಯಕುಮಾರ, ಕೆಎಂಎಫ್ ವ್ಯವಸ್ಥಾಪಕ ಕರಿಬಸವರಾಜು, ಪಶುಪಾಲನಾ–ಪಶುವೈದ್ಯಕೀಯ ಸೇವಾ ಇಲಾಖೆ ಸಹಾಯಕ ನಿರ್ದೇಶಕ ಡಾ.ಮ.ಪು. ಪೂರ್ಣಾನಂದ, ಜಾನುವಾರು ಅಭಿವೃದ್ಧಿ ಅಧಿಕಾರಿ ವೆಂಕಟೇಶ, ಸಿಬ್ಬಂದಿಗಳಾದ ಮೀರ್ ಹಸನ್ ಬಾಕ್ರಿ, ಚಿಕ್ಕತಾಯಮ್ಮ, ಅಫ್ಸಾನ ಖಾನಂ, ವೇಣುಗೋಪಾಲ, ಪ್ರವೀಣ್ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ಧನ್ವಂತ್ರಿ ರಸ್ತೆಯಲ್ಲಿರುವ ಪಶು ಆಸ್ಪತ್ರೆ ಆವರಣದಲ್ಲಿ ಸೋಮವಾರ ಜಾನುವಾರುಗಳಿಗೆ ಕಾಲುಬಾಯಿ ಜ್ವರ ತಡೆಗೆ ಲಸಿಕೆ ಹಾಕುವ ರಾಷ್ಟ್ರೀಯ ಅಭಿಯಾನಕ್ಕೆ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಉಪನಿರ್ದೇಶಕ ಡಾ.ನಾಗರಾಜು ಚಾಲನೆ ನೀಡಿದರು.

ಜಾನುವಾರುಗಳ 4ರಿಂದ 5 ತಿಂಗಳ ಕರುಗಳಿಗೆ ವ್ಯಾಕ್ಸಿನ್ ನೀಡಿ, ಒಂದು ತಿಂಗಳ ನಂತರ ಬೂಸ್ಟರ್ ಡೋಸ್ ನೀಡುತ್ತೇವೆ. ಆದರೆ ಕಾಲುಬಾಯಿ ಜ್ವರದಿಂದ ಜಾನುವಾರುಗಳನ್ನು ರಕ್ಷಣೆ ಮಾಡಲು ನೀಡುವ ಚುಚ್ಚುಮದ್ದನ್ನು(ಲಸಿಕೆ) ಆರು ತಿಂಗಳ ಮೇಲ್ಪಟ್ಟ ಜಾನುವಾರುಗಳಿಗೆ ನೀಡಲಾಗುತ್ತದೆ. ಮೈಸೂರು ತಾಲೂಕಿನಲ್ಲಿ 65 ಸಾವಿರ ಜಾನುವಾರುಗಳಿಗೆ ಲಸಿಕೆ ಹಾಕಲಾಗುತ್ತಿದೆ. ಈಗಾಗಲೇ ಅಭಿಯಾನ ಯಶಸ್ವಿಗೆ ಸಿದ್ಧತೆ ಮಾಡಿಕೊಳ್ಳಲಾಗಿದ್ದು, ಪಶುಪಾಲಕರ, ರೈತರ ಸಹಕಾರ ಪಡೆಯಲಾಗುತ್ತಿದೆ.

– ಡಾ.ಮ.ಪು. ಪೂರ್ಣಾನಂದ, ಸಹಾಯಕ ನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ

ರೇಬಿಸ್ ಚುಚ್ಚುಮದ್ದು

ಕಾಲುಬಾಯಿ ಜ್ವರದ ಲಸಿಕೆ ಹಾಕಲು ಗ್ರಾಮೀಣ ಪ್ರದೇಶಗಳಿಗೆ ಹೋಗುವ ಪಶುವೈದ್ಯರ ತಂಡ, ಮನೆಗಳಲ್ಲಿ ಸಾಕಿರುವ ದೇಸಿ ತಳಿ (ಬೀದಿನಾಯಿ) ಶ್ವಾನಗಳಿಗೆ ರೇಬಿಸ್ ಲಸಿಕೆಯನ್ನು ಉಚಿತವಾಗಿ ಹಾಕುವುದರಿಂದ ನಾಯಿ ಸಾಕಿರುವವರು ರೇಬಿಸ್ ಚುಚ್ಚುಮದ್ದು ಹಾಕಿಸುವಂತೆ ಮನವಿ ಮಾಡಿದರು.

ಅಯೋಧ್ಯೆ ಶ್ರೀರಾಮಮಂದಿರ ಉಳಿಸುವ ದೊಡ್ಡ ಸವಾಲು ನಮ್ಮ ಮುಂದಿದೆ

ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ



ಮೈಸೂರಿನ ಶಾರದಾ ವಿಲಾಸ ಶತಮಾನೋತ್ಸವ ಭವನದಲ್ಲಿ ಸೋಮವಾರ ಪೇಜಾವರ ಶ್ರೀಗಳನ್ನು ಅಭಿನಂದಿಸಲಾಯಿತು.

ಮೈಸೂರು,ಏ.1(ಪಿಎಂ)– ಅಯೋಧ್ಯೆಯಲ್ಲಿ ಶ್ರೀರಾಮಮಂದಿರ ನಿರ್ಮಾಣಗೊಂಡು ಸಂಭ್ರಮದಲ್ಲಿದ್ದೇವೆ. ಆದರೆ ಈಗ ಮಂದಿರವನ್ನು ಉಳಿಸುವ ದೊಡ್ಡ ಸವಾಲು ಇದೆ ಎಂದು ಅಯೋಧ್ಯ ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ನ ಟ್ರಸಿಗಳೂ ಆದ ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಹೇಳಿದರು.

ಮೈಸೂರು ಕೃಷ್ಣಮೂರ್ತಿಪುರಂನ ಶಾರದಾವಿಲಾಸ ಶತಮಾನೋತ್ಸವ ಭವನದಲ್ಲಿ ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ ವತಿಯಿಂದ ಸೋಮವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದರು.

ಅಯೋಧ್ಯೆಯಲ್ಲಿ ಶ್ರೀರಾಮಮಂದಿರ ನಿರ್ಮಾಣವಾಗಿ ರಾಮ ದೇವರ ಪ್ರಾಣ ಪ್ರತಿಷ್ಠಾಪನೆಯೂ ಆಗಿದೆ. ಇದರಿಂದ ಸಂಭ್ರಮದಲ್ಲಿಯೂ ಇದ್ದೇವೆ. ವಾಸ್ತವದಲ್ಲಿ ಇಷ್ಟಕ್ಕೆ ನಾವು ಸಂಭ್ರಮ ಪಟ್ಟುಕೊಳ್ಳಬಾರದು. ನಮ್ಮ ಜವಾಬ್ದಾರಿ ಹಿಂದೆಗಿಂತಲೂ ಮುಂದೆ ಹೆಚ್ಚಿದೆ. ಮಂದಿರ ನಿರ್ಮಾಣ ದೊಡ್ಡ ಸವಾಲಾಗಿತ್ತು. ಮಂದಿರವನ್ನು ಮಂದಿರವಾಗಿಯೇ ಉಳಿಸುವ ಮತ್ತೊಂದು ದೊಡ್ಡ ಸವಾಲು ನಮ್ಮ ಮುಂದಿದೆ. ಮಂದಿರ ನಿರ್ಮಾಣಕ್ಕೆ 500 ವರ್ಷಗಳೇ ಬೇಕಾಯಿತು. ಮಂದಿರವನ್ನು ಉಳಿಸಲು ನಮ್ಮ ನಿರಂತರ ಶ್ರಮ ಅಗತ್ಯ ಎಂದು ತಿಳಿಸಿದರು.

ನಮ್ಮಲ್ಲಿ ಇಂದು ಶ್ರೀರಾಮನ ಕುರಿತಾಗಿ ಭಕ್ತಿ–ಭಾವ, ಅಭಿಮಾನ ಉಳಿದಿದೆ. ಇದು ನಮ್ಮ ಹಿರಿಯರು ಕೊಟ್ಟ ಸಂಸ್ಕಾರ. ಹಾಡು, ಸಂಗೀತ, ನಾಟಕ, ಕಾವ್ಯದ ಮೂಲಕ ರಾಮನ ನೆನಪನ್ನು ಉಳಿಸಿಕೊಟ್ಟಿದ್ದಾರೆ. ಆ ರಾಮನ ನೆನಪು ನಮ್ಮಲ್ಲೇ ಅಳಿದು ಹೋಗದೇ ಮುಂದಿನ ಸಂತತಿಗೂ ದಕ್ಕಬೇಕು. ಅದಾಗಬೇಕೆಂದರೆ ಪ್ರಯತ್ನ ಮಾಡಬೇಕಿರುವವರು ನಾವು. ಆದರೆ ಇಂದಿನ ಸನ್ನಿವೇಶ ಕಂಡಾಗ ಭಯ ಹುಟ್ಟುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ನೀವು ರಾಮಂದಿರ ಕಟ್ಟಿ ನಾವು ಅದನ್ನು ಕಿತ್ತು ಹಾಕುತ್ತೇವೆ ಎನ್ನುವ ಮಾತುಗಳನ್ನು ಬಹಿರಂಗವಾಗಿಯೇ ಕೇಳುತ್ತಿದ್ದೇವೆ. ಅದಕ್ಕೆ ಪ್ರತಿಯಾಗಿ ನಾವು ಎಷ್ಟು ಸಿದ್ಧರಾಗಿದ್ದೇವೆ ಎಂದು ನೋಡಿದರೆ ಏನೇನೂ ಇಲ್ಲ. ಅಷ್ಟೇ ಅಲ್ಲ ನಾವು ಹಿಂದೆ ಸರಿಯುತಿದ್ದೇವೆ. ನಮ್ಮ ಹಿರಿಯರು ನಮಗೆ ಸಂಸ್ಕಾರ ಕೊಟ್ಟಿದ್ದಾರೆ. ಆದರೆ ನಮ್ಮ ಮಕ್ಕಳಿಗೆ ನಾವೇನು ಕೊಟ್ಟೆವು ಎಂದು ಅವಲೋಕನ ಮಾಡಿಕೊಳ್ಳಬೇಕು ಎಂದರು.

ಸಂಸ್ಕಾರವು ನಮ್ಮ ಮಕ್ಕಳಿಗೆ ನಾಮಕರಣ ಮಾಡುವುದರಿಂದಲೇ ಪ್ರಾರಂಭವಾಗಬೇಕು. ನಮ್ಮ ಮಕ್ಕಳಿಗೆ ಯಾವ ಹೆಸರು ಇಡುತ್ತಿದ್ದೇವೆ. ಇಟ್ಟಿರುವ ಹೆಸರಿಗೆ ಏನು ಅರ್ಥವಿದೆ ಎಂದು ಅವಲೋಕನ ಮಾಡಿಕೊಳ್ಳಬೇಕಿದೆ. ಮಕ್ಕಳ ಹೆಸರನ್ನು ನಾವು ಕೂಗಿದಾಗಲೋ ಅಥವಾ ಮಕ್ಕಳೇ ಪರಸ್ಪರ ಕೂಗಿಕೊಳ್ಳುವಾಗಲೋ ದೇವರು, ಧರ್ಮ, ಮಹಾತ್ಮರು, ಸಂತರ ನೆನಪು ಬರಬೇಕು. ಆದರೆ ಆ ರೀತಿಯಲ್ಲಿ ಪರಿಸ್ಥಿತಿ ಇಂದು ಇದೆಯೇ ಎನ್ನುವ ಪ್ರಶ್ನೆ ಮೂಡುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ನಮ್ಮ ಮಕ್ಕಳಿಗೆ ಒಳ್ಳೆಯ ನಾಮಕರಣ ಮಾಡುವ ಸಂಕಲ್ಪ ಮಾಡಬೇಕಿದೆ. ನಮ್ಮ ಮಕ್ಕಳು ನಮ್ಮ ಸಂಸ್ಕೃತಿ ತೊರೆದು ಯಾವುದೋ ಧರ್ಮೀಯರ ಆಸೆ–ಆಮಿಷಕ್ಕೂ, ಬಲತ್ಕಾರಕ್ಕೂ ಒಳಗಾಗಿ ನಮ್ಮತನವನ್ನು ತೊರೆಯುತ್ತಿದ್ದಾರೆ. ಅವರು ಏನೇನೋ ಹೆಸರು ಇಟ್ಟುಕೊಳ್ಳುತ್ತಿದ್ದಾರೆ. ಹೀಗೆ ಗುಳೆ ಹೋದ ನಮ್ಮ ಮಕ್ಕಳ ಕೈಯಿಂದಲೇ ನಮ್ಮ ಮಂದಿರಕ್ಕೆ ಹಾನಿಯಾದರೆ ಏನೂ ಅಚ್ಚರಿ ಇಲ್ಲ. ಒಂದು ವೇಳೆ ಈ ರೀತಿಯಾದರೆ ನಮ್ಮ ಹಿರಿಯರು ಪಟ್ಟ ಶ್ರಮಕ್ಕೆ ನಾವೇನು ಬೆಲೆ ಕೊಟ್ಟಂತೆ ಆಯಿತು ಎಂದು ಯೋಚನೆ ಮಾಡಬೇಕು. ಈಗಾಗಲೇ ಹೆಸರು ಇಟ್ಟಿದ್ದರೂ ಕಾಲ ಮಿಂಚಿಲ್ಲ. ಕೋರ್ಟ್ ಮೂಲಕ ಹೆಸರು ಬದಲಿಸಿಕೊಳ್ಳಲು ಸಾಧ್ಯವಿದೆ ಎಂದು ತಿಳಿಸಿದರು.

ಇದೇ ವೇಳೆ ಅಯೋಧ್ಯೆ ಬಾಲರಾಮನ ಮೂರ್ತಿಯ ಶಿಲ್ಪಿ ಅರುಣ್ ಯೋಗಿರಾಜ್ ಅವರನ್ನು ಶ್ರೀಗಳು ಸನ್ಮಾನಿಸಿದರು. ಅಲ್ಲದೆ, ಅಯೋಧ್ಯೆಯಲ್ಲಿ ರಾಮದೇವರ ಸನ್ನಿಧಾನದಲ್ಲಿ ಸುಧಾಮಂಗಳ ಮಾಡಿದ 14 ಯುವ ವಿದ್ವಾಂಸರನ್ನೂ ಶ್ರೀಗಳು ಸನ್ಮಾನಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ಅಯೋಧ್ಯೆ ರಾಮದೇವರ ಅನುಗ್ರಹಪೂರ್ಣ ಫಲಮಂತ್ರಾಕ್ಷತೆಯನ್ನು ಶ್ರೀಗಳು ಭಕ್ತರಿಗೆ ವಿತರಣೆ ಮಾಡಿದರು. ಪ್ರಾರಂಭದಲ್ಲಿ ಯುವ ಗಾಯಕರಿಂದ ದಾಸಲಹರಿ ಕಾರ್ಯಕ್ರಮ ನಡೆಯಿತು. ಮುಖಂಡರಾದ ಜಯರಾಮ್‌ಭಟ್, ಕೆ.ರಘುರಾಮ್ ವಾಜಪೇಯಿ, ಸಮಿತಿಯ ಎಸ್.ರವಿಕುಮಾರ್ ಮತ್ತಿತರರು ವೇದಿಕೆಯಲ್ಲಿದ್ದರು. ಅಪಾರ ಸಂಖ್ಯೆಯಲ್ಲಿ ಭಕ್ತ ಸಮೂಹ ಪಾಲ್ಗೊಂಡಿತ್ತು.

ಶ್ರೀಗಳಿಗೆ ವಿಶೇಷ ರೀತಿಯಲ್ಲಿ ಭಕ್ತಿಪೂರ್ವಕ ಅಭಿನಂದನೆ

ಅಯೋಧ್ಯೆ ಶ್ರೀರಾಮಮಂದಿರದಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ನಂತರದಲ್ಲಿ 48 ದಿನಗಳ ಕಾಲ ಮಂಡಲೋತ್ಸವ ಹಾಗೂ ಮಂಗಳೋತ್ಸವ ಕಾರ್ಯಕ್ರಮಗಳನ್ನು ಕೈಗೊಂಡು ಪ್ರತಿದಿನ ವಿವಿಧ ಪೂಜಾ ವಿಧಿವಿಧಾನಗಳನ್ನು ನೆರವೇರಿಸಿ ಬಂದಿರುವ ಹಿನ್ನೆಲೆಯಲ್ಲಿ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಅವರನ್ನು ವಿಶೇಷ ಹಾಗೂ ವಿನೂತನ ರೀತಿಯಲ್ಲಿ ಅಭಿನಂದಿಸಲಾಯಿತು. ಉಯ್ಯಾಲೆಯಲ್ಲಿ ಶ್ರೀಗಳನ್ನು ಕೂರಿಸಿ ಗೌರವ ಸಮರ್ಪಿಸಿ ಪುಷ್ಪವೃಷ್ಟಿ ಸುರಿಸಿ ಭಕ್ತಿ ಪರಾಕಾಷ್ಟೆ ಮೆರೆಯಲಾಯಿತು.

ಕಂಪ್ಯೂಟರ್ ತರಬೇತಿ

ಮೈಸೂರು, ಏ. 1–ಸುತ್ತೂರು ಜೆಎಸ್‌ಎಸ್ ಸಂಸ್ಥೆಯಲ್ಲಿನ ಗಣಕಯಂತ್ರ ವಿಭಾಗದ ವತಿ ಯಿಂದ ಬೇಸಿಕ್ಸ್ ಆಫ್ ಕಂಪ್ಯೂಟರ್ಸ್ ವಿಷಯ ವಾಗಿ ಗ್ರಾಮೀಣ ವಿದ್ಯಾವಂತ ಯುವಕ, ಯುವತಿಯರಿಗೆ 30 ದಿನಗಳ ತರಬೇತಿಯನ್ನು ಏರ್ಪಡಿಸಲಾಗಿದೆ. ತರಗತಿಗಳು ಏ.12ರಿಂದ ಆರಂಭವಾಗಲಿದೆ. ಕನಿಷ್ಠ ಎಂಟನೆಯ ತರಗತಿ ವಿದ್ಯಾರ್ಹತೆ ಹೊಂದಿರುವ ಆಸಕ್ತ ಅಭ್ಯರ್ಥಿಗಳು ತಮ್ಮ ಹೆಸರುಗಳನ್ನು ನೋಂದಾಯಿಸಿ ಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 08221–232040, 9886389574, 9740125720.


ಕ್ಯಾನ್ಸರ್ ಉಚಿತ ತಪಾಸಣಾ ಶಿಬಿರ

ಮೈಸೂರು,ಏ.1–ಮೈಸೂರಿನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಏ.4ರಂದು ಬೆಳಗ್ಗೆ 10ರಿಂದ ರಾತ್ರಿ 8 ಗಂಟೆಯವರೆಗೆ ಕ್ಯಾನ್ಸರ್ ಉಚಿತ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ದೂ. 0821–4259259 ಸಂಪರ್ಕಿಸಬಹುದು.



ಡಿ.ಬನುಮಯ್ಯ ವಾಣಿಜ್ಯ ಮತ್ತು ಕಲಾ ಕಾಲೇಜಿನ ನೂತನ ಪ್ರಾಂಶುಪಾಲರಾದ ಪ್ರೊ.ಕೆ.ಮೂರ್ತಿ ಅವರನ್ನು ಸಂಸ್ಥೆ ಅಧ್ಯಕ್ಷ ಡಾ.ಜಯದೇವ ಅಭಿನಂದಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

2.04.2024 ಮಂಗಳವಾರ, ಮಳೆ ನಕ್ಷತ್ರ: ರೇವತಿ 31.03.2024ರಿಂದ 12.04.2024

ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಪಾಲ್ಗುಣ ಮಾಸ, ಕೃಷ್ಣ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಪೂಷಾ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ.ವಿ.ರಂಗನಾಥ್, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಕರುನಾಡ ಕಬ್ಬಿಗರು, ಪ್ರಸ್ತುತಿ–ಡಾ. ಮೈಸೂರು ಉಮೇಶ್, 6.40 ಪದಸಂಸ್ಕೃತಿ, ಪ್ರಸ್ತುತಿ–ಕೆ.ಎಲ್. ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ –ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್.ಎಸ್., 8.30 ಪರಾಗ–ಬೇಸಾಯದ ಬದುಕು ಸರಾಗ, ಬಾನುಲಿ ಸರಣಿ–ಪ್ರಸ್ತುತಿ–ಎನ್.ಕೇಶವಮೂರ್ತಿ, 8.45 ಕರೆಗೊಂದು ಗೀತೆ, 10.00 ಎನ್.ನಂಜುಂಡಸ್ವಾಮಿ–ಹಾಡುಗಾರಿಕೆ, 11.00 ಮಿಶ್ರ ಮಾಧುರ್ಯ **ಮಧ್ಯಾಹ್ನ:** 12.05ವನಿತಾ ವಿಹಾರ–ಉಪವಾಸದ ದಿನಗಳು ಹಾಗೂ ರಂಜಾನ್ ಸಂಭ್ರಮ–ಒಂದು ಮಾತುಕತೆ. ಭಾಗವಹಿಸುವವರು ಲೇಖಕಿ ಡಾ.ಶಾಫಿಯಾ ಫರೀನ್ ಹಾಗೂ ಡಾ.ಸರ್ತಾಜ್, 12.30 ದೇವರನಾಮ–ಬಿ.ಎನ್.ಮಂಜುಳಾ, 1.00 ಮತ ಹಾಕೋಣ ಬನ್ನಿ–ಮತದಾನ ಜಾಗೃತಿ ಕಾರ್ಯಕ್ರಮ, 1.20 ಭಾವಗೀತೆಗಳು–ವೀಣಾ ಶ್ರೀನಿವಾಸ್, 3.00 ಎಂ.ಎಸ್.ಸುಬ್ಬಲಕ್ಷ್ಮಿ –ಹಾಡುಗಾರಿಕೆ, 4.00 ಕಥಾ ಕಾಲಕ್ಷೇಪ, ವಾಲಿಮೋಕ್ಷ, ಪ್ರಸ್ತುತಿ–ಸಂತ ಕೇಶವದಾಸರು, 6.50 ಕೃಷಿರಂಗ–ಹಿಪ್ಪುನೇರಳೆ ಕೃಷಿಯಲ್ಲಿ ಮಣ್ಣಿನ ಫಲವತ್ತತೆ ನಿರ್ವಹಣೆ ಕುರಿತು ಡಾ.ರವೀಂದ್ರ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಎನ್.ಕೇಶವಮೂರ್ತಿ, 9.30 ಲೋಕ್ ಪ್ರಸಾರಕ್ ಕೆ ಸಾಥ್, 10.00 ಗಮಕ ವ್ಯಾಖ್ಯಾನ, ವಾಚನ–ಹೆಚ್.ಆರ್.ಕೇಶವಮೂರ್ತಿ, ವ್ಯಾಖ್ಯಾನ–ಮಾರ್ಕಾಂಡೇಯ ಅವಧಾನಿ, 10.30 ಸವಿನೆನಪು

- **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ ಸಂಜೆ 7 ರವರೆಗೆ
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** 'ವಸಂತ ನಮನ' ದೇಹ ಶುದ್ಧಿ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರಂ, ಆಲನಹಳ್ಳಿ, ಬೆಳಗ್ಗೆಯಿಂದ
- **ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ :** ಪದವೀಧರರ ದಿನಾಚರಣೆ, ಮುಖ್ಯ ಅತಿಥಿಗಳು : ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಸ್ಕೂಲ್ ಆಫ್ ಆಡಿಯೋ ಅಂಡ್ ಸ್ಪೀಚ್ ಲಾಂಗ್ವೇಜ್ ಪೆಥಾಲಜಿ ಪ್ರಿನ್ಸಿಪಾಲ್ ಡಾ. ಸಿ.ಎಸ್. ವನಜಾ, ಅಧ್ಯಕ್ಷತೆ : ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ನಿರ್ದೇಶಕರಾದ ಡಾ. ಎಂ. ಪುಷ್ಪಾವತಿ, ಸ್ಥಳ: ಸೆಮಿನಾರ್ ಹಾಲ್, ನಾಲೆಡ್ಜ್ ಪಾರ್ಕ್, ಆಯಿಷ್, ಬೆಳಗ್ಗೆ 10ಕ್ಕೆ.
- **ಮಹಾರಾಜ ಕಾಲೇಜು, ಪಠ್ಯೇತರ ಚಟುವಟಿಕೆಗಳ ಸಮಿತಿ :** ಶ್ರೀಮತಿ ಪದ್ಮಜಾ ಪ್ರಸಾದ್ ಸ್ಮಾರಕ ಅಂತರ ಕಾಲೇಜು ಸಂಗೀತ ಸ್ಪರ್ಧೆ, ಉದ್ಘಾಟನೆ : ಪಿಪಿಎಂಎಫ್ ಮ್ಯಾನೇಜಿಂಗ್ ಟ್ರಸ್ಟಿ ಎನ್.ಎನ್. ಪ್ರಸಾದ್, ಮುಖ್ಯ ಅತಿಥಿಗಳು : ವಯೋಲಿನ್ ವಾದಕ ಪ್ರೊ. ಮೈಸೂರು ಮಂಜುನಾಥ್, ಅಧ್ಯಕ್ಷತೆ : ಪ್ರಾಂಶುಪಾಲ ಪ್ರೊ. ಎಚ್. ಸೋಮಶೇಖರಪ್ಪ, ಉಪಸ್ಥಿತರು : ಆಡಳಿತಾಧಿಕಾರಿ ಪ್ರೊ.ವಿ. ಷಣ್ಮುಗಂ, ಸಂಚಾಲಕ ಪ್ರೊ. ಸಿ.ಇ. ಲೋಕೇಶ್, ಸ್ಥಳ: ಶತಮಾನೋತ್ಸವ ಭವನ, ಮಹಾರಾಜ ಕಾಲೇಜು, ಬೆಳಗ್ಗೆ 10.30ಕ್ಕೆ.
- **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್ :** ಬಿ.ಪಿ, ಶುಗರ್, ಬೊಜ್ಜು ನಿವಾರಣೆ, ಗ್ಯಾಸ್ಟ್ರಿಕ್, ಅಸಿಡಿಟಿ, ಅಸ್ತಮಾ, ಅಜೀರ್ಣತೆ, ಅಲರ್ಜಿ, ಹಸಿರು ನರ (ವೆರಿಕೋಸ್ ವೈನ್), ಬೆನ್ನು ನೋವು, ಸಯಾಟಿಕ್, ಸಂಧಿವಾತ, ಥೈರಾಯಿಡ್, ಮೊಣಕಾಲು ನೋವು ಇನ್ನಿತರ ಆರೋಗ್ಯ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಶ್ರೀ ಸತ್ಯನಾರಾಯಣ ಸನ್ನಿಧಿ, ಶ್ರೀ ಅಮೃತೇಶ್ವರ ದೇವಸ್ಥಾನ, ದೇವರಾಜ ಮೊಹಲ್ಲಾ, ಬೆಳಗ್ಗೆ 10.30ರಿಂದ
- **ಶ್ರೀ ನಟರಾಜ ಪ್ರತಿಷ್ಠಾನ, ಶರಣ ಜ್ಯೋತಿ ಪ್ರಸಾರಾಂಗ, ವಾತ್ಸಲ್ಯ ಶಿಕ್ಷಣ ಮಹಾವಿದ್ಯಾಲಯ :** ಸಿದ್ಧಗಂಗಾ ತ್ರಿವಿಧ ದಾಸೋಹಿ ಡಾ. ಶಿವಕುಮಾರಸ್ವಾಮಿಗಳವರ 117ನೇ ಜಯಂತ್ಯುತ್ಸವ, ಮಹಾ ಮಾನವತಾವಾದಿ ಬಸವಣ್ಣ ಕನ್ನಡ ಮತ್ತು ತೆಲುಗು ವಚನ ಚಿತ್ರ ದರ್ಶನ ಕೃತಿಗಳ ಬಿಡುಗಡೆ, ಸಾನ್ನಿಧ್ಯ : ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಕೃತಿಗಳ ಬಿಡುಗಡೆ : ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಆರ್.ವಿ.ಎಸ್. ಸುಂದರಂ, ನುಡಿನಮನ : ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್, ಕೃತಿಗಳನ್ನು ಕುರಿತು ಮಾತನಾಡುವವರು: ಹಿರಿಯ ಕಲಾವಿದ ಎಲ್.ಶಿವಲಿಂಗಪ್ಪ, ಅಧ್ಯಕ್ಷತೆ: ಶ್ರೀ ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಪ್ರೊ.ಎಸ್.ಶಿವರಾಜಪ್ಪ, ಸ್ಥಳ: ಶ್ರೀ ನಟರಾಜ ಸಭಾ ಭವನ, ಬೆಳಗ್ಗೆ 11ಕ್ಕೆ.
- **ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ, ದಕ್ಷಿಣಾಮ್ನಾಯಿ ಶಾರದಾ ಪೀಠ, ಶೃಂಗೇರಿ:** ಮೈಸೂರು ಅಭಿನವ ಶಂಕರಾಲಯದ ಶತಮಾನೋತ್ಸವ, ಬೆಳಗ್ಗೆ 9ಕ್ಕೆ ಶತಕೋಟಿ ರಾಮಶಾಸ್ತ್ರಿಗಳ ಸ್ಮಾರಕ ಶಾಸ್ತ್ರಸಭೆಯ ಪ್ರಾರಂಭ, ಬೆಳಗ್ಗೆ 10.30ಕ್ಕೆ ಸಾರ್ವಜನಿಕ ದರ್ಶನ ಪಾದಪೂಜೆ, ಭಿಕ್ಷಾವಂದನೆ, ಸಂಜೆ 4.30ಕ್ಕೆ ವಿವಿಧ ದೇವಾಲಯಗಳು ಹಾಗೂ ಸಂಘ ಸಂಸ್ಥೆಗಳಿಗೆ ಭೇಟಿ, ರಾತ್ರಿ 8.30 ರಿಂದ ಚಂದ್ರಮೌಳೇಶ್ವರ ಪೂಜೆ, ಸಂಜೆ 7 ರಿಂದ ವಿದ್ವಾನ್ ವಿ. ಕೃಷ್ಣಮೂರ್ತಿ ಮತ್ತು ತಂಡದವರಿಂದ ನಾದಸ್ವರ ವಾದನ, ಸ್ಥಳ:ಶ್ರೀ ವಿದ್ಯಾಶಂಕರ ನಿಲಯ ಕಲ್ಯಾಣ ಮಂಟಪದ ಆವರಣ.
- **ಮೈಸೂರು ವಿಶ್ವವಿದ್ಯಾನಿಲಯ, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನೆ ಹಾಗೂ ವಿಸ್ತರಣಾ ಕೇಂದ್ರ:** ಸಮಾಜ ವಿಜ್ಞಾನ ಸಂಶೋಧನಾ ವಿಧಾನಗಳು: ಪ್ರಸ್ತುತ ಪ್ರವೃತ್ತಿಗಳು ಮತ್ತು ಮುಂದಿನ ದಾರಿ ಕುರಿತು ಆರು ದಿನಗಳ ಕಾರ್ಯಾಗಾರ, ಬೆಳಗ್ಗೆ 10ಕ್ಕೆ ಗೋಷ್ಠಿ–4, ವಿಷಯ: ಸಮಾಜ ವಿಜ್ಞಾನ ಸಂಶೋಧನೆಯ ಸಾಹಿತ್ಯ, ಅಧ್ಯಯನ ಮತ್ತು ವಿಮರ್ಶೆ, ಉಪಸ್ಥಿತರು: ಸಂಸ್ಕೃತಿ ಚಿಂತಕ ಪ್ರೊ.ರಹಮತ್ ತರೀಕೆರೆ; ಬೆಳಗ್ಗೆ 11.45ಕ್ಕೆ ಗೋಷ್ಠಿ–5, ವಿಷಯ: ಸಮಾಜ ವಿಜ್ಞಾನ ಸಂಶೋಧನೆಯಲ್ಲಿ ಸೈದ್ಧಾಂತಿಕ ದೃಷ್ಟಿಕೋನ, ಉಪಸ್ಥಿತರು: ರಾಷ್ಟ್ರೀಯ ಸಂಚಾಲಕ ಡಾ.ಸಿ.ಲಕ್ಷ್ಮಣನ್, ಮಧ್ಯಾಹ್ನ 2ಕ್ಕೆ ಗೋಷ್ಠಿ–6, ವಿಷಯ: ಸಮಾಜ ವಿಜ್ಞಾನ ಸಂಶೋಧನೆಯಲ್ಲಿ ಸುಧಾರಿತ ಉಪಕರಣಗಳು ಮತ್ತು ತಂತ್ರಗಳ ಬಳಕೆ, ಉಪಸ್ಥಿತರು: ಸಂಖ್ಯಾಶಾಸ್ತ್ರೀಯ ಗುಣಮಟ್ಟ ನಿಯಂತ್ರಣ ಡಾ.ಜಗದೀಶ್, ಮಧ್ಯಾಹ್ನ 3.30ಕ್ಕೆ ಗೋಷ್ಠಿ–7, ವಿಷಯ: ಸಮಾಜ ವಿಜ್ಞಾನ ಸಂಶೋಧನೆಯಲ್ಲಿ ಮಾಹಿತಿಯ ಮೂಲಗಳು, ಉಪಸ್ಥಿತರು: ವಿಶ್ರಾಂತ ಗ್ರಂಥಪಾಲಕ ಡಾ. ಸಿ.ಪಿ. ರಾಮಶೇಷ್, ಸ್ಥಳ: ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನೆ ಹಾಗೂ ವಿಸ್ತರಣಾ ಕೇಂದ್ರ, ಮಾನಸಗಂಗೋತ್ರಿ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಏಪ್ರಿಲ್ 2 ಮಂಗಳವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 344 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ತಿಹಾರ್ ಜೈಲುಪಾಲಾದ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ 15 ದಿನ ನ್ಯಾಯಾಂಗ ಬಂಧನ



ನವದೆಹಲಿ: ರದ್ದಾಗಿರುವ ದೆಹಲಿ ಅಬಕಾರಿ ನೀತಿಗೆ ಸಂಬಂಧಿಸಿದ ಮನಿ ಲಾಂಡರಿಂಗ್ ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರನ್ನು ಸೋಮವಾರ ದೆಹಲಿ ನ್ಯಾಯಾಲಯ 15 ದಿನಗಳ ಕಾಲ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದು, ದೆಹಲಿ ಮುಖ್ಯಮಂತ್ರಿ ಈಗ ತಿಹಾರ್ ಜೈಲು ಪಾಲಾಗಿದ್ದಾರೆ.

ಜಾರಿ ನಿರ್ದೇಶನಾಲಯದ ಕಸ್ಟಡಿ ಅವಧಿ ಇಂದು ಮುಗಿದಿದ್ದು, ಆರೋಪಿಯನ್ನು ರೋಸ್ ಅವೆನ್ಯೂ ಕೋರ್ಟ್‌ಗೆ ಹಾಜರುಪಡಿಸಲಾಯಿತು. ಕೇಜ್ರಿವಾಲ್ ಅವರನ್ನು ವಿಚಾರಣೆ ನಡೆಸಿದ ವಿಶೇಷ ನ್ಯಾಯಾಧೀಶರಾದ ಕಾವೇರಿ ಬವೇಜಾ ಅವರು, ಆರೋಪಿಯನ್ನು ಏಪ್ರಿಲ್ 15ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದರು. ನಂತರ ಕೇಜ್ರಿವಾಲ್ ಅವರನ್ನು ತಿಹಾರ್ ಜೈಲಿಗೆ ಕಳಿಸುವ ಮುನ್ನ ವೈದ್ಯಕೀಯ ಪರೀಕ್ಷೆಗೊಳಪಡಿಸಲಾಯಿತು. ಈಗ ಅವರನ್ನು ಪ್ರತ್ಯೇಕ ● 6ನೇ ಪುಟಕ್ಕೆ

ರಾಜ್ಯದಲ್ಲಿ ವಿದ್ಯುತ್ ದರ ಪ್ರತಿ ಯುನಿಟ್‌ಗೆ 1.10 ರೂ. ಕಡಿತ



ಬೆಂಗಳೂರು: ಲೋಕಸಭೆ ಚುನಾವಣೆ ಸಮಯದಲ್ಲಿ ಕರ್ನಾಟಕ ರಾಜ್ಯ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (KERC)ಎಲ್ಲ ವರ್ಗದ ವಿದ್ಯುತ್ ಬಳಕೆದಾರರಿಗೆ ದರ ಇಳಿಕೆ ಮಾಡಿ ಸೋಮವಾರ ಆದೇಶ ಹೊರಡಿಸಿದ್ದು, 100 ಯುನಿಟ್‌ಗಿಂತ ಹೆಚ್ಚು ಬಳಸುವವರಿಗೆ ಪ್ರತಿ ಯುನಿಟ್‌ಗೆ 1.10 ರೂ. ಕಡಿಮೆ ಮಾಡಲಾಗಿದೆ. ಈ ಮೂಲಕ 15 ವರ್ಷಗಳ ಬಳಿಕ ರಾಜ್ಯದಲ್ಲಿ ವಿದ್ಯುತ್ ದರ ಇಳಿಕೆಯಾಗಿದೆ.

2024–25ನೇ ಸಾಲಿಗೆ ಅನ್ವಯವಾಗುವಂತೆ ಈ ಪರಿಷ್ಕೃತ ದರ ಇಂದಿನಿಂದಲೇ(ಏಪ್ರಿಲ್ 01) ಜಾರಿಗೆ ಬರಲಿದೆ. ಎಲ್ಲಾ ಎಸ್ಕಾಂಗಳಿಗೂ ಏಕರೂಪದ ಗೃಹಬಳಕೆ ವಿದ್ಯುತ್ ದರ ನಿಗದಿ ಮಾಡಿದೆ. ಮೊದಲು 100ಕ್ಕಿಂತ ಹೆಚ್ಚು ಯುನಿಟ್ ವಿದ್ಯುತ್ ಬಳಕೆ ಮಾಡುವವರಿಗೆ ● 6ನೇ ಪುಟಕ್ಕೆ

ವರುಣ ಕ್ಷೇತ್ರದಲ್ಲಿ ಸುನೀಲ್ ಬೋಸ್‌ಗೆ 60 ಸಾವಿರ ಲೀಡ್ ಕೊಟ್ಟರೆ

ನನ್ನನ್ನು ಯಾರೂ ಮುಟ್ಟೋಕಾಗಲ್ಲ...!!!

● ಸ್ವ ಕ್ಷೇತ್ರದಲ್ಲಿ ಮುಖ್ಯಮಂತ್ರಿ ಆರ್ಭಟ ● ನಿಮ್ಮಿಂದ ನಾನು ಎರಡು ಬಾರಿ ಮುಖ್ಯಮಂತ್ರಿ ಆಗಿದ್ದೇನೆ; ಈಗ ನಾನು ಇರ್ಬೇಕೋ ಬೇಡ್ವೋ...! ● ತಮ್ಮ ಗದ್ದುಗೆ ವಿಚಾರದಲ್ಲಿ ತಮ್ಮದೇ ಪಕ್ಷದ ನಾಯಕರಿಗೆ ಪರೋಕ್ಷ ಸಂದೇಶ!

ನಂಜನಗೂಡು, ಏ. 1– ತವರು ಜಿಲ್ಲೆಯಲ್ಲಿ ಬಿರುಸಿನ ಚುನಾವಣಾ ಪ್ರಚಾರ ಆರಂಭಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ವರುಣ ಕ್ಷೇತ್ರದಲ್ಲಿ ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್‌ಗೆ 60 ಸಾವಿರ ಲೀಡ್ ಕೊಟ್ಟರೆ ನನ್ನನ್ನು ಯಾರೂ ಮುಟ್ಟೋಕೇ ಆಗಲ್ಲ ಎಂದು ಅಬ್ಬರಿಸಿದರು.

ನಂಜನಗೂಡು ತಾಲೂಕು ಬಿಳಿಗೆರೆ ಬೋರೆಯಲ್ಲಿ ಸೋಮವಾರ ನಡೆದ ವರುಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರ ಬಹಿರಂಗ ಸಭೆಯಲ್ಲಿ ಮಾತನಾಡಿದ ಅವರು, ವರುಣ ನನ್ನ ಅದೃಷ್ಟದ ಕ್ಷೇತ್ರ, ನಿಮ್ಮಿಂದ ನಾನು ಎರಡು ಬಾರಿ ಮುಖ್ಯಮಂತ್ರಿಯಾಗಿದ್ದೇನೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ನನಗೆ 48 ಸಾವಿರ ಲೀಡ್ ಕೊಟ್ಟಿದ್ದಿರಿ. ಈಗ ಅದಕ್ಕಿಂತ ಹೆಚ್ಚು ಅಂದರೆ 60 ಸಾವಿರ ಲೀಡ್ ಕೊಡಬೇಕು. ಆಗ ನನ್ನನ್ನು ಯಾರೂ ಮುಟ್ಟೋಕೇ ಆಗಲ್ಲ. ನಾನು ಇರ್ಬೇಕೋ ಬೇಡ್ವೋ ಎಂದು ಕಾರ್ಯಕರ್ತರನ್ನು ಪ್ರಶ್ನಿಸಿದರು. ನಾನು ಬಸವಣ್ಣನವರ ಆದರ್ಶಗಳನ್ನು ಮೈಗೂಡಿಸಿಕೊಂಡು ಜೀವಿಸುತ್ತಿರುವ ಕಾರಣ ಅಸಮಾನತೆ ದೂರ ಮಾಡಿ ಆರ್ಥಿಕ ಶಕ್ತಿ ತುಂಬುವ ಸಲುವಾಗಿ 5 ಗ್ಯಾರಂಟಿ ಜಾರಿಗೊಳಿಸಿದ್ದೇನೆ. ಇದರ ಪರಿಣಾಮ 'ಗೃಹಲಕ್ಷ್ಮಿ' ಯೋಜನೆಯಡಿ 1.20 ಕೋಟಿ ಮಹಿಳೆಯರು ಯೋಜನೆ ಫಲ ಪಡೆದಿದ್ದಾರೆ. 'ಅನ್ನಭಾಗ್ಯ' ಯೋಜನೆಯಡಿ 1.29 ಕೋಟಿ ಫಲಾನುಭವಿಗಳಿದ್ದಾರೆ. ಇದರ ಜೊತೆಗೆ ಬಸವಣ್ಣನವರನ್ನು 'ವಿಶ್ವಗುರು ಸಾಂಸ್ಕೃತಿಕ ನಾಯಕ' ಎಂದು ಘೋಷಣೆ ಮಾಡಿ ಸರ್ಕಾರಿ ಕಚೇರಿಗಳಲ್ಲಿ ಅವರ ಭಾವಚಿತ್ರ ಅಳವಡಿಸುವಂತೆ ಆದೇಶ ಮಾಡಿದ್ದೇನೆ.



ಸೋಮವಾರ ನಡೆದ ವರುಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರ ಬಹಿರಂಗ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು. ಚಿತ್ರದಲ್ಲಿ ಚಾಮರಾಜನಗರ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಸುನೀಲ್ ಬೋಸ್ ಇದ್ದಾರೆ.


ಮಾಜಿ ಪ್ರಧಾನಿ ದೇವೇಗೌಡರ ಮೇಲೂ ವಾಗ್ದಾಳಿ: ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ವಿರುದ್ಧ ವಾಗ್ದಾಳಿ ನಡೆಸಿದ ಅವರು, ಮೋದಿ ಪ್ರಧಾನಿಯಾದರೆ ದೇಶ ಬಿಟ್ಟು ಹೋಗುತ್ತೇನೆ. ಮುಂದಿನ ಜನ್ಮದಲ್ಲಿ ಮುಸ್ಲಿಮನಾಗಿ ಹುಟ್ಟುತ್ತೇನೆ ಎಂದು ಹೇಳಿದ್ದ ದೇವೇಗೌಡರು, ಈಗ ಮೋದಿಯವರಿಗೂ ನನಗೂ ಅವಿನಾಭಾವ ಸಂಬಂಧವಿದೆ ಎಂದು ಹೇಳುತ್ತಿದ್ದಾರೆ. ಜೆಡಿಎಸ್‌ಗೆ ಬಿಜೆಪಿ ಕೊಡುವ ಸೀಟ್‌ಗಳಲ್ಲಿ ಅಳಿಯ ಡಾ.ಸಿ.ಎನ್. ಮಂಜುನಾಥ್‌ರನ್ನು ನಿಲ್ಲಿಸಲು ಆಗಲ್ಲ ಎಂಬ ಕಾರಣಕ್ಕೆ ಅವರನ್ನು ಬಿಜೆಪಿಗೆ ಕಳುಹಿಸಿದ್ದಾರೆ ಎಂದು ಕಿಡಿಕಾರಿದ ಅವರು, 'ಸಿದ್ದರಾಮಯ್ಯನ ಗರ್ವಭಂಗ ಮಾಡಿ' ಎಂದು ದೇವೇಗೌಡರು ಹೇಳಿದ್ದಾರೆ. ನನಗೆ ಗರ್ವವೇ ಇಲ್ಲ. ಇನ್ನು ಅದನ್ನು ಭಂಗ ಮಾಡುವುದು ಹೇಗೆ? ಎಂದು ಪ್ರಶ್ನಿಸಿದರಲ್ಲದೆ, ನಾನು ಸತ್ಯವನ್ನಷ್ಟೇ ಹೇಳುತ್ತೇನೆ, ಇದ್ದದ್ದು ಇದ್ದಂಗೆ ಹೇಳಿದರೆ ಎದ್ದು ಬಂದು ಎದೆಗೆ ಒದೆಯಲು ಶುರು ಮಾಡಿದ್ದಾರೆ ಎಂದರು.

ದೇಶದಲ್ಲಿ ನಿರುದ್ಯೋಗ ಹೆಚ್ಚಾಗಿದೆ: ಪ್ರಧಾನಿ ಮೋದಿ ● 6ನೇ ಪುಟಕ್ಕೆ

ಇಂದು ಚನ್ನಪಟ್ಟಣದಲ್ಲಿ

ಅಮಿತ್ ಷಾ ರೋಡ್ ಶೋ

● ನಂತರ ಸಮಾವೇಶದಲ್ಲಿ ಭಾಷಣ ● ಇದಕ್ಕೂ ಮುನ್ನ ಬಂಡಾಯ ಶಮನಕ್ಕೆ ಮುಖಂಡರೊಂದಿಗೆ ಸಮಾಲೋಚನೆ ● ಕಳೆದ ಬಾರಿ ಏಕೈಕ ಕಾಂಗ್ರೆಸ್ ಸಂಸದರಾಗಿ ಆಯ್ಕೆಯಾಗಿದ್ದ ಡಿ.ಕೆ.ಸುರೇಶ್ ಮಣಿಸಲು ರಣತಂತ್ರ



(ಸಂಗ್ರಹ ಚಿತ್ರ)

ಬೆಂಗಳೂರು, ಏ.1(ಕೆಎಂಶಿ)– ಟಿಕೆಟ್ ವಂಚಿತರಾಗಿ ಬಂಡಾಯ ಎದ್ದಿರುವವರಿಗೆ ಎಚ್ಚರಿಕೆ ಹಾಗೂ ರಾಜ್ಯ ನಾಯಕರಿಗೆ ಒಗ್ಗಟ್ಟಿನ ಮಂತ್ರ ಬೋಧಿಸಲು ಕೇಂದ್ರ ಗೃಹ ಸಚಿವ ಅಮಿತ್ ಷಾ ಎರಡು ದಿನಗಳ ರಾಜ್ಯ ಪ್ರವಾಸ ಕೈಗೊಂಡಿದ್ದು, ಡಿ.ಕೆ.ಸಹೋದರರ ನೆಲದಿಂದಲೇ ಚುನಾವಣಾ ಪ್ರಚಾರಕ್ಕೆ ಚಾಲನೆ ನೀಡಲಿದ್ದಾರೆ.

ನಾಳೆ ಬೆಳಗ್ಗೆ ಅರಮನೆ ಮೈದಾನದಲ್ಲಿ ಮೊದಲ ಹಂತದ 11 ಕ್ಷೇತ್ರಗಳ ಅಭ್ಯರ್ಥಿಗಳು ಹಾಗೂ ಮುಖಂಡರ ಜೊತೆ ಅಮಿತ್ ಷಾ ಸುದೀರ್ಘ ಸಮಾಲೋಚನೆ ನಡೆಸಲಿದ್ದಾರೆ. ತುಮಕೂರು, ಚಿತ್ರದುರ್ಗ, ಚಿಕ್ಕಬಳ್ಳಾಪುರ, ಚಾಮರಾಜನಗರ ಲೋಕಸಭಾ ಕ್ಷೇತ್ರಗಳಲ್ಲಿ ಪಕ್ಷದ ಅಧಿಕೃತ ಅಭ್ಯರ್ಥಿಗಳ ವಿರುದ್ಧವೇ ಶಾಸಕರು, ಮುಖಂಡರು ಅಪಸ್ವರ ಎತ್ತಿದ್ದಾರೆ. ಶಿವಮೊಗ್ಗ, ಬೆಳಗಾವಿ ಸೇರಿದಂತೆ ಎರಡನೇ ● 6ನೇ ಪುಟಕ್ಕೆ

ಇಂದು ಅಮಿತ್ ಶಾ ಜೊತೆ ಕುಮಾರಸ್ವಾಮಿ ಉಪಾಹಾರ ಸಭೆ

ಬೆಂಗಳೂರು, ಏ.1–ರಾಜ್ಯಕ್ಕೆ ಆಗಮಿಸುತ್ತಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೊಂದಿಗೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಮಾತುಕತೆ ನಡೆಸಲಿದ್ದಾರೆ.

ಬೆಳಗ್ಗೆ ವೆಸ್ಟ್ ಎಂಡ್ ಹೋಟೆಲ್‌ನಲ್ಲಿ ಈ ಭೇಟಿ ನಡೆಯಲಿದ್ದು, ಈ ಬಗ್ಗೆ ಕುಮಾರಸ್ವಾಮಿ ಅವರು ಮಾಹಿತಿ ನೀಡಿದ್ದಾರೆ. ಮಂಗಳವಾರ ಬೆಳಗ್ಗೆ ಅಮಿತ್ ಷಾ ಅವರ ಜತೆ ಬ್ರೇಕ್ ಫಾಸ್ಟ್ ಮೀಟಿಂಗ್ ಇದೆ. ಲೋಕಸಭೆ ಚುನಾವಣೆ ಬಗ್ಗೆ ಅವರೊಂದಿಗೆ ಚರ್ಚೆ ನಡೆಸಲಾಗುವುದು. ● 6ನೇ ಪುಟಕ್ಕೆ

ಮಂಡ್ಯ ಎನ್‌ಡಿಎ ಅಭ್ಯರ್ಥಿ ಎಚ್.ಡಿ.ಕುಮಾರಸ್ವಾಮಿಗೆ ಸಂಸದೆ ಸುಮಲತಾ ಬೆಂಬಲ ಸಾಧ್ಯತೆ



ಬೆಂಗಳೂರು, ಏ. 1(ಕೆಎಂಶಿ)–ಸಂಸದೆ ಸುಮಲತಾ ಅಂಬರೀಷ್ ಚುನಾವಣಾ ಕಣದಿಂದ ಹಿಂದೆ ಸರಿದು ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಎನ್‌ಡಿಎ ಅಭ್ಯರ್ಥಿ ಎಚ್.ಡಿ.ಕುಮಾರಸ್ವಾಮಿ ಅವರನ್ನು ಬೆಂಬಲಿಸುತ್ತಾರಂತೆ.

ಚುನಾವಣಾ ಕಣಕ್ಕಿಳಿಯುವ ಬಗ್ಗೆ ಗೊಂದಲದಲ್ಲಿದ್ದ ಸುಮಲತಾ ನಿನ್ನೆ ಕುಮಾರಸ್ವಾಮಿ ಅವರು ಭೇಟಿ ಮಾಡಿದ ನಂತರ ತಮ್ಮ ನಿಲುವನ್ನು ಬದಲಿಸಿಕೊಂಡಿದ್ದಾರೆ ಎನ್ನಲಾಗಿದೆ.

ಏಪ್ರಿಲ್ 3ರಂದು ತಮ್ಮ ಬೆಂಬಲಿಗರ ಸಭೆ ಕರೆದಿದ್ದು, ಅಂದಿನ ಸಭೆಯಲ್ಲಿ ಬಿಜೆಪಿ ವರಿಷ್ಠರ ತೀರ್ಮಾನದ ನಂತರ ಎನ್‌ಡಿಎ ಅಭ್ಯರ್ಥಿಯಾಗಿ ಕುಮಾರಸ್ವಾಮಿ ಕಣಕ್ಕಿಳಿದಿರುವ ಬಗ್ಗೆ ಮಾಹಿತಿ ಹಂಚಿಕೊಳ್ಳಲಿದ್ದಾರೆ.

ಪ್ರಸಕ್ತ ಸನ್ನಿವೇಶದಲ್ಲಿ ವರಿಷ್ಠರ ಮಾತಿಗೆ ಬೆಲೆ ನೀಡಬೇಕಾಗುತ್ತದೆ, ಮುಂದಿನ ರಾಜಕೀಯ ನೋಡೋಣ. ಈಗಿನ ಪರಿಸ್ಥಿತಿಯಲ್ಲಿ ಅನಿವಾರ್ಯ ನಿರ್ಧಾರಗಳನ್ನು ಕೈಗೊಳ್ಳಬೇಕಾಗುತ್ತದೆ. ಕಾರ್ಯಕರ್ತರು ಮತ್ತು ಅಭಿಮಾನಿಗಳ ಸಭೆಯ ನಂತರ ಸುಮಲತಾ, ಎನ್‌ಡಿಎ ಅಭ್ಯರ್ಥಿಯನ್ನು ಬೆಂಬಲಿಸುವ ನಿಲುವು ತೆಗೆದುಕೊಳ್ಳಲಿದ್ದಾರೆ ಎಂಬ ಮಾತು ಕೇಳಿ ಬಂದಿದೆ. ಕುಮಾರಸ್ವಾಮಿ ಅವರು ಏಪ್ರಿಲ್ 4ರಂದು ಎನ್‌ಡಿಎ ಕೂಟದ ಜೆಡಿಎಸ್ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಲಿದ್ದಾರೆ. ಆ ಸಂದರ್ಭದಲ್ಲಿ ಸುಮಲತಾ ಅವರು ಭಾಗಿಯಾಗಲಿದ್ದಾರೆಂಬ ● 6ನೇ ಪುಟಕ್ಕೆ

ಮೈಸೂರು ಪಾಲಿಕೆ ವ್ಯಾಪ್ತಿ ಆಸ್ತಿ ತೆರಿಗೆ ಶೇ.15–20 ಹೆಚ್ಚಳ

2023ರ ಅಕ್ಟೋಬರ್‌ನಿಂದ ಸರ್ಕಾರ ಮಾರ್ಗಸೂಚಿ ಮೌಲ್ಯ ಶೇ.30ರಿಂದ 50ರವರೆಗೆ ಏರಿಸಿರುವುದನ್ನು ಆಧರಿಸಿ ತೆರಿಗೆ ಲೆಕ್ಕಾಚಾರ: ಪಾಲಿಕೆ ಆಯುಕ್ತೆ ಡಾ.ಎನ್.ಎನ್.ಮಧು



ಮೈಸೂರು ನಗರ ಪಾಲಿಕೆ ನೀಡಿರುವ ಶೇ.5ರಷ್ಟು ರಿಯಾಯಿತಿ ಅನ್ವಯ ಮೈಸೂರಿನ ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿರುವ ಪಾಲಿಕೆ ವಲಯ ಕಚೇರಿ–6ರಲ್ಲಿ ಸೋಮವಾರ ಸಾರ್ವಜನಿಕರು ಆಸ್ತಿ ತೆರಿಗೆ ಪಾವತಿಸುತ್ತಿರುವುದು.

ಮೈಸೂರು, ಏ. 1 (ಆರ್‌ಕೆ)– ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಆಸ್ತಿ ತೆರಿಗೆ ಇಂದಿನಿಂದ ಹೆಚ್ಚಳವಾಗಿದೆ. ಕರ್ನಾಟಕ ಸರ್ಕಾರವು 2023ರ ಅಕ್ಟೋಬರ್ ಮಾಹೆಯಿಂದ ಆಸ್ತಿಗಳ ಉಪನೋಂದಣಾಧಿಕಾರಿ ಕಚೇರಿ ಮಾರ್ಗಸೂಚಿ ಮೌಲ್ಯ (ಗೈಡೆನ್ಸ್ ವ್ಯಾಲ್ಯೂ)ವನ್ನು ಶೇ.30ರಿಂದ 50ರಷ್ಟು ಹೆಚ್ಚಿಸಿ ಆದೇಶಿಸಿತ್ತು. ಅದರಿಂದ ಆಸ್ತಿಗಳ ಮೌಲ್ಯಗಳು ಮಾಲೀಕರಿಗೆ ಹೊರೆಯಾಗಲಿದೆ.

ಈ ಕುರಿತು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿರುವ ಮೈಸೂರು ಮಹಾನಗರ ಪಾಲಿಕೆ ಆಯುಕ್ತೆ ಡಾ. ಎನ್.ಎನ್.ಮಧು, ಪ್ರತಿ ವರ್ಷ ಆಸ್ತಿ ತೆರಿಗೆಯನ್ನು ಹೆಚ್ಚಿಸಬೇಕೆಂದು ಸರ್ಕಾರದ ಆದೇಶವಿದೆಯಾದರೂ 2022ರ ಪಾಲಿಕೆ ಕೌನ್ಸಿಲ್ ಸಭೆಯಲ್ಲಿ ಆಸ್ತಿ ತೆರಿಗೆ ಹೆಚ್ಚಿಸಲಾಗಿದ್ದನ್ನು ಬಿಟ್ಟರೆ ಈವರೆಗೆ ಪರಿಷ್ಕರಣೆ ಮಾಡಿಲ್ಲ ಎಂದರು.

ಈ ವರ್ಷ ತೆರಿಗೆ ಹೆಚ್ಚಿಸಿದಲ್ಲಿ ಈಗಾಗಲೇ ರಾಜ್ಯ ಸರ್ಕಾರ ಆಸ್ತಿಗಳ ಗೈಡೆನ್ಸ್ ವ್ಯಾಲ್ಯೂ ಹೆಚ್ಚಿಸಿರುವುದರಿಂದ ತೆರಿಗೆಯನ್ನು ಹೆಚ್ಚಿಸಿದರೆ ಆಸ್ತಿ ಮಾಲೀಕರಿಗೆ ತೀವ್ರ ಹೊರೆಯಾಗುತ್ತದೆ ಎಂಬ ಕಾರಣಕ್ಕೆ ಈ ವರ್ಷ ನಾವು ಆಸ್ತಿ ತೆರಿಗೆ ಹೆಚ್ಚಿಸದೇ ಕೇವಲ ಗೈಡೆನ್ಸ್ ವ್ಯಾಲ್ಯೂ ಆಧಾರವಾಗಿರಿಸಿಕೊಂಡು ಆಸ್ತಿ ತೆರಿಗೆಯನ್ನು ಪರಿಷ್ಕರಣೆ ಮಾಡುತ್ತೇವೆ. ಆಗ ಸಹಜವಾಗಿ ಶೇ.15ರಿಂದ 20ರಷ್ಟು ಆಸ್ತಿ ತೆರಿಗೆ ಹೆಚ್ಚಾಗಲಿದೆ ಎಂದು ಅವರು ತಿಳಿಸಿದರು.

ವಸತಿ, ವಾಣಿಜ್ಯ ಕಟ್ಟಡ, ಖಾಲಿ ನಿವೇಶನ, ಕೈಗಾರಿಕೆಗಳು, ಸಿನಿಮಾ ಮಂದಿರ, ಕಲ್ಯಾಣ ಮಂಟಪ, ಹೋಟೆಲ್‌ಗಳು, ಶಾಲಾ ಕಾಲೇಜು ಶೈಕ್ಷಣಿಕ ಸಂಸ್ಥೆಗಳು, ಇನ್ನಿತರ ಸ್ವರೂಪದ ಆಸ್ತಿಗಳಿಗೆ ಆಯಾ ಏರಿಯಾದ ರಸ್ತೆಗಳ ಅಗಲದ ಆಧಾರದಲ್ಲಿ ಎಸ್.ಆರ್.ವ್ಯಾಲ್ಯೂ ಲೆಕ್ಕಾಚಾರ ಮಾಡುವುದರಿಂದ ಅವುಗಳ ತೆರಿಗೆ ಪ್ರಮಾಣವೂ ಸಹ ಹೆಚ್ಚಿಗೆಯಾಗಲಿದೆ ಎಂದು ಡಾ. ಮಧು ನುಡಿದರು. ಒಂದೇ ಮಾದರಿಯಲ್ಲಿ ಆಸ್ತಿ ತೆರಿಗೆಯನ್ನು ಹೆಚ್ಚಿಸಲಾಗುವುದಿಲ್ಲ. ಏಕೆಂದರೆ ಒಂದು ಬಡಾವಣೆಯಿಂದ ಮತ್ತೊಂದು ಬಡಾವಣೆಗೆ ಸಬ್ ರಿಜಿಸ್ಟ್ರಾರ್ ಗೈಡೆನ್ಸ್ ವ್ಯಾಲ್ಯೂ ಬದಲಾವಣೆಯಾಗಿದೆ. ಅದರಂತೆ ಆಸ್ತಿ ತೆರಿಗೆಯೂ ಸಹ ಏಕರೂಪದಲ್ಲಿರುವುದಿಲ್ಲ ಎಂದು ಅವರು ಇದೇ ಸಂದರ್ಭ ತಿಳಿಸಿದರು.



ಡಾ.ಎನ್.ಎನ್.ಮಧು

2024ರ ಏಪ್ರಿಲ್ 1ರಿಂದ 2025ರ ಮಾರ್ಚ್ 31ರವರೆಗೆ ಪ್ರಸಕ್ತ ಸಾಲಿನ ಆಸ್ತಿ ತೆರಿಗೆಯನ್ನು 2024ರ ಏಪ್ರಿಲ್ 30ರವರೆಗೆ ಪಾವತಿಸುವವರಿಗೆ ಶೇ.5ರಷ್ಟು ವಿನಾಯಿತಿ ನೀಡಲಾಗಿದೆ ಎಂದ ಡಾ.ಮಧು, ಈ ಅವಕಾಶ 2023–24ನೇ ಸಾಲಿನ ಆಸ್ತಿ ತೆರಿಗೆಗೆ ಅನ್ವಯವಾಗುವುದಿಲ್ಲ ಎಂದು ಅವರು ತಿಳಿಸಿದರು. ಶೇ.5ರ ವಿನಾಯಿತಿ ಇರುವುದರಿಂದ ಪಾಲಿಕೆಯ ಎಲ್ಲಾ 9 ವಲಯ ಕಚೇರಿಗಳಲ್ಲೂ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ಬರುತ್ತಿದ್ದು ಕೌಂಟರ್‌ಗಳಲ್ಲಿ ಸಾಲುಗಟ್ಟಿ ನಿಂತು ತೆರಿಗೆ ಪಾವತಿಸಲು ಮುಂದಾಗಿದ್ದಾರೆ.

ನಕ್ಕರೆ ಅದೇ ಸ್ವರ್ಗ

ತಂದೆ : ಅದೇನೋ ನೋಡ್ತಿರೋದು?
ಮಗ : ಫೇಸ್‌ಬುಕ್ ನೋಡ್ತಾ ಇದ್ದೀನಿ
ತಂದೆ : ನೀನು ಹೀಗೆ ದಿನವಿಡೀ ಫೇಸ್‌ಬುಕ್‌ನಲ್ಲೇ ಇದ್ರೆ, ನಾಡಿದ್ದು ನಿನ್ನ ಪಾಸ್‌ಬುಕ್‌ನಲ್ಲಿ ಏನೂ ಇರೋದಿಲ್ಲ ತಿಳ್ಕೋ!

ಮೈಸೂರು ಮಿತ್ರ
ಮಂಗಳವಾರ, 2 ಏಪ್ರಿಲ್ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........
ಜಗತ್ತಿನಲ್ಲಿ ಮಹತ್ಕಾರ್ಯಗಳಾಗಬೇಕಾದರೆ ಸ್ಫೂರ್ತಿಯೇ ಒಂದು ಸಾಧನ
– ರ್‍ಯಾಂಡಿಪಾಶ್.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು
{ ಗೆದ್ದರೆ ಆಡೋದಕ್ಕೆ ಅನ್ನೋದು
ಸೋತರೆ ನೋಡೋದಕ್ಕೆ ಅನ್ನೋದು

ನಿಮ್ಮ ಪತ್ರಗಳು


■ ರಾಜಕೀಯ ನಿಂತ ನೀರಲ್ಲ

ಮಾನ್ಯರೆ,

90ರ ದಶಕದಲ್ಲಿ ಉದಯ ಟಿವಿಯಲ್ಲಿ ಪ್ರಸಾರವಾಗುತ್ತಿದ್ದ, 'ಮುಖಾಮುಖಿ' ಜನಪ್ರಿಯ ಕಾರ್ಯಕ್ರಮದಲ್ಲಿ ದೇಶದ ಹಿರಿಯ ರಾಜಕಾರಣಿಗಳ ಹಾಗೂ ಇತರ ಖ್ಯಾತನಾಮರ ಸಂದರ್ಶನ ಮಾಡಿ ಕೆಲವು ಖಡಕ್ ಪ್ರಶ್ನೆಗಳ ಮೂಲಕ ಅವರನ್ನು ಇಕ್ಕಟ್ಟಿಗೂ ಸಿಲುಕಿಸುತ್ತಿದ್ದ ಶ್ರೀಮತಿ ತೇಜಸ್ವಿನಿಗೌಡ ಈಗ ಬಿಜೆಪಿ ತೊರೆದು ಕಾಂಗ್ರೆಸ್ ಸೇರಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ಅಂದಿನ ಕಾಲದಲ್ಲಿ ಅವರ ಈ ಕಾರ್ಯಕ್ರಮ ಬಹಳ ಜನಪ್ರಿಯವಾಗಿತ್ತು. 2004ರ ಚುನಾವಣೆಯಲ್ಲಿ ಲೋಕಸಭೆಗೆ ಆಯ್ಕೆಯಾಗಿದ್ದ ತೇಜಸ್ವಿನಿ, ಹೆಸರಿಗೆ ತಕ್ಕ ಹಾಗೇ ಏನೋ ಒಂದು ರೀತಿಯ ತೇಜಸ್ಸಿನಿಂದ ಜನರನ್ನು ಆಕರ್ಷಿಸುತ್ತಿದ್ದರು. 2014ರಲ್ಲಿ ಕಾಂಗ್ರೆಸ್ ಪಕ್ಷದಿಂದ ಭಾರತೀಯ ಜನತಾ ಪಕ್ಷಕ್ಕೆ ಸೇರ್ಪಡೆಗೊಂಡು, ಆ ಪಕ್ಷದ ವಕ್ತಾರೆಯಾಗಿ ನೂರಾರು ಟಿವಿ ಚರ್ಚೆ, ಸಂವಾದ ಮತ್ತು ಸಂದರ್ಶನ ಕಾರ್ಯಕ್ರಮಗಳಲ್ಲಿ ಭಾಗಿಯಾಗುತ್ತಿದ್ದ ತೇಜಸ್ವಿನಿ ತಮ್ಮ ಮಾತಿನ ಮೋಡಿಯಿಂದ ಪಕ್ಷವನ್ನು ಸಮರ್ಥಿಸಿಕೊಳ್ಳುತ್ತಿದ್ದ ರೀತಿ ಕಣ್ಣಿಗೆ ಕಟ್ಟಿದಂತಿದೆ. ಅವರು ಪ್ರಸ್ತುತ ವಿಧಾನಪರಿಷತ್ತಿನ ಸದಸ್ಯೆಯಾಗಿದ್ದರೂ, ಬಿಜೆಪಿಯಲ್ಲಿ ತಮಗೆ ಉಳಿಗಾಲವಿಲ್ಲ ಎಂದು ಭಾವಿಸಿ ಈಗ ಮರಳಿ ಗೂಡಿಗೆ ಅನ್ನುವ ಹಾಗೆ ಕಾಂಗ್ರೆಸ್ ಸೇರಿರುವ ತೇಜಸ್ವಿನಿ ಪ್ರಸ್ತುತ ಲೋಕಸಭಾ ಚುನಾವಣೆಯಲ್ಲಿ ತಾವು ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳ ಪರ ಎಲ್ಲಾ ಕ್ಷೇತ್ರಗಳಲ್ಲಿ ಪ್ರಚಾರ ಮಾಡುವುದಾಗಿ ತಿಳಿಸಿದ್ದಾರೆ. ಇಂದಿನ ರಾಜಕೀಯ ವ್ಯವಸ್ಥೆಯಲ್ಲಿ ಪಕ್ಷಾಂತರ ಅನಿವಾರ್ಯವಾಗಿ ಹೋಗಿದೆ. ಅದನ್ನು ತಪ್ಪು ಎನ್ನುವ ಕಾಲ ಸಹ ದೂರವಾಗಿದೆ. ಏನಾದರೂ ಅಪೇಕ್ಷೆ ಇಟ್ಟುಕೊಂಡೇ, ಆ ಪಕ್ಷ ಈ ಪಕ್ಷ ಎಂದು ಹೇಳಿ ತಮಗೆ ಇಷ್ಟವಾದ ಪಕ್ಷಕ್ಕೆ ತಗಲಾಕಿಕೊಳ್ಳುವ ರಾಜಕಾರಣಿಗಳಿಗೆ ಬೆಲೆ ಸಿಗದೇ ಹೋದರೆ ಅವರು ಬೇರೊಂದು ಪಕ್ಷಕ್ಕೆ ಅನಿವಾರ್ಯವಾಗಿ ಜಿಗಿಯಲೇ ಬೇಕಾಗುತ್ತದೆ. ಏಕೆಂದರೆ ರಾಜಕೀಯ ನಿಂತ ನೀರಲ್ಲ. ಅಲ್ಲವೇ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು, ಮೊ.9341731661

■ ಪಾರಂಪರಿಕ ಕಾಲೇಜಿನ ಗೋಡೆಗಳಲ್ಲಿ ಬಿರುಕು



ಮಾನ್ಯರೆ,

ಸಾಂಸ್ಕೃತಿಕ ನಗರಿ ಮೈಸೂರಿನ ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಹಲವು ಕೊಠಡಿಗಳ ಗೋಡೆಗಳಲ್ಲಿ ಬಿರುಕು ಬಿಟ್ಟಿದೆ.

ಈಗಾಗಲೇ ಕಾಲೇಜಿನ ವಿಜ್ಞಾನ ವಿಭಾಗದ ಪ್ರಯೋಗಾಲಯ ಕುಸಿದಿದೆ. ಅದೃಷ್ಟವಶಾತ್ ಯಾವುದೇ ರೀತಿಯ ಪ್ರಾಣಹಾನಿ ಉಂಟಾಗಿಲ್ಲ. ಅದೇ ರೀತಿ ಕಾಲೇಜಿನ ಕಲಾ ವಿಭಾಗದಲ್ಲಿಯು ಹಲವು ಕೊಠಡಿಗಳ ಗೋಡೆ ಬಿರುಕು ಬಿಟ್ಟಿದೆ. ಗೋಡೆಯ ಮೇಲ್ಭಾಗದಲ್ಲಿ ಮರದ ಬೇರುಗಳು ಬಹಳ ಆಳವಾಗಿ ಬೀಡು ಬಿಟ್ಟಿವೆ. ಮಳೆಗಾಲ ಬಂದರೆ ಈ ವರ್ಷವೂ ಗೋಡೆ ಕುಸಿಯುವ ಆತಂಕ ಇದೆ. ಸರ್ಕಾರ ಇದರ ಕಡೆ ಗಮನ ಹರಿಸಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸೂಕ್ತ ರೀತಿಯಲ್ಲಿ ಕಾಲೇಜಿನ ಕೊಠಡಿಗಳನ್ನು ದುರಸ್ತಿಪಡಿಸಬೇಕು.

–ಎನ್.ಸುಶ್ಮಿತಾ, ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು.

■ ಆಡಳಿತದಲ್ಲಿ ವಿರೋಧ ಪಕ್ಷ ಬೇಕೆ ಬೇಕು

ಮಾನ್ಯರೆ,

ಕಳೆದ ವಿಧಾನಸಭೆ ಮತ್ತು ಲೋಕಸಭಾ ಚುನಾವಣೆಯಲ್ಲಿ ಕೇಂದ್ರದಲ್ಲಿ ಬಿಜೆಪಿ ರಾಜ್ಯದಲ್ಲಿ ಕಾಂಗ್ರೆಸ್ ನಿಚ್ಚಳ ಬಹುಮತ ಗಳಿಸಿದವು. ಆದರೆ ಕೇಂದ್ರದಲ್ಲಿ ಸಮರ್ಥ ವಿರೋಧ ಪಕ್ಷವೇ ಇಲ್ಲದ ಸ್ಥಿತಿ ನಿರ್ಮಾಣವಾಗಿತ್ತು. ಆದ್ದರಿಂದ ಮತದಾರ ಆಯ್ಕೆ ಸರಿಯಾಗಿರಬೇಕು. ಒಂದೇ ಪಕ್ಷ ಹೆಚ್ಚು ಸ್ಥಾನ ಗಳಿಸಿ ಅಧಿಕಾರ ನಡೆಸಿದರೆ ಸರ್ಕಾರದ ತಪ್ಪುಗಳು ಜನ ಸಾಮಾನ್ಯರಿಗೆ ತಿಳಿಯುವುದಿಲ್ಲ. ವಿರೋಧ ಪಕ್ಷದ ನಾಯಕರಿದ್ದರೆ ಸರ್ಕಾರದ ತಪ್ಪುಗಳನ್ನು ಎತ್ತಿಹಿಡಿದು ಬುದ್ಧಿಕಲಿಸಬಹುದು. ಬಿಜೆಪಿ 400 ಸೀಟ್ ಗುರಿಯೊಂದಿಗೆ ಪ್ರಚಾರಕ್ಕೆ ಇಳಿದಿದೆ. ಹಾಗೊಮ್ಮೆ ಅಷ್ಟು ಸೀಟು ಬಂದರೆ ವಿರೋಧ ಪಕ್ಷ ಎಲ್ಲಿ ಸ್ವಾಮಿ. ಆಗ ತಮಗಿಷ್ಟವಾದ ಕಾನೂನು ಮಾಡುತ್ತಾರೆ. ಜನ ಒಪ್ಪುತ್ತಾರೋ ಬಿಡುತ್ತಾರೋ ಕಲಾಪದಲ್ಲಿ ಬಿಲ್ ಪಾಸು ಮಾಡುತ್ತಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿರೋಧ ಪಕ್ಷದ ಪಾತ್ರವನ್ನು ಮರೆಯುವಂತಿಲ್ಲ. ಬಿಜೆಪಿ ವಿರೋಧ ಪಕ್ಷವಿಲ್ಲದ ಆಡಳಿತವನ್ನು ಬಯಸುತ್ತಿದೆ ಎಂದೆನಿಸುತ್ತದೆ. ಇದು ಪ್ರಜಾಪ್ರಭುತ್ವಕ್ಕೆ ಮಾರಕ.

–ದಡದಹಳ್ಳಿ ರಮೇಶ್, ಚಂದಕವಾಡಿ ಹೋಬಳಿ, ಚಾಮರಾಜನಗರ ಜಿಲ್ಲೆ.

■ ಅನವಶ್ಯಕ ವಿದ್ಯುತ್ ಪೋಲು

ಮಾನ್ಯರೇ,

ಇತ್ತೀಚೆಗೆ ಹಳ್ಳಿಗಳಲ್ಲಿ ಹಬ್ಬ ಆಚರಣೆಗಳು ವಿಪರೀತವಾಗಿವೆ. ಹಬ್ಬ ಆಚರಣೆ ಮಾಡುವುದರಲ್ಲಿ ತಪ್ಪಿಲ್ಲ. ದೇವರ ಮೇಲೆ ಎಲ್ಲರಿಗೂ ಭಕ್ತಿ, ನಂಬಿಕೆ ಇದೆ. ಆದರೆ, ದೇವರ ಹೆಸರು ಹೇಳಿಕೊಂಡು ಊರ ತುಂಬಾ ವಿದ್ಯುತ್ ದೀಪಗಳನ್ನು ಸಾಲು ಸಾಲಾಗಿ ಬೆಳಗಿಸುವ ಪರಿ ನೋಡಿದರೆ ಅಯ್ಯೋ ಎನ್ನಿಸುತ್ತದೆ. ಹಳ್ಳಿಗಳಲ್ಲಿ ರೈತರು ಕಷ್ಟಪಟ್ಟು ಹಾಕಿದ ಬೆಳೆಗೆ ನೀರುಹರಿಸಲು ಕರೆಂಟ್ ಇಲ್ಲದೆ ಬೆಳೆ ಉಳಿಸಿಕೊಳ್ಳಲು ಹಗಲು ರಾತ್ರಿ ಶ್ರಮಪಡುತ್ತಾರೆ. ಆದರೆ ವಿದ್ಯುತ್ ನೀಡದೆ ಎಲ್ಲಾ ಬೆಳೆ ಒಣಗುತ್ತಿವೆ. ಇತ್ತ ಹಬ್ಬದ ಹೆಸರಲ್ಲಿ ವಿದ್ಯುತ್ ಪೋಲು ಮಾಡುವುದು ಸರಿಯಲ್ಲ. ರೈತರಿಗೆ ಎರಡು ಗಂಟೆ ಹೆಚ್ಚು ವಿದ್ಯುತ್ ನೀಡಿದರೆ ಆತ ಬದುಕುತ್ತಾನೆ. ಸುಮ್ಮನೆ ವಿದ್ಯುತ್ ಬಳಸುವುದರ ಬದಲು ರೈತರಿಗೆ ಉಪಯೋಗವಾಗಲಿ. ವಿದ್ಯುತ್ ಇಲಾಖೆ ಅಧಿಕಾರಿಗಳು ಇತ್ತ ಗಮನ ಹರಿಸಿ, ಹಳ್ಳಿಗಳಲ್ಲಿ ಪೋಲಾಗುತ್ತಿರುವ ವಿದ್ಯುತ್ ಬಗ್ಗೆ ಕಡಿವಾಣ ಹಾಕಲಿ.

– ಮೃತ್ಯುಂಜಯ, ಪಾಂಡವಪುರ

■ ಚುನಾವಣೆ

ಮಾನ್ಯರೆ,

ಭಾರತ–ರಾಮಾಯಣ :
ಇನ್ನು ದೇಶದಲ್ಲಿ
ಚುನಾವಣಾ 'ಪರ್ವ';
ಫಲಿತಾಂಶ–
ಗೆದ್ದವರಿಗೆ ಅರಮನೆ ಕಾಂಡ;
ಸೋತವರಿಗೆ ಅರಣ್ಯ 'ಕಾಂಡ'!

ಬರವು–ಬೆರಗು :
ಬಂತ್ಯೆ ಬಂತ್ಯೆ ಚುನಾವಣೆ;
ಅಂತೆ ಬೀದಿಗೆ ಬಂತು ಅರಮನೆ !
ಬೆರಗು–
'ಶ್ರೀಸಾಮಾನ್ಯ'ರಾದರು ಅರಸರು;
ಅವರನ್ನು ಅರಸಬೇಕಿಲ್ಲ!
(ಕಾಯುತ್ತಾ 'ಶ್ರೀ' ಗೌರಿ)

–ಸಿಪಿಕೆ, ಮೈಸೂರು.



ಗುಬ್ಬಿಗೂಡು ರಮೇಶ್
ಮೊ: 97429–34512

ದೀಪ ಸಾಲು

ಕಾಳು ಚೆಲ್ಲಿ ಕುಳಿತವರ ಅಂತಃಕರಣದಲ್ಲಿ ಗುಬ್ಬಚ್ಚಿಗಳು!

ಕವಿತೆ ಅನ್ನೋದು ಗುಬ್ಬಚ್ಚಿಯ ಗೂಡು ಅಂತ ಪಿ.ಲಂಕೇಶ್ ತನ್ನ ಸಂಪಾದಕೀಯದಲ್ಲಿ ಬರೆದುಕೊಂಡಾಗ ಅದು ಕವಿತೆಯ ಸರಳತೆಗೆ ಸಂಬಂಧಿಸಿದಂತೆ ಬರೆದುಕೊಂಡಂತಿದೆ ಅನ್ನಿಸುತ್ತಿತ್ತು. 9.9.2009ರಲ್ಲಿ ಮೈಸೂರಿನಲ್ಲಿ ಸ್ವತಃ ನಾನೇ ಗುಬ್ಬಿಗೂಡು ಎಂಬ ದೇಸಿ ಸಂಸ್ಥೆಯನ್ನು ಹುಟ್ಟು ಹಾಕಿದಾಗ ಈ ಗುಬ್ಬಚ್ಚಿಯೆಂಬ ಜೀವಸಂಕುಲದ ವೈಶಾಲ್ಯಕ್ಕೆ ನಾವೆಷ್ಟು ಭಾಗೀದಾರರು! ಎನ್ನುವ ಅನಿವಾರ್ಯತೆ ಸ್ಪಷ್ಟವಾಗಿ ಹೋಗಿತ್ತು. ಪಕ್ಷಿಪ್ರಿಯರು ಮಾರ್ಚ್ 20ನೇ ತಾರೀಖು 'ವಿಶ್ವ ಗುಬ್ಬಚ್ಚಿಗಳ ದಿನ' ಅಂತ ಆಚರಿಸುತ್ತಾರೆ. ಸಾಮಾನ್ಯವಾಗಿ ಮನುಷ್ಯ ತಾನೊಬ್ಬನೇ ಇರುವ ಸಮಾಜವನ್ನು ಯಾವತ್ತೂ ಕಟ್ಟಿಕೊಳ್ಳಲಿಲ್ಲ. ಪಶು, ಪಕ್ಷಿ, ಪ್ರಾಣಿಗಳ ಜತೆ ಮನುಷ್ಯನ ಜೀವನಾನುಸಂಧಾನವೂ ಅವಿರತವಾಗಿ ನಡೆಯುತ್ತಲೇ ಹೋಗಿರುವುದರಿಂದ ಮನುಷ್ಯ ಸಮಾಜ ಈ ಪ್ರಾಣಿ, ಪರಿಸರ, ಪಕ್ಷಿ ಸಂಕುಲದ ಜೊತೆಯೇ ಬದುಕಿದೆ ಎಂಬುದಕ್ಕೆ ಅವುಗಳ ಜೊತೆಗೆ ಬೆಸೆದುಕೊಂಡಿರುವ ಅಕ್ಕರೆಯ ಗೆಳೆತನಗಳೇ ಸಾಕ್ಷಿ.

ಸುಪ್ರಸಿದ್ಧ ಹಾಡುಗಾರನೊಬ್ಬ ದೊಡ್ಡ ಕಾರ್ಯಕ್ರಮದಲ್ಲಿ ಹಾಡುತ್ತಿದ್ದಾಗ ಅವನ ಪ್ರೀತಿ ಪಾತ್ರವಾದ ನಾಯಿ ಸತ್ತುಹೋಯಿತೆಂದು ದೂರವಾಣಿ ಕರೆ ಬಂದರೆ ಶೃಂಗಾರ ಹಾಡುತ್ತಿದ್ದ ಎದೆಯ ರಾಗ ಮರಣಮೃದಂಗದ ತಾಳ ಮದ್ದಳೆಗೆ ಸಿಕ್ಕಿ ಅವನ ದನಿ ಕರ್ಕಶವಾಗಿ ಬಿಡುತ್ತದೆ. ತಾನು ಸಾಕಿದ ಮನೆಯ ಪಾರಿವಾಳ ಸಂಜೆಯಾದರೂ ಮನೆಗೆ ಬರದೇ ಹೋದರೆ ಅವನು ಪ್ರಸಿದ್ಧ ಚಿತ್ರಕಾರನೇ ಆಗಿದ್ದರೂ ಬಣ್ಣದ ಬ್ರಷ್ಷಿನ ಮೇಲೆ ಶೂನ್ಯ ದೃಷ್ಟಿ ನೆಟ್ಟು ಸೊನ್ನೆ ಸುತ್ತುತ್ತಿರುತ್ತಾನೆ. ಅಡುಗೆ ಮಾಡುತ್ತಿರುವ ಗೃಹಿಣಿಗೆ ತನ್ನ ಕಾಲುಗಳ ನಡುವೆ ಮನೆಯ ಬೆಕ್ಕು ಅಡ್ಡಾಡಿ ಓಡಾಡುತ್ತಿದ್ದರೆ! ಒಗ್ಗರಣೆ ಡಬ್ಬಿ ಇಟ್ಟಿರುವ ಜಾಗವೇ ಮರೆತು ಹೋಗುತ್ತಿರುತ್ತದೆ. ಕಾರ್ಪೊರೇಟ್ ಪ್ರಪಂಚದಲ್ಲಂತೂ ಈ ಸಾಕುಪ್ರಾಣಿಗಳ ಭರಾಟೆ ಜೋರೇ ಜೋರು. ಈ ಕಾಲದ ಹುಡುಗಿಯರಿಗಂತೂ ತಾವು ಮಲಗುವಾಗ ಪಕ್ಕದಲ್ಲಿ ಪಾಕೆಟ್ ಪೊಮೇರಿಯನ್ ನಾಯಿ ಇಲ್ಲದಿದ್ದರೆ ಅವರಿಗೆ ನಿದ್ದೆಯೇ ಬರುವುದಿಲ್ಲ. ಕೆಲವರಿಗೆ ಎದ್ದ ಕೂಡಲೇ ದೇವರ ಮನೆ ಕಡೆ ನೋಡುವುದಕ್ಕಿಂತ ಮೊದಲು ತಾವು ಸಾಕಿದ ಅಕ್ವೇರಿಯಂ ಫಿಶ್‌ಗಳ ಮುಖ ನೋಡದೆ ಅವರು ಏಳುವುದೇ ಇಲ್ಲ. ಇಂಥಾ ಜೀವ ಸಂಬಂಧದ ಯಾವ ಬಂಧ ಬೆಸುಗೆಗಳೂ ಇಲ್ಲದೆ ಅಳಿವಿನಂಚಿನ ಕೊನೆಯ ಕೊಂಡಿಗೆ ನೇತು ಹಾಕಿಕೊಂಡು ಕಾಪಾಡುವವರಿಲ್ಲದೆ ಒದ್ದಾಡುತ್ತಿರುವ ಪಕ್ಷಿಸಂಕುಲವೇ ನಮ್ಮ ಗುಬ್ಬಚ್ಚಿಗಳು.'

ಮನುಷ್ಯನಿಗೆ ಅನಾದಿಕಾಲದ ಸ್ನೇಹಿತ ಎಂದರೆ ಈ ಗುಬ್ಬಚ್ಚಿಗಳು. ಪಶು, ಪಕ್ಷಿ, ಪ್ರಾಣಿಗಳನ್ನು ಮನುಷ್ಯ ತಾನು ಪ್ರೀತಿಗಾಗಿ ಸಾಕಿಕೊಂಡರೆ; ಈ ಗುಬ್ಬಚ್ಚಿಗಳು ಮಾತ್ರ ಮನುಷ್ಯ ಕಟ್ಟಿಕೊಂಡ ಮನೆಯ ಮಾಡುಗಳ ನಡುವೆ ಗೂಡು ಕಟ್ಟಿಕೊಂಡು ನಾವು ಮಲಗುವ ಮನೆಯಲ್ಲೇ ನಿರುಪದ್ರವಿಯಾಗಿ ತಾನೂ ಮಲಗಿ ತನ್ನ ಸಂಸಾರವನ್ನೂ ಮಲಗಿಸಿಕೊಂಡು ನಮ್ಮೊಡನೆಯೇ ಬದುಕಿದ ನಿತ್ಯಸಂಸಾರಿಗಳು. ಅಕ್ಷರಲೋಕಕ್ಕೆ ನನ್ನನ್ನು ಪರಿಚಯಿಸಿದ ಸಾಂಕೇತಿಕ ಚಿಹ್ನೆ ಈ ಗುಬ್ಬಿ. ಇವತ್ತಿಗೂ ನನ್ನ ಗೆಳೆಯರ ಬಳಗಕ್ಕೆ ನನ್ನ ಹೆಸರೇ ಮರೆತು ಹೋಗಿದೆ? ಎಲ್ಲರೂ ಗುಬ್ಬಿ ಎಂತಲೇ ಕರೆಯುತ್ತಾರೆ. ಬಲವಿಲ್ಲದ ಗುಬ್ಬಿಗೆ ಮನುಷ್ಯ ಲೋಕದಲ್ಲಿ ಯಾವತ್ತಿಗೂ ಒಲವು ಕಮ್ಮಿಯಾಗಲಿಲ್ಲ.

2009ರಲ್ಲಿ ಮೈಸೂರಿನಲ್ಲಿ ಸಾಂಸ್ಕೃತಿಕ ಸಿರಿಯೊಂದನ್ನು ರೂಪಿಸಲು ಮನಸ್ಸಾದಾಗ ಮನದ ತುಂಬೆಲ್ಲಾ ತನ್ನ ಕಿಚಪಿಚ ದನಿಯಲ್ಲಿ ಸಂಭ್ರಮದಿಂದ ಓಡಾಡಿದ್ದು ಈ ಗುಬ್ಬಿ. ಅವು ನನ್ನ ಬದುಕಿನ ಅವಿಭಾಜ್ಯ ಅಂಗ. ಕಾರಣ ಇಷ್ಟೆ. ಎಲ್ಲ ಸಾಕು ಪ್ರಾಣಿ, ಪಕ್ಷಿಗಳಿಗಿಂತ ಈ ಗುಬ್ಬಚ್ಚಿಗಳು ತುಂಬಾನೇ ಬೇರೆ ಥರ ಜೀವಿಸುವ ಪಕ್ಷಿಗಳು. ಒಂದು ಮೊಲವನ್ನೋ! ಅರಗಿಳಿಯ ಹಿಂಡನ್ನೋ! ನಾಯಿಮರಿಯ ಬೆನ್ನನ್ನೋ! ಪಾರಿವಾಳದ ಗುಂಪನ್ನೋ! ಲವ್‌ಬರ್ಡ್ಸ್‌ಗಳ ಕುಟುಂಬವನ್ನೋ! ನೀವು ಕಾಳುಚೆಲ್ಲಿ, ಮೈಮುಟ್ಟಿ ನಿಮ್ಮ ಕೆಲಸದ ನಡುವೆಯೂ ನಿಭಾಯಿಸಿಬಿಡಬಹುದು. ಆದರೆ ಗುಬ್ಬಚ್ಚಿಗಳು ಹಾಗಲ್ಲ! ಮನುಷ್ಯ ತನ್ನ ಮೈ ಮುಟ್ಟಿದರೆ ಮುನಿಸಿಕೊಳ್ಳುವಷ್ಟು ಅವು ಸೂಕ್ಷ್ಮ. ಕಳೆದ ಮಾರ್ಚ್ 20ರಂದು ವಿಶ್ವ ಗುಬ್ಬಿಗಳ ದಿನ. ಮನುಷ್ಯ ವಿಶ್ವದಾದ್ಯಂತ ಗುಬ್ಬಚ್ಚಿಗಳ ಮೇಲಿನ ಪ್ರೀತಿಗೆ ಅವುಗಳನ್ನು ಮುಟ್ಟದೆಯೇ ಮುದ್ದಾಡಿಬಿಟ್ಟ. ಇವತ್ತು ಗುಬ್ಬಚ್ಚಿಗಳಿಗೆ ಬೇಕಾಗಿರುವುದು ಪ್ರೀತಿಗಿಂತ ಹೆಚ್ಚಾಗಿ ಅವುಗಳ ಬಗೆಗಿನ ಒಲವು ಮತ್ತು ಕಾಳಜಿ. ಅವುಗಳ ಸಂತತಿ ಅಳಿವಿನಂಚಿನಲ್ಲಿಯೇ ಇದ್ದರೂ ಪುಣ್ಯಕ್ಕೆ ನಮ್ಮ ಕಾಲದಲ್ಲಿನ್ನೂ ಅವುಗಳ ಅಸ್ತಿತ್ವ ಇದೆ.

ಈಗ ನಲವತ್ತರ ಗಡಿದಾಟಿದ ವಯಸ್ಸಿನವರನ್ನು ನೀವು ಕೇಳಿ ನೋಡಿ! ಅವರು ಕರ್ನಾಟಕದ ಯಾವ ಊರಿನವರೇ ಆಗಿರಲಿ ಕಾಗಕ್ಕ–ಗುಬ್ಬಕ್ಕನ ಕತೆ ಕೇಳದೆ ಅವರು ಬೆಳೆದಿರುವುದೇ ಇಲ್ಲ. ನಮ್ಮ ಕಾಲದ ತಾಯಂದಿರು ಏನು ಕಲಿಯದೇ ಹೋದರೂ ಕಾಗಕ್ಕ–ಗುಬ್ಬಕ್ಕನ ಚಿಕ್ಕ ಕತೆ ಹೇಳಲು ಕಲಿಯದಿದ್ದರೆ ಅವರ ಮಕ್ಕಳು ಮಲಗುತ್ತಿರಲಿಲ್ಲ. ಅಷ್ಟರಮಟ್ಟಿಗೆ ಈ ಗುಬ್ಬಚ್ಚಿ ಎಂಬ ಹಿಡಿಗಾತ್ರದ ಹಕ್ಕಿ ನಮ್ಮ ಮಕ್ಕಳ ಲೋಕವನ್ನು ತೊಟ್ಟಿಲು ತೂಗಿ ಮಲಗಿಸಿದೆ. 'ಗುಬ್ಬಿ ಮೇಲೆ ಬ್ರಹ್ಮಾಸ್ತ್ರ' ಎಂಬ ಮಾತೊಂದು ಹುಟ್ಟಿಕೊಂಡಿದೆ. ಅಂದರೆ ಬಲವಿಲ್ಲದವರ ಮೇಲೆ ಬಲಪ್ರಯೋಗ ಮಾಡಿದರೆ ಅವರು ಉಳಿಯುತ್ತಾರ? ಅಂತ. ಹಾಗೆ ಗುಬ್ಬಿಯಂಥಾ ಪುಟ್ಟ ಹಕ್ಕಿಯ ಮೇಲೆ ಅಸ್ತ್ರಗಳಲ್ಲೇ ಮಹಾ ಅಸ್ತ್ರ ಬ್ರಹ್ಮಾಸ್ತ್ರ ಪ್ರಯೋಗಿಸುವುದು ಯಾವ ನ್ಯಾಯ? ಎಂಬರ್ಥದಲ್ಲಿ ಈ ಮಾತು ಹುಟ್ಟಿಕೊಂಡಿತ್ತು. ಆದರೆ ಬದಲಾದ ಕಾಲಘಟ್ಟದಲ್ಲಿ ಈ ಮಾತು ಕೇವಲ ಮಾತಾಗಿ ಉಳಿಯದೆ ಈ ಮಾತೇ ಇಂದು ನಿಜವಾಗಿ ಹೋಗಿದೆ. ಅಂದರೆ



> "ತುಪಾಕಿಯ ತುದಿಯಲ್ಲಿ ಗುಬ್ಬಿ ಗೂಡು ಕಟ್ಟುತ್ತಿದ್ದರೆ! ನಾವು ಮಾತ್ರ ಗುಬ್ಬಚ್ಚಿ ಗೂಡಿನಲ್ಲಿ ಕದ್ದು ಮುಚ್ಚಿ ಅಂತ ಚಿತ್ರಗೀತೆಯ ಹ್ಯಾಂಗೋವರ್‌ನಲ್ಲಿ ಹಾಯಾಗಿದ್ದೇವೆ. ಇವತ್ತು ಕಾರ್ಪೊರೇಟ್ ಸಂಸ್ಕೃತಿಯ ಅಟ್ಟಹಾಸದ ಮಧ್ಯೆ ನಮ್ಮ ಸ್ಥಳೀಯ ದೇಸೀ ಚಿಂತನೆಗಳು, ಕಲೆಗಳು, ಸಾಂಸ್ಕೃತಿಕ ಪರಿವೇಶಗಳು ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಹೆಣಗುತ್ತಿವೆ. ಮೊಬೈಲ್ ರೇಡಿಯೇಷನ್ನಿನಿಂದ ತಪ್ಪಿಸಿಕೊಳ್ಳಲು ಇತ್ತ ಗುಬ್ಬಚ್ಚಿಗಳು ಹೋರಾಡುತ್ತಿವೆ.

ಸಾಕ್ಷಾತ್ ಗುಬ್ಬಿಯ ಮೇಲೆಯೇ ಇದು ಪ್ರಯೋಗಗೊಳ್ಳುತ್ತಿದೆ.

ಹಳ್ಳಿಗಳಲ್ಲಿ ಮನೆಯ ಮಾಡುಗಳ ಮಧ್ಯೆ ಗೂಡು ಕಟ್ಟುತ್ತಿದ್ದ ಗುಬ್ಬಿಗೆ ಈಗ ಗೂಡು ಕಟ್ಟಲು ಜಾಗವಿಲ್ಲ. ಭಾರತದ ಗ್ರಾಮೀಣ ಪ್ರದೇಶಗಳಲ್ಲಿಯೂ ಈಗ ಆರ್.ಸಿ.ಸಿ. ಮನೆಗಳು ತಲೆಯೆತ್ತುತ್ತಿರುವುದರಿಂದ ಗುಬ್ಬಿ ಗೂಡು ಕಟ್ಟಲು ಇನ್ನು ಹಳ್ಳಿ ತೊಟ್ಟಿ ಮನೆಗಳು, ತೋಟದ ಕಲ್ಲು ಬಾವಿಗಳು, ಹೆಂಚಿನ ಮನೆಯ ತೊಲೆಯ ಸಂದಿಗಳು ಕಾಣೆಯಾಗಿವೆ. ಹಳ್ಳಿ ಬಿಟ್ಟು ನಗರದ ಕಡೆ ವಲಸೆ ಬಂದರೆ ಎಲ್ಲೆಲ್ಲೂ ಮೊಬೈಲ್ ಫೋನಿನ ಟವರ್‌ಗಳ ಕಾಟ ಶುರುವಾಗಿ, ದೂರಗಾಮಿ ಧ್ವನಿತರಂಗಗಳ ರೇಡಿಯೇಷನ್ ಪ್ರಖರತೆಯನ್ನು ತಡೆಯಲಾಗದೆ ಗುಬ್ಬಚ್ಚಿಗಳು ಒಂದೊಂದಾಗಿ ಕಣ್ಮರೆಯಾಗುತ್ತಿವೆ. ಅವರೇಕಾಯಿ ಕಾಲದಲ್ಲಿ ಅಮ್ಮ ಅವರೇಕಾಯಿ ಬಿಡಿಸಲು ಕೂತರೆ ಹಿಂಡು ಹಿಂಡು ಗುಬ್ಬಚ್ಚಿಗಳು ಮನೆಗೆ ಬರುತ್ತಿದ್ದವು.

ಅವರೇಕಾಯಿಯಲ್ಲಿನ ಹುಳ ತೋರಿಸಿ ಅವುಗಳಿಗೆ ಆಸೆ ಹುಟ್ಟಿಸಿ, ಹತ್ತಿರ ಬರುವಂತೆ ಸೆಳೆಯುತ್ತಿದ್ದ ಮಕ್ಕಳು ಹತ್ತಿರ ಬಂದ ಗುಬ್ಬಚ್ಚಿಗಳನ್ನೇ ಎವೆಯಿಕ್ಕದೆ ನೋಡಿ ಆನಂದಿಸುತ್ತಿದ್ದ ಸಂತೋಷವನ್ನು ಈ ಕಾಲದ ಮಕ್ಕಳಿಗೆ ಎಲ್ಲಿಂದ ತಂದುಕೊಡುತ್ತೀರಿ? ಈಗ ಅಮ್ಮಂದಿರು ಅವರೇಕಾಯಿ ಬಿಡಿಸುವಾಗ ಮಕ್ಕಳು ಕೂರುವುದೂ ಇಲ್ಲ, ಗುಬ್ಬಚ್ಚಿಗಳು ಹಾರಿ ಬರಲು ಅವುಗಳ ಗುಂಪೂ ಇಲ್ಲ! ಅಂದರೆ ಮನುಕುಲಕ್ಕೊಂದು ಎಚ್ಚರಿಕೆಯ ಘಂಟೆ ಈ ಗುಬ್ಬಚ್ಚಿಗಳು. ಯಾವಾಗ ನಿಸರ್ಗ ತನ್ನ ನೈಜ ವಾತಾವರಣವನ್ನು ಕಳೆದುಕೊಳ್ಳುತ್ತದೋ ಅಲ್ಲಿಗೆ ಅದರ ಸಂತತಿ ನಾಶದ ಪ್ರಕ್ರಿಯೆಗಳು ಶುರುವಾಗುತ್ತವೆ. ಇವತ್ತು ಗುಬ್ಬಚ್ಚಿ ನಾಳೆ ಚಿಂಪಾಂಜಿ, ನಾಳಿದ್ದು ಮನುಷ್ಯಲೋಕ. ಅದು ಯಾವುದೇ ಇರಲಿ, ನಿಸರ್ಗ ಮುನಿದರೆ ಯಾವುದೂ ಉಳಿಯದು! ಮೊಬೈಲ್ ರೇಡಿಯೇಷನ್ನು ಮನುಷ್ಯನ ಬ್ರೈನಿನ ಮೇಲೆ, ಎದೆಭಾಗದ ಮೇಲೆ, ಪುರುಷತ್ವದ ಮೇಲೆ, ಕಿವಿಯ ಒಳಭಾಗದ ಮೇಲೆ ಎಂತೆಂಥಾ ಗಾಢ ದುಷ್ಪರಿಣಾಮಗಳನ್ನು ಉಂಟುಮಾಡುತ್ತಿವೆಯಂತ ಸಂಶೋಧನೆಗಳು ಹೇಳುತ್ತಿವೆಯಾದರೂ ಅದಿಲ್ಲದೆ ನಾವಿಲ್ಲ ಎಂಬಂತಹ ಸ್ಥಿತಿಗೆ ನಾವು ಬಂದು ನಿಂತು ಬಿಟ್ಟಿದ್ದೇವೆ! ಆದರೆ ಅತ್ಯಂತ ಸೂಕ್ಷ್ಮ ಹೃದಯದ ಗುಬ್ಬಚ್ಚಿಗಳು ಮಾತ್ರ ನಾಗರಿಕತೆಯ ರುದ್ರನರ್ತನಕ್ಕೆ ತುತ್ತಾಗಿ ಅಂಗಾತ ಮಲಗಿ ಅಸು ನೀಗುತ್ತಿವೆ.

'ಗುಬ್ಬಿ ಡೇ' ನಡೆಯುವಾಗ ಬಹಳಷ್ಟು ಜನ ಗುಬ್ಬಚ್ಚಿಗಳ ಮೇಲೆ ಕನಿಕರ ತೋರಿಸುತ್ತಾರೆ. ಅದಕ್ಕಾಗಿ ವೆಬ್‌ಸೈಟ್ ರೂಪುಗೊಂಡಿದೆ. ಗುಬ್ಬಿ ಹೆಸರಿನಲ್ಲಿ ಏನೇ ನಡೆದರೂ ಅದರ ವಿವರಗಳನ್ನು ಆ ವೆಬ್‌ಸೈಟಿನಲ್ಲಿ ಹಾಕಿ ವಿಶ್ವದಾದ್ಯಂತ ತೋರಿಸುತ್ತಾರೆ. ಎಲ್ಲವೂ ಸರಿಯೇ! ಆದರೆ 'ಗುಬ್ಬಿ ಡೇ' ಅನ್ನೋದು ಮಾರ್ಚ್ 20ರಂದು ಶುರುವಾಗುವ ಸೆಲೆಬ್ರೇಷನ್ ಅಲ್ಲ; ಅದೊಂದು ವೈಬ್ರೇಷನ್ನು. ರೇಡಿಯೇಷನ್ನಿನ ಹ್ಯಾಂಗೋವರಿಗೆ ತಲೆಕೆಳಗಾದ ಗುಬ್ಬಚ್ಚಿಗಳನ್ನು ಉಳಿಸುವ ಸೆನ್ಸೇಷನ್ನು. ಎಷ್ಟೋ ಮಂದಿ ಗುಬ್ಬಿಗಾಗಿ ಗೂಡುಕಟ್ಟಿ ಮನೆಯ ಮೇಲ್ಛಾವಣಿಯ ಮೇಲೆ ಇಟ್ಟಿದ್ದಾರೆ. ಅದು ಅವರ ಅನನ್ಯ ಕಾಳಜಿಯ ಕುರುಹು ನಿಜ. ಆದರೆ ನಾವು ಕಟ್ಟಿದ ಗೂಡಿಗೆ ಗುಬ್ಬಿಗಳು ಮರಳುವುದಿಲ್ಲ. ಗುಬ್ಬಿಗಳೇ ಗೂಡುಕಟ್ಟಿಕೊಳ್ಳುವ ಒಣಗಿದ ನೆಲ್ಲು, ಹುಲ್ಲು, ಕಡ್ಡಿ, ದಬ್ಬೆ ಚೂರುಗಳು, ಸಜ್ಜೆ ಕಡ್ಡಿಗಳನ್ನು ಅವಷ್ಟಕ್ಕವೇ ಬಿದ್ದಂತೆ ಹರಡಿದರೆ ಗುಬ್ಬಚ್ಚಿಗಳು ಅವುಗಳನ್ನು ಹೆಕ್ಕಿ ತೆಗೆದು ಗೂಡುಕಟ್ಟಿಕೊಳ್ಳುತ್ತವೆ. ಗೂಡು ಕಟ್ಟಲು ಅವಕಾಶವಾಗುವಷ್ಟು ಪೊಟರೆಯಂಥ ಜಾಗಗಳನ್ನು ಮನೆಯ ಆಯಕಟ್ಟಿನ ಜಾಗಗಳಲ್ಲಿ ಅಂಗೈಯಗಲ ಕೊರೆದಿಡಬೇಕು. ಗೂಡಿಗೆ ಅವಕಾಶವಿಲ್ಲದವರು ಮನೆಯ ಆಸುಪಾಸಿನಲ್ಲಿ ವಾಟರ್ ಬೌಲ್‌ಗಳನ್ನು ತೆರೆದಿಡಬೇಕು. ಅಗಲವಾದ ಬೋಗುಣಿಯಂಥಾ ಈ ವಾಟರ್‌ಬೌಲ್‌ಗಳು ಬೇಸಿಗೆಯಲ್ಲಿ ಅವುಗಳಿಗೆ ನೀರುಣಿಸುವುದರ ಜೊತೆಗೆ, ಅವುಗಳು ಸ್ವಚ್ಛಂದ ಜಲಕ್ರೀಡೆಗೆ, ಮುಳುಗೇಳುವ ನೀರಾಟಕ್ಕೆ ಬಳಕೆಯಾಗುತ್ತವೆ. ಮಾರುಕಟ್ಟೆಗೆ ಬಂದಿರುವ ಬರ್ಡ್ ಬಾಕ್ಸ್‌ಗಳಲ್ಲಿ ಕಾಳುಚೆಲ್ಲಿ ಕೆಲವರು ಇಡುತ್ತಾರೆ. ಆದರೆ ಸ್ವಚ್ಛಂದ ಗುಬ್ಬಚ್ಚಿಗಳು ಆ ಬರ್ಡ್ ಬಾಕ್ಸ್‌ಗಳನ್ನು ನಂಬಿ ಕಾಳು ತಿನ್ನಲು ಕನಿಷ್ಠ ಎರಡು ಮೂರು ದಿನ ವಾಚ್ ಮಾಡುತ್ತವೆ. ಆ ನಂತರದಲ್ಲಿ ಅವು ಕಾಳು ಕಚ್ಚುತ್ತವೆ. ಇಷ್ಟೆಲ್ಲಾ ಮಾಡಿ ಕಾಳಜಿ ತೋರಿಸುವ ಮಾನವೀಯ ಅಂತಃಕರಣ ಈಗ ಸಾಮಾನ್ಯರಲ್ಲೂ ಜಾಗೃತಗೊಂಡಿದೆ. ಅದೇ ಗುಬ್ಬಿ ದಿನದ ಜನಜಾಗೃತಿ.

ಕಡೇ ಪಕ್ಷ ಗುಬ್ಬಚ್ಚಿಗಳ ಉಳಿವಿಗಾಗಿ ಮಾಡುವ ಈ ಕನಿಷ್ಠ ಕಾಳಜಿಗಳು ಇಂಥದ್ದೇ ಇನ್ನಿತರ ಪಕ್ಷಿ ಸಂತತಿಯನ್ನು ಉಳಿಸಲು ನೆರವಾಗುತ್ತಿದೆ. ನಾಗರಿಕತೆ ಬೆಳೆದಂತೆ ಎಲ್ಲ ಕಡೆ ನಲ್ಲಿಗಳಲ್ಲಿ ನೀರು ಬಂದು ಬಾವಿಗಳು ಕಣ್ಮರೆಯಾಗಿವೆ. ಬಾವಿಗಳ ಕಲ್ಲುಪೊಟರೆಗಳ ನಡುವೆ, ತೋಟದಲ್ಲಿರುವ ಹೆಂಚಿನ ಮನೆಯ ತೊಲೆಗಳ ನಡುವೆ ಗೂಡು ಕಟ್ಟಿರುವ ಗುಬ್ಬಚ್ಚಿಗಳು ಮಾತ್ರ ಇಂದು ಉಳಿದಿವೆ. ಹೊಸ ಥರದ ಕ್ರಿಮಿನಾಶಕಗಳ ಸಿಂಪಡಣೆ ಅಧಿಕವಾಗಿರುವುದರಿಂದ ಆ ಕಾಳುಕಡ್ಡಿಗಳನ್ನು ತಿಂದು ಅರಗಿಸಿಕೊಳ್ಳುವ ಸ್ಥಿತಿಯಲ್ಲಿ ಈಗಿರುವ ಗುಬ್ಬಚ್ಚಿಗಳಿಲ್ಲ. ಹಾಗಂತ ಈ ಗುಬ್ಬಚ್ಚಿಗಳು ಹೆಚ್ಚೆಚ್ಚು ಆಹಾರ ಹುಡುಕುತ್ತಾ ವಲಸೆ ಹೋಗುವುದಿಲ್ಲ. ಸದಾ ಗುಂಪಿನಲ್ಲೇ ಇರುವ ಸಂಘಜೀವನದ ಸವಾರಿ ಈ ಗುಬ್ಬಿಗಳದ್ದು.

ನಾರ್ಥ್ ಆಫ್ರಿಕಾದಿಂದ, ಅಮೆರಿಕಾ, ಯೂರೋಪ್, ಏಷ್ಯಾ, ನ್ಯೂಜಿಲೆಂಡುಗಳ ಮೂಲಕ ಬೇರೆ ಬೇರೆ ದೇಶಗಳಲ್ಲಿ ಅಲ್ಲಿನ ದೇಸೀಯ ರಾಯಭಾರಿಗಳಂತೆ ಬದುಕಿದ ಈ ಬಲವಿಲ್ಲದ ಗುಬ್ಬಿಯ ಮೇಲೆ ಮನುಷ್ಯನ ಬದಲಾದ ಜೀವನಕ್ರಮ ಬ್ರಹ್ಮಾಸ್ತ್ರವನ್ನೇ ಪ್ರಯೋಗಿಸಿದೆ. ಅಳಿವಿನಂಚಿನಲ್ಲಿರುವ ಗುಬ್ಬಚ್ಚಿಗಳು ಪರಿಸರ ಉಳಿಸಿದರೆ ನೀವೂ ಉಳಿಯುತ್ತೀರಿ! ಇಲ್ಲದಿದ್ದರೆ ನನ್ನಂತೆ ನಿಮಗೂ ಕಾದಿದೆ ಸರ್ವನಾಶ ಎಂಬ ಎಚ್ಚರಿಕೆಯ ಘಂಟೆ ಬಾರಿಸಿಯೇ ತನ್ನ ಉಳಿವಿಗಾಗಿ ಹೋರಾಡುತ್ತಿವೆ. ತನ್ನ ಉಳಿವಿಗಾಗಿ ಅದು ಘಂಟೆಗೆ 24 ಮೈಲಿ ವೇಗದಲ್ಲಿ ಹಾರುತ್ತಿದೆ. ತುಪಾಕಿಯ ತುದಿಯಲ್ಲಿ ಗುಬ್ಬಿಗೂಡು ಕಟ್ಟುತ್ತಿದ್ದರೆ! ನಾವು ಮಾತ್ರ ಗುಬ್ಬಚ್ಚಿಗೂಡಿನಲ್ಲಿ ಕದ್ದು ಮುಚ್ಚಿ ಅಂತ ಚಿತ್ರಗೀತೆಯ ಹ್ಯಾಂಗೋವರ್‌ನಲ್ಲಿ ಹಾಯಾಗಿದ್ದೇವೆ. ಇವತ್ತು ಕಾರ್ಪೊರೇಟ್ ಸಂಸ್ಕೃತಿಯ ಅಟ್ಟಹಾಸದ ಮಧ್ಯೆ ನಮ್ಮ ಸ್ಥಳೀಯ ದೇಸೀ ಚಿಂತನೆಗಳು, ಕಲೆಗಳು, ಸಾಂಸ್ಕೃತಿಕ ಪರಿವೇಶಗಳು ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಹೆಣಗುತ್ತಿವೆ. ಮೊಬೈಲ್ ರೇಡಿಯೇಷನ್ನಿನಿಂದ ತಪ್ಪಿಸಿಕೊಳ್ಳಲು ಇತ್ತ ಗುಬ್ಬಚ್ಚಿಗಳು ಹೋರಾಡುತ್ತಿವೆ. ಈ ಎರಡನ್ನೂ ಮತ್ತೆ ವಾಪಸ್ಸು ಕರೆತರುತ್ತೇವೆ ಎಂಬ ಹೊಸ ಹುಮ್ಮಸ್ಸಿನಲ್ಲಿ ನಾವು 2009ರಲ್ಲಿ 'ಗುಬ್ಬಿಗೆ ಗೂಡು' ಕಟ್ಟಿಯೇ ಬಿಟ್ಟೆವು. ನಾಯಕ ನಟ ನೆನಪಿರಲಿ ಪ್ರೇಮ್ ಆಹ್ವಾನ ಪತ್ರಿಕೆಯಲ್ಲಿ ಹೆಸರಿಲ್ಲದಿದ್ದರೂ ಶೂಟಿಂಗ್ ಬಿಟ್ಟು ಓಡಿ ಬಂದರು. 9.9.2009ರಂದು ಸಾವಿರ ಜನರೆದುರು 'ಗುಬ್ಬಿ ಗೂಡು' ಕಟ್ಟಿದೆವು. ಆ ನೆನಪಿಗೆ ಹಂಸಲೇಖ ವೇದಿಕೆಯ ಮೇಲೆಯೇ ಹಾಡು ಬರೆದರು.

ದೇಸೀ ಮಾಮರ, ಮಾಮರದಲ್ಲೊಂದು
ಗುಬ್ಬಿಗೂಡು . . . .
ಆ ಗುಬ್ಬಿಗೂಡಲ್ಲಿ ಮೂರೊತ್ತು ಕೇಳುತ್ತಿರಲಿ
ಹಾಡು . . . .

ಚಿಂವ್ ಚಿವ ಚಿಂವ್ ಚಿವ ಚಿಂಬ್ ಚಿವ
ಗುಬ್ಬಿಗೂಡಲಿ ಚಿಂವ್ ಚಿವ
ಚಿಂವ್ ಚಿವ ಚಿಂವ್ ಚಿವ ಚಿಂಬ್ ಚಿವ
ಗುಬ್ಬಿಗೂಡಲಿ ಚಿಂವ್ ಚಿವ

ಹೀಗೆ ಬರೆದ ಹಾಡು ಎರಡು ವರ್ಷದ ನಂತರ 'ನಾನು ನನ್ನ ಕನಸು' ಸಿನಿಮಾಕ್ಕೆ ಅಳವಡಿಸಿ ಜನಜಾಗೃತಿ ಮೂಡಿಸಿತು. ಗುಬ್ಬಚ್ಚಿಗಳು ಬರೆಸಿಕೊಂಡ ಈ ಹಾಡನ್ನು ಬೆಳ್ಳಿತೆರೆಯ ಮೇಲೆ ನೋಡಿದಾಗ ತಲ್ಲಣಗಳ ನಡುವೆಯೂ ಈ ಗುಬ್ಬಚ್ಚಿಗಳು ನನ್ನಂಥಾ ಸಾಮಾನ್ಯನ ಎದೆಯಲ್ಲಿ ಪುಳಕ ಹುಟ್ಟಿಸಿದವು. ಇವತ್ತಿಗೂ ಗುಬ್ಬಿಯ ಹೆಸರಲ್ಲೇ ನನ್ನ ಜೀವ–ಜೀವನ ನಡೆಯುತ್ತಿದೆ. 'ಗುಬ್ಬಿ ಡೇ' ಯ ವಿಶ್ವದ ಸ್ಲೋಗನ್ ಏನು ಗೊತ್ತ? 'ಗುಬ್ಬಿಯನ್ನು ಉಳಿಸೋಣ ನಾವು ಉಳಿಯೋಣ ಅಂತ. ವಿಶ್ವದಲ್ಲಿ ಇದು ಎಷ್ಟು ಜನಕ್ಕೆ ಅನ್ವಯಿಸುತ್ತೋ ಗೊತ್ತಿಲ್ಲ! ಆದರೆ ನನಗಂತೂ ಇದು ಹೇಳಿ ಮಾಡಿಸಿಟ್ಟ ಸಾಲಿನಂತಿದೆ. ಪಬ್ಲಿಸಿಟಿಯ ಎಲ್ಲಾ ಮಾಧ್ಯಮಗಳು ಗುಬ್ಬಚ್ಚಿಗಳ ಉಳಿವಿಗಾಗಿ ಜನ ಜಾಗೃತಿ ಮೂಡಿಸಲು ತಮ್ಮ ಶಕ್ತಿ ಮೀರಿ ಬೆಂಬಲಿಸಿವೆ. 'ಗುಬ್ಬಿ ಡೇ' ಮಾರ್ಚ್ 20ಕ್ಕೆ ಮುಗಿಯಬಾರದು. ಅಂದು ಅದು ಆರಂಭವಾಗಬೇಕು. ಬದಲಾದ ಈ ಜೀವನ ಕ್ರಮದಲ್ಲೂ ಅಳಿದುಳಿದ ಗುಬ್ಬಿ ಸಂಕುಲವನ್ನು ನಾವು ಉಳಿಸಿಕೊಳ್ಳಬೇಕು, ಅವುಗಳ ಜೊತೆ ನಾವೂ ಉಳಿಯಬೇಕು. ಅದಕ್ಕಾಗಿ ಮಾರ್ಚ್ 20ರ ನಂತರವೂ ಗುಬ್ಬಚ್ಚಿಗಳ ಗುನುಗು ನಿರಂತರವಾಗಿ ಚಲಿಸುತ್ತಿರಬೇಕು. ಆಗ ಮಾತ್ರ 'ಗುಬ್ಬಿ ಡೇ' ಜೀವಂತವಾಗಿರುತ್ತದೆ, ಏನಂತೀರಿ?

ಯುವ ಜನರ ಸಂಶೋಧನಾ ಸಾಮರ್ಥ್ಯ ಸಮರ್ಥವಾಗಿ ಬಳಸಿಕೊಳ್ಳಬೇಕು

ಕಾರ್ಯಾಗಾರದಲ್ಲಿ ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಕೆ.ಎಸ್.ರಂಗಪ್ಪ ಸಲಹೆ

ಮೈಸೂರು, ಏ.1(ಬಿಎಲ್‌ಯು)– ವಿಶ್ವದಲ್ಲಿ ಭಾರತ ವಿಜ್ಞಾನ, ತಂತ್ರಜ್ಞಾನ ಮತ್ತು ಸಂಶೋಧನೆಯಲ್ಲಿ ಮುಂದಾಳತ್ವ ವಹಿಸಲು ಯುವ ಜನರ ಸಂಶೋಧನಾ ಸಾಮರ್ಥ್ಯವನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು ಎಂದು ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಸಲಹೆ ನೀಡಿದರು.

ಮೈಸೂರಿನ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಭಾನುವಾರ ವಿಶ್ವವಿದ್ಯಾನಿಲಯದ ಅಂತರರಾಷ್ಟ್ರೀಯ ಸಂಬಂಧ ವಿಭಾಗ, ಮಹಾರಾಜ ಕಾಲೇಜು ಮತ್ತು ಕಾವೇರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಸಂಯುಕ್ತವಾಗಿ ಆಯೋಜಿಸಿದ್ದ ಯೂನಿವರ್ಸಿಟಿ ಕನೆಕ್ಟ್ ಹಬ್ ಎಂಗೇಜಿಂಗ್ ಯಂಗ್ ಮೈಂಡ್ಸ್ ಕುರಿತ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಯುವ ಜನರ ಬುದ್ಧಿವಂತಿಕೆ, ಕೌಶಲ್ಯತೆ ಹಾಗೂ ಸಂಶೋಧನಾ ಸಾಮರ್ಥ್ಯವನ್ನು ಭಾರತ ಬಳಸಿಕೊಳ್ಳಬೇಕು ಎಂದು ಹೇಳಿದರು.



ಮೈಸೂರು ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ನಡೆದ ಯೂನಿವರ್ಸಿಟಿ ಕನೆಕ್ಟ್ ಹಬ್ ಎಂಗೇಜಿಂಗ್ ಯಂಗ್ ಮೈಂಡ್ಸ್ ಕುರಿತ ಕಾರ್ಯಾಗಾರದಲ್ಲಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಮಾತನಾಡಿದರು.

ಈ ವೇಳೆ ಮಾತನಾಡಿದ ನವದೆಹಲಿಯ ಆರ್‌ಐಎಸ್ ಸದಸ್ಯ ಡಾ.ಶೇಷಾದ್ರಿ, ರಾಷ್ಟ್ರೀಯ ಏಳಿಗೆಗೆ ಯುವಕರು ಶಕ್ತಿಯಾಗಲಿದ್ದಾರೆ. ವಿಜ್ಞಾನ, ತಂತ್ರಜ್ಞಾನ ಮತ್ತು ಸಂಶೋಧನೆಯ ಸವಾಲುಗಳನ್ನು ಪರಿಹರಿಸಲು ಯುವ ಜನರ ಹೊಸ ಆಲೋಚನೆಗಳು ಪೂರಕವಾಗಿರುತ್ತದೆ. ಸವಾಲುಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಸರ್ಕಾರದ ನೀತಿ ರೂಪಕರಲ್ಲಿ ಸಲ್ಲಿಸಲು ಆರ್‌ಐಎಸ್ ವೇದಿಕೆಯಾಗಿ ಕೆಲಸ ಮಾಡಲಿದೆ ಎಂದು ಭರವಸೆ ನೀಡಿದರು.

ಇಂತಹ ವಿಚಾರ ಸಂಕಿರಣಗಳಿಂದ ವಿದ್ಯಾರ್ಥಿಗಳ ಜ್ಞಾನಾರ್ಜನೆ ಇಮ್ಮಡಿಗೊಳ್ಳುತ್ತದೆ ಎಂದು ತಮಿಳುನಾಡಿನ ಸಿತ್ರಿಎಸ್‌ನ ಮಹಾ ನಿರ್ದೇಶಕ ಆರ್.ಎಸ್.ವಾಸನ್ ಅಭಿಪ್ರಾಯಪಟ್ಟರು.

ಇತ್ತೀಚಿನ ದಿನಗಳಲ್ಲಿ ಭಾರತ ವಾಣಿಜ್ಯೋದ್ಯಮಿಗಳನ್ನು ತಯಾರಿಸುತ್ತಿದೆ. ಈ ಮೂಲಕ ಉದ್ಯೋಗದಾತರು ಸೃಷ್ಟಿಯಾಗುತ್ತಿದ್ದಾರೆ. ಇದರಿಂದ ಭಾರತ ಭವಿಷ್ಯತ್ತಿನಲ್ಲಿ ಇತರೆ ದೇಶಗಳ ಅಭಿವೃದ್ಧಿಗೆ ಪೈಪೋಟಿ ನೀಡಿ ಮುಂಚೂಣಿಗೆ ಬಂದು ನಿಲ್ಲುತ್ತದೆ ಎಂದು ವಿದ್ಯಾವರ್ಧಕ ಕಾಲೇಜಿನ ಪ್ರಾಂಶುಪಾಲ ಡಾ.ಬಿ. ಸದಾಶಿವೇಗೌಡ ಹೇಳಿದರು.

ವಿಚಾರ ಸಂಕಿರಣದಲ್ಲಿ ದೇಶದ ವಿವಿಧ ರಾಜ್ಯಗಳ 200ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು. ಈ ವೇಳೆ 24 ಪ್ರತಿನಿಧಿಗಳು ವಿವಿಧ ವಿಚಾರಗಳ ಕುರಿತು ವೈಜ್ಞಾನಿಕ ಪ್ರಬಂಧಗಳನ್ನು ಪ್ರಸ್ತುತಪಡಿಸಿದರು. ಕಾರ್ಯಕ್ರಮದ ಸಂಯೋಜಕ ಡಾ.ಕೃಷ್ಣಪ್ರಸಾದ್, ವಿಚಾರ ಸಂಕಿರಣದ ಆಯೋಜಕ ಡಾ.ಭಾರತಿ ಹಿರೇಮಠ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಬಳ್ಳೆ ಶಿಬಿರದಲ್ಲಿ ಅರ್ಜುನನ ಹಿಂಬಾಲಿಸಿದ ಕುಮಾರಸ್ವಾಮಿ!

● ಕಳೆದ ಕೆಲವು ದಿನಗಳಿಂದ ಶಿಬಿರಕ್ಕೆ ವಾಪಸ್ಸಾಗಿರಲಿಲ್ಲ ● 2-3 ದಿನದ ಹಿಂದೆಯೇ ಮೃತಪಟ್ಟಿರುವ ಶಂಕೆ



ಬಳ್ಳೆ ಆನೆ ಕ್ಯಾಂಪ್‌ನಲ್ಲಿದ್ದ ಕುಮಾರಸ್ವಾಮಿ ಆನೆ.



ಅರಣ್ಯ ಪ್ರದೇಶದಲ್ಲಿ ದೊರೆತ ಕುಮಾರಸ್ವಾಮಿ ಆನೆಯ ಕಳೇಬರ.

ಮೈಸೂರು,ಏ.1(ಎಂಟಿವೈ)– ಕಾಕನ ಕೋಟೆ ಅರಣ್ಯ ವ್ಯಾಪ್ತಿಯ ಬಳ್ಳೆ ಶಿಬಿರದಲ್ಲಿದ್ದ ಏಕೈಕ ಆನೆ ಕುಮಾರಸ್ವಾಮಿ (46)ಯ ಕಳೇಬರ ನಾಗರಹೊಳೆಯ ಅಭಯಾರಣ್ಯದ ಆನೆಕಲ್ಲು ದಿಬ್ಬದ ದಾರಿ ಬಳಿ ಪತ್ತೆಯಾಗಿದೆ.

ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲೂಕು ವ್ಯಾಪ್ತಿ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಡಿ.ಬಿ.ಕುಪ್ಪೆ ವಲಯದ ಮಾನಂದವಾಡಿ ಮುಖ್ಯ ರಸ್ತೆಯಲ್ಲಿರುವ ಬಳ್ಳೆ ಆನೆ ಕ್ಯಾಂಪ್‌ನಲ್ಲಿ ಕಳೆದ 23 ವರ್ಷದಿಂದ ಇದ್ದ 46 ವರ್ಷದ ಕುಮಾರಸ್ವಾಮಿ ಆನೆ ಮೃತಪಟ್ಟಿದ್ದು, ಇದೀಗ ಬಳ್ಳೆ ಶಿಬಿರ ಆನೆಗಳಿಲ್ಲದೆ ಭಣಗುಡು ವಂತಾಗಿದೆ. ಈ ಶಿಬಿರದಲ್ಲಿ ದಸರಾ ಆನೆ ಅರ್ಜುನ ಹಾಗೂ ಕುಮಾರಸ್ವಾಮಿ ಇದ್ದವು. ಕೆಲ ವರ್ಷಗಳ ಹಿಂದೆ ಚಾಮರಾಜನಗರ ಜಿಲ್ಲೆಯ ಕೆ.ಗುಡಿ ಕ್ಯಾಂಪ್ ನಿಂದ ದಸರಾ ಕುಮ್ಕಿ ಆನೆ ದುರ್ಗಾ ಪರಮೇಶ್ವರಿ ಆನೆಯನ್ನು ಬಳ್ಳೆ ಕ್ಯಾಂಪ್‌ಗೆ ತಂದು ಅರ್ಜುನನಿಗೆ ಸಂಗಾತಿಯಾಗಿಸ ಲಾಗಿತ್ತು. ಆದರೆ, ದುರ್ಗಾಪರಮೇಶ್ವರಿ ಕರುಳುಬೇನೆಯಿಂದ ಕಳೆದ ವರ್ಷ ಮೃತಪಟ್ಟಿದ್ದರೆ, 2023ರ ಡಿ.6ರಂದು ಕಾಡಾನೆ ಸೆರೆ ಕಾರ್ಯಾಚರಣೆ ವೇಳೆ ಹಾಸನದ ಎಸಳೂರು ವಲಯದಲ್ಲಿ ಎದುರಾಳಿ ದಾಳಿಗೆ ದಸರಾ ಆನೆ ಅರ್ಜುನ ಉಸಿರು ಚೆಲ್ಲಿತ್ತು.

ಆದರೆ, ಕಳೆದ ಕೆಲವು ತಿಂಗಳಿಂದ ಬಳ್ಳೆ ಶಿಬಿರದಲ್ಲಿ ಏಕಾಂಗಿಯಾಗಿದ್ದ ಕುಮಾರಸ್ವಾಮಿ ಆನೆ ಇದೀಗ ಮೃತಪಟ್ಟಿರುವುದು ಬಳ್ಳೆ ಶಿಬಿರದಲ್ಲಿ ನೀರವ ಮೌನ ಆವರಿಸಿದೆ. ಕುಮಾರಸ್ವಾಮಿಗೆ ದೃಷ್ಟಿ ದೋಷವಿತ್ತು. ಅಲ್ಲದೆ, ಕೆಲ ತಿಂಗಳ ಹಿಂದೆ ಅದರ ಮಾವುತ ಮೃತಪಟ್ಟಿದ್ದರು. ಕಾವಾಡಿಯ ಪೋಷಣೆಯಲ್ಲಿ ಕುಮಾರಸ್ವಾಮಿ ಕಾಲ ಕಳೆಯುತ್ತಿತ್ತು. ಕೆಲ ದಿನಗಳ ಹಿಂದೆ ಕ್ಯಾಂಪ್‌ನಿಂದ ಮೇವಿಗಾಗಿ ಅರಣ್ಯ ಪ್ರದೇಶಕ್ಕೆ ತೆರಳಿದ್ದ ಕುಮಾರಸ್ವಾಮಿ ಆನೆ ವಾಪಸ್ಸಾಗಿರಲಿಲ್ಲ. ಕಾಡಿನಲ್ಲಿ ಮೇಯುವ ವೇಳೆ ಇಲ್ಲವೆ ಮರಕ್ಕೆ ಕತ್ತು ಉಜ್ಜಿಕೊಳ್ಳುವ ವೇಳೆ ಅದರ ಕೊರಳಿಂದ ಗಂಟೆ ಕಳಚಿ ಬಿದ್ದಿತ್ತು. ಇದರಿಂದ ಕುಮಾರಸ್ವಾಮಿ ಆನೆ ಯಾವ ಭಾಗದಲ್ಲಿದೆ ಎಂದು ಗುರುತಿಸಲು ಸಾಧ್ಯವಾಗಿರಲಿಲ್ಲ. ಆದರೂ ಕೂಂಬಿಂಗ್ ಕಾರ್ಯಾಚರಣೆ ನಡೆಸಲಾಗುತ್ತಿತ್ತು.

ಇಂದು ಬೆಳಗ್ಗೆ 7.30ರಲ್ಲಿ ಆನೆಕಲ್ಲು ದಿಬ್ಬದ ದಾರಿಯಲ್ಲಿ ಅರಣ್ಯ ಸಿಬ್ಬಂದಿ ಗಸ್ತು ತಿರುಗುತ್ತಿದ್ದಾಗ ಆನೆಯೊಂದರ ಕಳೇಬರ ಪತ್ತೆಯಾಗಿದೆ. ಗಸ್ತು ಸಿಬ್ಬಂದಿ ಪರಿಶೀಲಿಸಿದಾಗ ಅದು, ಸಾಕಾನೆ ಕುಮಾರಸ್ವಾಮಿಯದ್ದು ಎಂದು ಖಚಿತವಾಗಿದೆ. ಕೂಡಲೇ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದಿದ್ದಾರೆ. ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಹರ್ಷಕುಮಾರ್ ಚಿಕ್ಕನರಗುಂದ, ಎಸಿಎಫ್ ಕೆ.ಎನ್.ರಂಗಸ್ವಾಮಿ, ಡಿ.ಬಿ. ಕುಪ್ಪೆ ಆರ್‌ಎಫ್‌ಓ ಎಸ್.ಡಿ.ಮಧು ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಹೆಚ್.ಡಿ.ಕೋಟೆಯ ಪಶುವೈದ್ಯಾಧಿಕಾರಿ ಡಾ.ಬಿ.ಬಿ. ಪ್ರಸನ್ನ ಮರಣೋತ್ತರ ಪರೀಕ್ಷೆ ನಡೆಸಿದರು. ಮೇಲ್ನೋಟಕ್ಕೆ ಕರುಳಿನ ಸೋಂಕು, ಫುಡ್ ಇನ್ಫೆಕ್ಷನ್ ಆಗಿರುವುದು ಕಂಡು ಬಂದಿದೆ. ಕಳೇಬರ ದಟ್ಟ ಅರಣ್ಯದಲ್ಲಿರುವುದರಿಂದ ದಂತ ಬೇರ್ಪಡಿಸಿ, ವನ್ಯಜೀವಿಗಳಿಗೆ ಆಹಾರವಾಗಲು ಅಲ್ಲೇ ಬಿಡಲಾಗಿದೆ.

ಸಿದ್ದಗಂಗಾ ಶ್ರೀಗಳ ಉದಾತ್ತ ಚಿಂತನೆ, ಸಾಮಾಜಿಕ ಸೇವೆ ಸದಾ ಸ್ಮರಣೀಯ

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅಭಿಮತ



ಮೈಸೂರು, ಏ.1– ನಡೆದಾಡುವ ದೇವರು, ತ್ರಿವಿಧ ದಾಸೋಹಿ ಡಾ.ಶಿವಕುಮಾರಸ್ವಾಮಿಗಳ 117ನೇ ಜನ್ಮದಿನಾಚರಣೆಯನ್ನು ಮಾಜಿ ಶಾಸಕ ಎಂ.ಕೆ. ಸೋಮಶೇಖರ್ 'ಜನನಿ' ಕಚೇರಿಯಲ್ಲಿ ಶಿವಕುಮಾರಸ್ವಾಮಿಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು.

ನಂತರ ಮಾತನಾಡಿದ ಸೋಮಶೇಖರ್, ಸಿದ್ದಗಂಗಾ ಶ್ರೀಗಳಂತಹ ಮಹನೀಯರನ್ನು ನೆನೆಯುವುದೇ ಒಂದು ಪುಣ್ಯದ ಕೆಲಸ. ಶ್ರೀಗಳು ತಮ್ಮ ಜೀವನದುದ್ದಕ್ಕೂ ಸಾಮಾಜಿಕ ಸೇವೆಯ ಮೂಲಕವೇ ಮನೆ ಮಾತಾಗಿದ್ದರು. ಶಿಕ್ಷಣ, ಕಾಯಕ, ದಾಸೋಹದ ತತ್ವವನ್ನು ಅನುಸರಿಸುತ್ತಾ ತಮ್ಮ ಉದಾತ್ತ ಚಿಂತನೆಗಳನ್ನು, ಸಾಂಸ್ಕೃತಿಕ ಮತ್ತು ಧಾರ್ಮಿಕ ಕೃಷಿಯನ್ನು ಈ ನಾಡಿಗೆ ಅರ್ಪಿಸಿದ್ದರು. ಜಗತ್ತಿನ ಎಲ್ಲೆಡೆ ತಮ್ಮ ಶಿಷ್ಯ ವೃಂದವನ್ನು ಹೊಂದಿದ್ದ ಶ್ರೀಗಳು ನಾಡಿಗೆ, ದೇಶಕ್ಕೆ ಮಹತ್ತರವಾದ ಕೊಡುಗೆ ನೀಡಿದ್ದರು. ಹಾಗಾಗಿ ಶಿವಕುಮಾರಸ್ವಾಮಿಗಳು ಈ ಜಗತ್ತು ಇರುವಷ್ಟು ಕಾಲವೂ ತಮ್ಮ ಅನನ್ಯ ಸೇವೆಯ ಮೂಲಕ ಜೀವಂತವಾಗಿರುತ್ತಾರೆ ಎಂದು ಸ್ಮರಿಸಿದರು.

ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಮಾತನಾಡಿ, ಶ್ರೀಗಳು ಲಕ್ಷಾಂತರ ವಿದ್ಯಾರ್ಥಿಗಳಿಗೆ ಅಕ್ಷರ, ಅನ್ನ ಮತ್ತು ಅರಿವಿನ ಮಹತ್ವವನ್ನು ಕಲಿಸಿದ್ದಾರೆ. 12ನೇ ಶತಮಾನದಲ್ಲಿ ಬಸವಾದಿ ಶರಣರು ಕಾಯಕ ದಾಸೋಹದ ಮಹತ್ವ ತಿಳಿಸಿದರು. 21ನೇ ಶತಮಾನದಲ್ಲಿ ಸಿದ್ದಗಂಗಾ ಶ್ರೀಗಳು ಅದನ್ನು ಮುಂದುವರೆಸಿಕೊಂಡು ಬಂದಿದ್ದರು. ಜಾತ್ಯತೀತವಾಗಿ, ಧರ್ಮಾತೀತವಾಗಿ, ಪಕ್ಷಾತೀತವಾಗಿ ತಮ್ಮ ಸೇವೆಯನ್ನು ಈ ಜಗತ್ತಿಗೆ ನೀಡಿದ್ದು 10,000 ವಿದ್ಯಾರ್ಥಿಗಳಿಗೆ ಪ್ರತಿನಿತ್ಯವೂ ಅನ್ನದಾಸೋಹವನ್ನೂ ಮುನ್ನಡೆಸಿದ್ದರು. ನಾವು ನಮ್ಮ ಕೈಲಾದ ಸೇವೆಯನ್ನಾದರು ಮಾಡುವ ಮೂಲಕ ಅವರ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕಿದೆ. ಆ ಮೂಲಕ ಅವರ ಜಯಂತಿಯನ್ನು ಆಚರಿಸಿದ್ದಕ್ಕೂ ಅರ್ಥ ಬರುತ್ತದೆ ಎಂದರು.

ಈ ವೇಳೆ ಕಾಂಗ್ರೆಸ್ ಮುಖಂಡರಾದ ರವಿಶಂಕರ್, ವಿಜಯ್ ಕುಮಾರ್, ಅಸಂಘಟಿತ ಕಾರ್ಮಿಕ ಕಾಂಗ್ರೆಸ್ ಘಟಕದ ವಿನಯ್ ಕುಮಾರ್, ಶಿವಕುಮಾರ್, ಯುವ ಕಾಂಗ್ರೆಸ್ ಅಧ್ಯಕ್ಷ ರಾಕೇಶ್, ಮುಖಂಡರಾದ ಗೃಹಶೋಭೆ ಕೃಷ್ಣ, ಕೇಬಲ್ ಶೇಖರ್, ಸುಂದರ್, ಸುನೀಲ್, ಮಹೇಶ್, ಮನಸು, ನಾಗಮಹಾದೇವ, ನದೀಂ ಉಪಸ್ಥಿತರಿದ್ದರು.

ಮೈಸೂರಲ್ಲಿ ಏ.16ರಿಂದ ಬೇಸಿಗೆ ಶಿಬಿರ

ಮೈಸೂರು: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಮತ್ತು ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿ ವತಿಯಿಂದ ಏ.16ರಿಂದ ಮೇ 16 ರವರೆಗೆ 10 ರಿಂದ 17 ವರ್ಷ ವಯೋಮಿತಿಯ ಶಾಲಾ–ಕಾಲೇಜಿನ ವಿದ್ಯಾರ್ಥಿಗಳಿಗೆ ಬೇಸಿಗೆ ತರಬೇತಿ ಶಿಬಿರವನ್ನು ಆಯೋಜಿಸಲಾಗಿದೆ. ಬೇಸಿಗೆ ಶಿಬಿರದಲ್ಲಿ ಭಾಗವಹಿಸಲು ಆಸಕ್ತಿ ಇರುವ ಶಾಲಾ–ಕಾಲೇಜು ವಿದ್ಯಾರ್ಥಿಗಳು www.gethnaa.arg ನಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ನಜರ್‌ಬಾದ್‌ನಲ್ಲಿರುವ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿನ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರ ದೂ.ಸಂ: 0821–2564179 ಅಥವಾ ಬೆಂಗಳೂರಿನ ನೃಪತುಂಗ ರಸ್ತೆಯಲ್ಲಿರುವ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ದೂ.ಸಂ: 18004251448 ಅನ್ನು ಸಂಪರ್ಕಿಸಬಹುದು.

ಮಾರ್ಚ್‌ನಲ್ಲಿ ರೂ. 1.78 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹ

ನವದೆಹಲಿ: ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮೂಲಕ 2023–24ನೇ ಹಣಕಾಸು ವರ್ಷ ಮಾರ್ಚ್‌ನಲ್ಲಿ 1.78 ಲಕ್ಷ ಕೋಟಿ ತೆರಿಗೆ ಸಂಗ್ರಹವಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯವು ಸೋಮವಾರ ತಿಳಿಸಿದೆ.

ಕಳೆದ ಆರ್ಥಿಕ ವರ್ಷದ ಸಂಗ್ರಹವಾಗಿದ್ದ ವರಮಾನಕ್ಕೆ ಹೋಲಿಸಿದರೆ ಶೇ 11.5ರಷ್ಟು ಏರಿಕೆಯಾಗಿದೆ. ಆದರೆ, ಪ್ರಸಕ್ತ ವರ್ಷದ ಜನವರಿಯಲ್ಲಿ ಸಂಗ್ರಹವಾಗಿದ್ದ 1.72 ಲಕ್ಷ ಕೋಟಿಗೆ ಹೋಲಿಸಿದರೆ ಏರಿಕೆ ಆಗಿದೆ. ದೇಶೀಯ ವಹಿವಾಟು ಜಿಎಸ್‌ಟಿ ಸಂಗ್ರಹದ ಮೇಲೆ ಪರಿಣಾಮ ಬೀರಿದೆ ಎಂದು ಸಚಿವಾಲಯವು ಹೇಳಿದೆ.

2023–24ನೇ ಆರ್ಥಿಕ ವರ್ಷದಲ್ಲಿ ಫೆಬ್ರವರಿವರೆಗೆ ಒಟ್ಟು 18.40 ಲಕ್ಷ ಕೋಟಿ ವರಮಾನ ಸಂಗ್ರಹವಾಗಿತ್ತು. 2022–23ನೇ ಹಣಕಾಸು ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ. 11.7ರಷ್ಟು ಏರಿಕೆಯಾಗಿದೆ.

ಪೊಲೀಸ್ ವೈದ್ಯಕೀಯ ತಪಾಸಣಾ ಕೇಂದ್ರದಲ್ಲಿ ಸಾರ್ವಜನಿಕರಿಗೆ ಅವಕಾಶ

ಮೈಸೂರು, ಏ.1(ಎಂಕೆ)– ನಗರದ ಜಲಪುರಿಯಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಪೊಲೀಸ್ ವೈದ್ಯಕೀಯ ತಪಾಸಣಾ ಆಸ್ಪತ್ರೆಯಲ್ಲಿ ಸಾರ್ವಜನಿಕರಿಗೂ ಅವಕಾಶ ಕಲ್ಪಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ತಿಳಿಸಿದ್ದಾರೆ.

ಮೈಸೂರು ನಗರ ಪೊಲೀಸ್ ಘಟಕದ ಸಹಯೋಗದೊಂದಿಗೆ, ಪೊಲೀಸ್ ಕಲ್ಯಾಣ ಕಾರ್ಯಕ್ರಮದಡಿಯಲ್ಲಿ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿ ಉಪಯೋಗಕ್ಕೆ ಜಲಪುರಿಯಲ್ಲಿ ನೂತನ ವೈದ್ಯಕೀಯ ತಪಾಸಣಾ ಕೇಂದ್ರವನ್ನು ನಿರ್ಮಿಸಲಾಗಿದೆ. ಈ ಕೇಂದ್ರದಲ್ಲಿ ಸಾರ್ವಜನಿಕರು ಸಹ ಸರ್ಕಾರಿ ಆಸ್ಪತ್ರೆಯಲ್ಲಿ ನಿಗಧಿಪಡಿಸಿರುವ ದರವನ್ನು ನೀಡಿ ವೈದ್ಯಕೀಯ ಸೌಲಭ್ಯ ಪಡೆಯಬಹುದಾಗಿದೆ ಎಂದು ಮೈಸೂರು ನಗರದ ಪೊಲೀಸ್ ವೇಲ್‌ಫೇರ್ ಟ್ರಸ್ಟ್ ಸಭೆಯಲ್ಲಿ ತಿರ್ಮಾನಿಸಲಾಗಿದೆ. ಆದ್ದರಿಂದ ಸಾರ್ವಜನಿಕರು ವೈದ್ಯಕೀಯ ತಪಾಸಣಾ ಕೇಂದ್ರವನ್ನು ಸದುಪಯೋಗಪಡಿಸಿಕೊಳ್ಳುವಂತೆ ಆಯುಕ್ತರು ಪತ್ರಿಕಾ ಪ್ರಕಟಣೆಯಲ್ಲಿ ಕೋರಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿ ಸ್ಟಾರ್ ಚಂದ್ರು ನಾಮಪತ್ರ ಸಲ್ಲಿಕೆ

ಮಂಡ್ಯದಲ್ಲಿ ಶಕ್ತಿ ಪ್ರದರ್ಶನ, ಉಪ ಮುಖ್ಯಮಂತ್ರಿ ಡಿಕೆಶಿ, ಚಲುವರಾಯಸ್ವಾಮಿ ಸಾಥ್





ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಅವರು ಸೋಮವಾರ ನಾಮಪತ್ರ ಸಲ್ಲಿಸಿದರು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ, ಶಾಸಕ ನರೇಂದ್ರ ಸ್ವಾಮಿ, ರೈತ ಮುಖಂಡ ದಿವಂಗತ ಕೆ.ಎಸ್.ಪುಟ್ಟಣ್ಣಯ್ಯ ಪತ್ನಿ ಸುನಿತಾ ಪುಟ್ಟಣ್ಣಯ್ಯ ಉಪಸ್ಥಿತರಿದ್ದರು. ಮತ್ತೊಂದು ಚಿತ್ರದಲ್ಲಿ ಕಾಂಗ್ರೆಸ್ ಶಕ್ತಿಪ್ರದರ್ಶನವನ್ನು ಕಾಣಬಹುದು.

ಮಂಡ್ಯ,ಏ.1– ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಅವರು ಸೋಮವಾರ ಮಧ್ಯಾಹ್ನ ನಾಮಪತ್ರ ಸಲ್ಲಿಕೆ ಮಾಡಿದ್ದು, ಈ ಕಾರ್ಯಕ್ರಮವು ಮಂಡ್ಯದಲ್ಲಿನ ಕಾಂಗ್ರೆಸ್ ಶಕ್ತಿ ಪ್ರದರ್ಶನಕ್ಕೂ ಸಾಕ್ಷಿಯಾಯಿತು.

ಮಂಡ್ಯ ಜಿಲ್ಲಾಧಿಕಾರಿ ಕಚೇರಿಗೆ ಆಗಮಿಸಿದ ಅಭ್ಯರ್ಥಿ ಸ್ಟಾರ್ ಚಂದ್ರು, ತಲಾ ಮೂರು ಸೆಟ್‌ಗಳಲ್ಲಿ ನಾಮಪತ್ರ ಸಲ್ಲಿಕೆ ಮಾಡಿದರು. ಈ ವೇಳೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ, ಶಾಸಕ ಪಿ.ಎಂ.ನರೇಂದ್ರಸ್ವಾಮಿ, ರೈತ ನಾಯಕ ದಿ.ಕೆ.ಎಸ್.ಪುಟ್ಟಣ್ಣಯ್ಯ ಪತ್ನಿ ಸುನೀತಾ ಪುಟ್ಟಣ್ಣಯ್ಯ ಸಾಥ್ ನೀಡಿದರು.

ಇದಕ್ಕೂ ಮುನ್ನ ನಗರದ ಶಕ್ತಿ ದೇವತೆ ಕಾಳಿಕಾಂಭ ದೇಗುಲದಿಂದ ಮೆರವಣಿಗೆ ಸಾಗಿತು. ಸಾವಿರಾರು ಮಂದಿ ಕಾರ್ಯಕರ್ತರು ಚಂದ್ರು ಅವರಿಗೆ ಬೆಂಬಲ ಸೂಚಿಸಲು ಜಿಲ್ಲೆಯ ನಾನಾ ಭಾಗಗಳಿಂದ ಆಗಮಿಸಿದ್ದರು. ನಾಮಪತ್ರ ಸಲ್ಲಿಕೆಗೂ ಮುನ್ನಾ ನಾನಾ ದೇವಸ್ಥಾನಗಳಿಗೆ ಪೂಜೆ ಸಲ್ಲಿಸಿ ದೇವರ ಆಶೀರ್ವಾದ ಪಡೆಯಲಾಯಿತು. ಕಾಳಿಕಾಂಬ ದೇವಸ್ಥಾನದಿಂದ ಜಿಲ್ಲಾಧಿಕಾರಿ ಕಚೇರಿಗೆ ತೆರೆದ ವಾಹನದಲ್ಲಿ ಮೆರವಣಿಗೆಯಲ್ಲಿ ಸಾಗಿದರು. ದೇವಸ್ಥಾನದ ಬಳಿ ಡೊಳ್ಳು ಕುಣಿತ, ಜಾನಪದ ಕಲಾತಂಡಗಳು ಮೇಳೈಸಿದ್ದವು.

ರಸ್ತೆಯುದ್ದಕ್ಕೂ ಕಾಂಗ್ರೆಸ್ ಪಕ್ಷದ ಚಿಹ್ನೆಯ ಟೋಪಿ, ಬಾವುಟ, ಶಾಲುಗಳು ರಾರಾಜಿಸುತ್ತಿದ್ದವು. ಕಾರ್ಯಕರ್ತರ ಕೈಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ ಅವರ ಫ್ಲೆಕ್ಸ್ ಹಾಗೂ ರೈತ ಸಂಘದ ಹಸಿರು ಶಾಲುಗಳು ದಾರಿಯುದ್ದಕ್ಕೂ ಕಂಡು ಬಂದವು. ಕಾರ್ಯಕರ್ತರ ಜಯ ಘೋಷ ಮುಗಿಲು ಮುಟ್ಟುತ್ತಿತ್ತು.

ಬಳಿಕ ಸಾರ್ವಜನಿಕರನ್ನುದ್ದೇಶಿಸಿ ಮಾತನಾಡಿದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು), ನಾನು ಮಂಡ್ಯ ಜಿಲ್ಲೆಯ ರೈತನ ಮಗ. ನನ್ನ ಜನ್ಮ ಭೂಮಿ ಮಂಡ್ಯ, ನನ್ನ ಕರ್ಮಭೂಮಿ ಮಂಡ್ಯ, ಮಣ್ಣಾಗುವ ಭೂಮಿ ಮಂಡ್ಯ. ಜನಸೇವೆಗೆಂದೇ ನಿಮ್ಮ ಮುಂದೆ ಬಂದಿದ್ದೇನೆ ಎಂದರು.

ಮಂಡ್ಯ ಜಿಲ್ಲೆಯ ಅಭಿವೃದ್ಧಿಯ ಕನಸು ನನ್ನದು. ಆ ಕನಸನ್ನು ನನಸು ಮಾಡಲು ಚುನಾವಣೆಗೆ ನಿಂತಿದ್ದೇನೆ. ನಿಮ್ಮೆಲ್ಲರ ಬೆಂಬಲ, ಆಶೀರ್ವಾದ ಕೊಡಬೇಕೆಂದು ಮನವಿ ಮಾಡಿದ ಅವರು, ಮಂಡ್ಯ ಜಿಲ್ಲೆ ರೈತರ ಜಿಲ್ಲೆ, ಇಂಡಿಯಾಕ್ಕೆ ಅನ್ನ ಕೊಡುವ ಜಿಲ್ಲೆ. ಮಂಡ್ಯ ಜಿಲ್ಲೆಯಲ್ಲಿ ಹುಟ್ಟಿ ಬೆಳೆದ ನನಗೆ ನನ್ನ ಜಿಲ್ಲೆಯ ನಾಡಿಮಿಡಿತ ಗೊತ್ತು ನನ್ನ ಮಾತು ಕಡಿಮೆ, ಕೆಲಸ ಮಾಡಿ ತೋರಿಸುತ್ತೇನೆ ಎಂದು ಹೇಳಿದರು.

ನಿಮ್ಮ ಸೇವೆಗಾಗಿ ನಿಮ್ಮ ಆಶೀರ್ವಾದದಿಂದ ಇಲ್ಲೇ ಮನೆ ಮಾಡಿದ್ದೇನೆ. ನನ್ನ ಗೆಲುವು ಮಂಡ್ಯದ ರೈತರ ಗೆಲುವು. ನನ್ನ ಧ್ವನಿ ಮಂಡ್ಯ ರೈತರ ಧ್ವನಿ. ಮಂಡ್ಯದ ಅಭಿವೃದ್ಧಿಯೇ ನನ್ನ ಗುರಿ. ನನ್ನನ್ನು ಆಶೀರ್ವದಿಸಿ, ಬೆಂಬಲಿಸಿ, ಗೆಲ್ಲಿಸಿ ಎಂದು ಮನವಿ ಮಾಡಿದರು.

ಈ ವೇಳೆ ಶಾಸಕರಾದ ಎ.ಬಿ.ರಮೇಶ್ ಬಾಬು ಬಂಡಿಸಿದ್ದೇಗೌಡ, ಪಿ.ಎಂ.ನರೇಂದ್ರಸ್ವಾಮಿ, ರವಿಕುಮಾರ್‌ಗೌಡ ಗಣಿಗ, ಕೆ.ಎಂ.ಉದಯ್‌ಗೌಡ, ಶರತ್ ಬಚ್ಚೇಗೌಡ, ಪುಟ್ಟಸ್ವಾಮಿಗೌಡ, ದರ್ಶನ್ ಪುಟ್ಟಣ್ಣಯ್ಯ, ರವಿಶಂಕರ್, ವಿಧಾನಪರಿಷತ್ ಸದಸ್ಯರಾದ ದಿನೇಶ್ ಗೂಳಿಗೌಡ, ಮಧು ಜಿ.ಮಾದೇಗೌಡ, ಮಾಜಿ ಶಾಸಕರಾದ ಕೆ.ಬಿ.ಚಂದ್ರಶೇಖರ್, ಮರಿತಿಬ್ಬೇಗೌಡ, ಎನ್.ಅಪ್ಪಾಜಿಗೌಡ, ಬಿ.ಪ್ರಕಾಶ್, ಹೆಚ್.ಬಿ.ರಾಮು, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಜಿಲ್ಲಾ ಕಾರ್ಯಾಧ್ಯಕ್ಷ ಎಂ.ಎಸ್.ಚಿದಂಬರ್, ಮುಖಂಡರಾದ ಬಿ.ಎಲ್.ದೇವರಾಜು, ಅಸಾದುಲ್ಲಾ ಖಾನ್, ವಿಜಯ್‌ರಾಮೇಗೌಡ, ದಡದಪುರ ಶಿವಣ್ಣ ಸೇರಿದಂತೆ ಅನೇಕ ಮುಖಂಡರುಗಳು ಭಾಗವಹಿಸಿದ್ದರು.

ದೇವಸ್ಥಾನಗಳಿಗೆ ತೆರಳಿ ವಿಶೇಷ ಪೂಜೆ: ಇದಕ್ಕೂ ಮುನ್ನ ಸ್ಟಾರ್ ಚಂದ್ರು ಅವರು ದೇವಸ್ಥಾನಗಳಿಗೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು. ಮೊದಲಿಗೆ ಮಂಡ್ಯ ನಗರದಲ್ಲಿನ ವಿದ್ಯಾಗಣಪತಿ ದೇವಸ್ಥಾನಕ್ಕೆ ತೆರಳಿ ವಿಘ್ನೇಶ್ವರನಿಗೆ ಪ್ರಥಮ ಪೂಜೆ ಸಲ್ಲಿಸಿದರು. ನಂತರ ಗುತ್ತಲು ಅರ್ಕೇಶ್ವರ ಸ್ವಾಮಿ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿ ಪ್ರಾರ್ಥಿಸಿದರು. ಬಳಿಕ ಮಂಡ್ಯ ನಗರದಲ್ಲಿನ ಶ್ರೀ ಜನಾರ್ಧನಸ್ವಾಮಿ ದೇವಾಲಯದಲ್ಲಿ ಪೂಜೆ ಸಲ್ಲಿಸಿದರು. ಕಾಳಿಕಾಂಬ ದೇವಸ್ಥಾನಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿ ಮೆರವಣಿಗೆಯಲ್ಲಿ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ನಾಮಪತ್ರ ಸಲ್ಲಿಸಿದರು.

ಮಂಡ್ಯ ಜನ ಹೊರಗಿನವರಿಗೆ ತಮ್ಮ ಸ್ಥಾನ, ಸ್ವಾಭಿಮಾನ ಬಿಟ್ಟುಕೊಟ್ಟಿಲ್ಲ, ಟೂರಿಂಗ್ ಟಾಕೀಸ್ ರಾಜಕಾರಣ ಇಲ್ಲಿ ನಡೆಯಲ್ಲ: ಡಿಕೆ ಶಿವಕುಮಾರ್

ಮಂಡ್ಯ: ಮಂಡ್ಯದ ಜನ ಹೊರಗಿನವರಿಗೆ ತಮ್ಮ ಸ್ಥಾನ, ಸ್ವಾಭಿಮಾನ ಬಿಟ್ಟುಕೊಟ್ಟಿಲ್ಲ. ಮಂಡ್ಯದ ಗೌಡಿಕೆ, ಆಡಳಿತವನ್ನು ಬೇರೆಯವರಿಗೆ ಬಿಟ್ಟುಕೊಟ್ಟ ಇತಿಹಾಸ ನಮ್ಮ ಮುಂದೆ ಇಲ್ಲ. ಇಲ್ಲಿ ಟೂರಿಂಗ್ ಟಾಕೀಸ್ ರಾಜಕಾರಣ ನಡೆಯಲ್ಲ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಪರೋಕ್ಷವಾಗಿ ಎಚ್.ಡಿ.ಕುಮಾರಸ್ವಾಮಿ ವಿರುದ್ಧ ವಾಗ್ದಾಳಿ ನಡೆಸಿದರು.

ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಅವರ ನಾಮಪತ್ರ ಸಲ್ಲಿಕೆ ಮೆರವಣಿಗೆಯಲ್ಲಿ ಪಕ್ಷದ ಬೆಂಬಲಿಗರನ್ನು ಉದ್ದೇಶಿಸಿ ಮಾತನಾಡಿದ ಅವರು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾರು ಎಲ್ಲಿ ಬೇಕಾದರೂ ಚುನಾವಣೆಗೆ ನಿಲ್ಲಬಹುದು. ಕುಮಾರಸ್ವಾಮಿ ಹುಟ್ಟಿದ ಮಣ್ಣು ಹಾಸನ ಜಿಲ್ಲೆ ಬಿಟ್ಟು ರಾಮನಗರಕ್ಕೆ ಬಂದಿದ್ದರು. ಈಗ ಮಂಡ್ಯ ಜಿಲ್ಲೆಗೆ ಬಂದಿದ್ದಾರೆ. ನಾವು, ನೀವು ಕೊಟ್ಟ ಅಧಿಕಾರವನ್ನು ಕುಮಾರಸ್ವಾಮಿ ಅವರು ಉಳಿಸಿಕೊಳ್ಳಲಿಲ್ಲ. ಅವರನ್ನು ಅಧಿಕಾರದಿಂದ ಕೆಳಗೆ ಇಳಿಸಿದವರ ಜೊತೆಯೇ ಈಗ ನೆಂಟಸ್ಥನ ಬೆಳೆಸಿಕೊಂಡು ಅವರನ್ನು ತಬ್ಬಾಡುತ್ತಿದ್ದಾರೆ. ಮಂಡ್ಯದ ಜನ ಸ್ವಾಭಿಮಾನಿಗಳು ಟೂರಿಂಗ್ ಟಾಕೀಸ್ ರಾಜಕಾರಣ ಮಾಡುವವರಿಗೆ ಬೆಲೆ ಕೊಡುವುದಿಲ್ಲ. ಇಲ್ಲಿ ಸಿನಿಮಾ ರಾಜಕಾರಣ ನಡೆಯುವುದಿಲ್ಲ. ಇಲ್ಲಿ ಏನೇ ಇದ್ದರೂ ಬದುಕಿನ ರಾಜಕಾರಣಕ್ಕೆ ಮಾತ್ರ ಬೆಲೆ. ಈ ಕ್ಷೇತ್ರದ ಜನ ತಮ್ಮ ಮತವನ್ನು ಮಂಡ್ಯದವರಿಗೇ ನೀಡುತ್ತಾರೆ ಎಂದರು.

ಕಮಲ ಕೆರೆಯಲ್ಲಿ ಇದ್ದರೇ ಚೆಂದ, ತೆನೆ ಹೊಲದಲ್ಲಿ ಇದ್ದರೆ ಚೆಂದ, ಈ ದಾನ, ಧರ್ಮ ಮಾಡುವ ಕೈ ಅಧಿಕಾರದಲ್ಲಿ ಇದ್ದರೆ ಚೆಂದ ಇದೇ ಮಾತಿನಂತೆ ಉಚಿತ ವಿದ್ಯುತ್, ಗೃಹಲಕ್ಷ್ಮಿ, ಯುವನಿಧಿ, ಅನ್ನಭಾಗ್ಯ, ಶಕ್ತಿ ಯೋಜನೆ ಹೀಗೆ ಗ್ಯಾರಂಟಿ ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೆ ತಂದಿದ್ದೇವೆ. ನೀವು ಒತ್ತುವ ಮತದ ಸದ್ದು ಮೋದಿ ಅವರಿಗೆ ಕೇಳಿಸಬೇಕು. ಮಂಡ್ಯ ಜನತೆಯ ಸ್ವಾಭಿಮಾನವನ್ನು ಹೊತ್ತಿರುವ ನಾಮಪತ್ರ ಸಲ್ಲಿಕೆಗೆ ಜೊತೆಯಾಗಿದ್ದೇನೆ. ನೀವು ಮತಯಂತ್ರದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಒತ್ತುವ ಓಟಿನ ಸದ್ದು ಮೋದಿ ಅವರಿಗೆ ಕೇಳಿಸಬೇಕು ಎಂದು ಡಿಕೆಶಿ ಹೇಳಿದರು.

ಮೈಷುಗರ್ ಮುಚ್ಚಿ ಐಟಿ ಇಂಡಸ್ಟ್ರಿ ಮಾಡಲು ಪ್ರಯತ್ನ

ಕಾಂಗ್ರೆಸ್ ಸರ್ಕಾರದ ವಿರುದ್ಧ ಹೆಚ್‌ಡಿಕೆ ಆರೋಪ

ಮಂಡ್ಯ,ಏ.1– ಮೈಷುಗರ್ ಕಾರ್ಖಾನೆಯನ್ನು ಮುಚ್ಚಿ ಐಟಿ ಇಂಡಸ್ಟ್ರಿ ಮಾಡಲು ಹೊರಟಿದ್ದಾರೆ ಎಂದು ಕಾಂಗ್ರೆಸ್ ಸರ್ಕಾರದ ವಿರುದ್ಧ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಆರೋಪಿಸಿದರು.

ಸೋಮವಾರ ನಗರದ ಅಮರಾವತಿ ಹೋಟೆಲ್‌ನಲ್ಲಿ ನಡೆದ ಮಾಜಿ ಸಚಿವ ದಿ.ಅಂಬರೀಷ್ ಆಪ್ತ ಅಮರಾವತಿ ಚಂದ್ರಶೇಖರ್ ಪಕ್ಷ ಸೇರ್ಪಡೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಬಜೆಟ್‌ನಲ್ಲಿ ಸಕ್ಕರೆ ಕಾರ್ಖಾನೆ ಶುರು ಮಾಡುವುದಾಗಿ ಘೋಷಿಸಿದ್ದಾರೆ. ಆದರೆ ಅದಕ್ಕೆ ಹಣ ಎಲ್ಲಿದೆ? ಮೈಷುಗರ್ ಆಸ್ತಿಯನ್ನು ಮಾರಾಟ ಮಾಡಿ ಕಾರ್ಖಾನೆ ಕಟ್ಟಲು ತೀರ್ಮಾನ ಮಾಡಿದ್ದಾರೆ. 2019ರಲ್ಲಿ 400 ಕೋಟಿ ರೂಗಳಲ್ಲಿ ಕಾರ್ಖಾನೆ ಶುರು ಮಾಡಲು 100 ಕೋಟಿ ಹಣ ಮೀಸಲಿಟ್ಟಿದ್ದೆ. ಆ ನಂತರ ಬಂದ ಸರ್ಕಾರ ನಾನು ಮೀಸಲಿಟ್ಟಿದ್ದ ಹಣವನ್ನು ಎಲ್ಲಿಗೆ ಬಳಸಿಕೊಂಡರೋ ಅದನ್ನು ಚರ್ಚೆ ಮಾಡಲು ಹೋಗಲ್ಲ ಎಂದು ಬೇಸರ ವ್ಯಕ್ತಪಡಿಸಿದರು.



ಮೈಷುಗರ್ ಕಾರ್ಖಾನೆ ಘೋಷಿಸಿದ್ದು ಬಿಟ್ಟರೆ ಅವರು ಬಜೆಟ್‌ನಲ್ಲಿ ಮಂಡ್ಯ ಜಿಲ್ಲೆಗೆ ಏನೂ ಕೊಟ್ಟಿಲ್ಲ. 200 ಮಂದಿ ರೈತರು ಆತ್ಮಹತ್ಯೆ ಮಾಡಿಕೊಂಡರು. ಅಷ್ಟು ಕುಟುಂಬಕ್ಕೆ ಶಾಸಕರೊಂದಿಗೆ ಭೇಟಿ ಕೊಟ್ಟು ಕೈಲಾದ ಸಹಾಯ ಮಾಡಿ, ಆತ್ಮಹತ್ಯೆ ಮಾಡಿಕೊಳ್ಳಬೇಡಿ ಎಂದು ಮನವಿ ಮಾಡಿ, ನಮ್ಮ ಸರ್ಕಾರ ಬಂದರೆ ರೈತರ ಸಾಲ ಮನ್ನಾ ಮಾಡುವೆ ಎಂದಿದ್ದೆ. ಅದರಂತೆ ಕೊಟ್ಟ ಮಾತನ್ನು ಉಳಿಸಿಕೊಂಡಿದ್ದೇನೆ ಎಂದು ಹೇಳಿದರು.

ನಾಳೆ ಸುಮಲತಾ ಬೆಂಬಲಿಗರ ಸಭೆ

ಮಂಡ್ಯ,ಏ.1– ಮುಂದಿನ ಸಾರ್ವತ್ರಿಕ ಲೋಕಸಭಾ ಚುನಾವಣೆಯಲ್ಲಿ ತಮ್ಮ ನಿರ್ಧಾರ ಘೋಷಿಸುವ ಸಲುವಾಗಿ ಹಿತೈಷಿಗಳು, ಮಾರ್ಗದರ್ಶಕರು, ಕಾರ್ಯಕರ್ತರು ಹಾಗೂ ಬೆಂಬಲಿಗರ ಬಹಿರಂಗ ಸಭೆಯನ್ನು ನಗರದ ಕಾಳಿಕಾಂಭ ಸಮುದಾಯ ಭವನದಲ್ಲಿ ಏ.3ರಂದು ಬೆಳಿಗ್ಗೆ 10.30ಕ್ಕೆ ಆಯೋಜಿಸಲಾಗಿದೆ ಎಂದು ಅಖಿಲ ಕರ್ನಾಟಕ ಅಂಬರೀಷ್ ಅಭಿಮಾನಿಗಳ ಸಂಘದ ಅಧ್ಯಕ್ಷ ಬೇಲೂರು ಸೋಮಶೇಖರ್ ತಿಳಿಸಿದ್ದಾರೆ.



ಮೂರನೇ ಪುಟದಿಂದ

ನನ್ನನ್ನು ಯಾರೂ ಮುಟ್ಟೋಕಾಗಲ್ಲ...!!!



ನಂಜನಗೂಡು ತಾಲೂಕು ಬಿಳಿಗೆರೆ ಬೋರೆಯಲ್ಲಿ ಸೋಮವಾರ ನಡೆದ ವರುಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರ ಬಹಿರಂಗ ಸಭೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಚಿತ್ರದಲ್ಲಿ ಚಾಮರಾಜನಗರ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಸುನೀಲ್‌ಬೋಸ್, ಸಚಿವರು, ಶಾಸಕರು, ಕಾರ್ಯಕರ್ತರನ್ನು ಕಾಣಬಹುದು.

ವಿರುದ್ಧವೂ ಹರಿಹಾಯ್ದ ಸಿದ್ದರಾಮಯ್ಯ, ದೇಶದ ಸಂಪತ್ತನ್ನು 5 ಟ್ರಿಲಿಯನ್‌ಗೆ ಏರಿಸುತ್ತೇವೆ. ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿಸುತ್ತೇವೆ. ಅಚ್ಛೇ ದಿನ್ ಬರುತ್ತದೆ ಎಂದಿದ್ದರು. ಆದರೆ, ನಿರುದ್ಯೋಗ ಹೆಚ್ಚಾಗಿದೆ. 56 ಇಂಚು ಎದೆ ಇದೆ ಎಂದು ಹೇಳುತ್ತಾರೆ. 56 ಇಂಚು ಎದೆ ಇದ್ದರೆ ಸಾಲದು, ಆದರೆ ಬಡವರ ಪರವಾದ ಮಾತೃ ಹೃದಯವಿರಬೇಕು ಎಂದರು.

ಸಿದ್ದರಾಮಯ್ಯರಿಗೆ ಕ್ಷೇತ್ರವೇ ಇಲ್ಲ ಎಂದವರಿಗೆ ಪಾಠ: ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಾತನಾಡಿ, ಸಿದ್ದರಾಮಯ್ಯನವರಿಗೆ ಕ್ಷೇತ್ರವೇ ಇಲ್ಲ. ಅವರನ್ನು ಸೋಲಿಸುತ್ತೇವೆ ಎಂದವರಿಗೆ ವರುಣ ಕ್ಷೇತ್ರದ ಜನರು ತಕ್ಕ ಉತ್ತರ ನೀಡಿ ದೇಶದಲ್ಲಿ ಚರಿತ್ರೆ ನಿರ್ಮಾಣ ಮಾಡಿದ್ದೀರಿ. ಈಗ ಮತ್ತೆ ಸಿದ್ದರಾಮಯ್ಯನವರ ಶಕ್ತಿ ಪರೀಕ್ಷಿಸುವ ಕಾಲ ಬಂದಿದೆ. ಹೀಗಾಗಿ ಸುನೀಲ್ ಬೋಸ್ ಅವರನ್ನು ಗೆಲ್ಲಿಸುವ ಮೂಲಕ ಸಿದ್ದರಾಮಯ್ಯನವರಿಗೆ ಶಕ್ತಿ ತುಂಬಿ ಎಂದು ಮನವಿ ಮಾಡಿದರು. ಮಾಜಿ ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ವರುಣ ಸಿದ್ದರಾಮಯ್ಯನವರ ತವರು ಕ್ಷೇತ್ರ. ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆಲ್ಲದಿದ್ದರೆ ಮುಜುಗರವಾಗುತ್ತದೆ. ಬಿಜೆಪಿ ಅಭ್ಯರ್ಥಿ ದಿವಂಗತ ಧ್ರುವನಾರಾಯಣ ಹೆಸರು ಹೇಳಿಕೊಂಡು ಮತ ಯಾಚಿಸುತ್ತಿದ್ದಾರೆ. ಧ್ರುವನಾರಾಯಣ ಅವರಿಗೆ ನಿಜವಾಗಿ ಶ್ರದ್ಧಾಂಜಲಿ ಸಲ್ಲಿಸಬೇಕಾದರೆ ಕಾಂಗ್ರೆಸ್ ಅಭ್ಯರ್ಥಿಯನ್ನು ಗೆಲ್ಲಿಸಬೇಕು ಎಂದು ಹೇಳಿದರು.

ಅಭ್ಯರ್ಥಿ ಸುನೀಲ್ ಬೋಸ್ ಮಾತನಾಡುತ್ತಾ, ವರುಣ ಜನತೆ ಸಿದ್ದರಾಮಯ್ಯನವರನ್ನು ಎರಡು ಬಾರಿ ಮುಖ್ಯಮಂತ್ರಿ ಮಾಡಿದ್ದೀರಿ, ನನ್ನ ತಂದೆಯನ್ನು ಬೆಳೆಸಿದ್ದೀರಿ, ಯತೀಂದ್ರ ಸಿದ್ದರಾಮಯ್ಯನವರಿಗೂ ಆಶೀರ್ವಾದ ಮಾಡಿದ್ದೀರಿ, ನಿಮ್ಮೆಲ್ಲರ ಸೇವೆ ಸಲ್ಲಿಸಲು ನನಗೂ ಒಂದು ಅವಕಾಶ ಕೊಡಿ ಎಂದು ಮನವಿ ಮಾಡಿದರು.

ಈ ಸಮಾರಂಭದಲ್ಲಿ ಮಾಜಿ ಶಾಸಕ ಡಾ. ಭಾರತೀ ಶಂಕರ್ ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆಗೊಂಡರು. ಸಚಿವ ಕೆ. ವೆಂಕಟೇಶ್, ಶಾಸಕರಾದ ದರ್ಶನ್ ಧ್ರುವನಾರಾಯಣ, ಎ.ಆರ್.ಕೃಷ್ಣಮೂರ್ತಿ, ಗಣೇಶ್ ಪ್ರಸಾದ್, ಅನಿಲ್ ಚಿಕ್ಕಮಾದು, ಮಾಜಿ ಶಾಸಕರಾದ ಜಿ.ಎನ್. ನಂಜುಂಡಸ್ವಾಮಿ, ಕಳಲೆ ಕೇಶವಮೂರ್ತಿ, ಮಾಜಿ ಸಚಿವ ಕೋಟೆ ಎಂ. ಶಿವಣ್ಣ, ಮಾಜಿ ಸಂಸದ ಕಾಗಲ ವಾಡಿ ಶಿವಣ್ಣ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ. ಬಿ.ಜೆ. ವಿಜಯಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

ಬೆಂಬಲ ಸಾಧ್ಯತೆ

ಮಾಹಿತಿ ಇದೆ. ನಿನ್ನೆ ಕುಮಾರಸ್ವಾಮಿ ಅವರು, ಸಂಸದರ ಮನೆಗೆ ತೆರಳಿ ಸುಮಾರು ಒಂದು ಗಂಟೆ ಕಾಲ ಸಿನೆಮಾ, ರಾಜಕೀಯ ವಿಚಾರಗಳ ಬಗ್ಗೆ ಚರ್ಚೆ ಮಾಡಿದ್ದರು.

ಮಾತುಕತೆ ಸಂದರ್ಭದಲ್ಲೇ ಕುಮಾರಸ್ವಾಮಿ ತಮ್ಮನ್ನು ಬೆಂಬಲಿಸುವಂತೆ ಮಾಡಿದ ಮನವಿಗೆ ಸುಮಲತಾ ಅವರು, ಪಕ್ಷದ ವರಿಷ್ಠರ ಮಾತಿಗೆ ವಿರುದ್ಧವಾಗಿ ನಡೆಯಲು ಸಾಧ್ಯವಿಲ್ಲ. ಆದರೂ, 3ರಂದು ಸಭೆ ಕರೆದಿದ್ದೇನೆ. ಆ ನಂತರ ಒಳ್ಳೆಯ ನಿರ್ಧಾರವನ್ನು ತೆಗೆದುಕೊಳ್ಳುವುದಾಗಿ ತಿಳಿಸಿದ್ದಾರೆ. ಕಳೆದ ಚುನಾವಣೆಯಲ್ಲಿ ಸುಮಲತಾ ಅವರು, ಕುಮಾರಸ್ವಾಮಿ ಪುತ್ರ ನಿಖಿಲ್ ಕುಮಾರಸ್ವಾಮಿ ಅವರನ್ನು ಬಹಳ ಮತಗಳ ಅಂತರದಿಂದ ಪರಾಭವಗೊಳಿಸಿ, ಸಂಸತ್ ಪ್ರವೇಶಿಸಿದ್ದರು. ಇತ್ತೀಚೆಗಷ್ಟೇ ಬಿಜೆಪಿ ಜೊತೆ ಕೈಜೋಡಿಸಿದ್ದ ಸುಮಲತಾ, ಆ ಪಕ್ಷದ ಟಿಕೆಟ್ ಆಕಾಂಕ್ಷಿಯೂ ಆಗಿದ್ದರು, ಆದರೆ ಮೈತ್ರಿ ಪಕ್ಷಕ್ಕೆ ಮಂಡ್ಯ ಕ್ಷೇತ್ರ ಬಿಟ್ಟುಕೊಟ್ಟಿದ್ದರಿಂದ ಸುಮಲತಾ ಅವರಿಗೆ ಮುಂದಿನ ದಿನಗಳಲ್ಲಿ ಒಳ್ಳೆಯ ರಾಜಕೀಯ ಭವಿಷ್ಯವಿದೆ. ಈಗ ಎನ್‌ಡಿಎ ಅಭ್ಯರ್ಥಿಯನ್ನು ಬೆಂಬಲಿಸಿ ಎಂದು ಹೇಳಿ ಕಳುಹಿಸಿದ್ದರು. ಈ ಬೆಳವಣಿಗೆ ನಂತರ ಸುಮಲತಾ ಗೊಂದಲಕ್ಕೆ ಸಿಲುಕಿದ್ದರು. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸಂಸದೆಯ ಮನೆಗೆ ತೆರಳಿ ಚರ್ಚೆ ನಡೆಸಿದ್ದಲ್ಲದೆ, ಕುಮಾರಸ್ವಾಮಿ ಅವರನ್ನು ಬೆಂಬಲಿಸುವಂತೆ ಮನವಿ ಮಾಡಿಕೊಂಡಿದ್ದರು.

ನ್ಯಾಯಾಂಗ ಬಂಧನ

ಸೆಲ್‌ನಲ್ಲಿ ಇರಿಸಲಾಗಿದೆ. ಈಗಾಗಲೇ ಮಾಜಿ ಉಪಮುಖ್ಯಮಂತ್ರಿ ಮನೀಶ್ ಸಿಸೋಡಿಯಾ, ಎಎಪಿ ನಾಯಕ ಸಂಜಯ್ ಸಿಂಗ್, ಬಿಆರ್‌ಎಸ್ ನಾಯಕಿ ಕವಿತಾ ಅವರು ಇದೇ ಪ್ರಕರಣದಲ್ಲಿ ತಿಹಾರ್ ಜೈಲಿನಲ್ಲಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಂದ್ರ ತನಿಖಾ ಸಂಸ್ಥೆ ಮಾರ್ಚ್ 21 ರಂದು ಕೇಜ್ರಿವಾಲ್ ಅವರನ್ನು ಬಂಧಿಸಿತ್ತು. ಮರುದಿನ, ವಿಶೇಷ ನ್ಯಾಯಾಧೀಶೆ ಕಾವೇರಿ ಬವೇಜಾ ಅವರು ಆರೋಪಿ ದೆಹಲಿ ಸಿಎಂ ಅನ್ನು ಮಾರ್ಚ್ 28 ರವರೆಗೆ ಜಾರಿ ನಿರ್ದೇಶನಾಲಯದ (ಇಡಿ) ಕಸ್ಟಡಿಗೆ ನೀಡಿದ್ದರು. ನಂತರ ಕೇಜ್ರಿವಾಲ್ ಅವರ ಇಡಿ ಕಸ್ಟಡಿ ಅವಧಿಯನ್ನು ಏಪ್ರಿಲ್ 1ರವರೆಗೆ ನಾಲ್ಕು ದಿನಗಳ ಕಾಲ ವಿಸ್ತರಿಸಿತ್ತು. ಕಸ್ಟಡಿ ವಿಚಾರಣೆ ಸಮಯದಲ್ಲಿ ಐದು ದಿನಗಳಲ್ಲಿ ಕೇಜ್ರಿವಾಲ್ ಅವರ ಹೇಳಿಕೆಗಳನ್ನು ದಾಖಲಿಸಲಾಗಿದ್ದು, ಅವರು ತಪ್ಪಿಸಿಕೊಳ್ಳುವ ಉತ್ತರ ನೀಡುತ್ತಿದ್ದಾರೆ ಎಂದು ಇಡಿ ಹೊಸ ರಿಮಾಂಡ್ ಅರ್ಜಿಯಲ್ಲಿ ಹೇಳಿತ್ತು. ಕಸ್ಟಡಿ ಅವಧಿಯಲ್ಲಿ ಇತರ ಮೂವರ ಹೇಳಿಕೆಗಳನ್ನು ಸಹ ದಾಖಲಿಸಲಾಗಿದೆ ಎಂದು ಕೇಂದ್ರ ತನಿಖಾ ಸಂಸ್ಥೆ ತಿಳಿಸಿದೆ.

1.10 ರೂ. ಕಡಿತ

ಪ್ರತಿ ಯುನಿಟ್‌ಗೆ 7 ರೂ. ನಿಗದಿ ಮಾಡಲಾಗಿತ್ತು. ಇದೀಗ 7 ರೂ. ಬದಲಿಗೆ ಪ್ರತಿ ಯುನಿಟ್‌ಗೆ 5.90 ರೂ. ಮಾತ್ರ ಶುಲ್ಕ ವಿಧಿಸಲಾಗಿದೆ. ಇನ್ನು 100 ಯುನಿಟ್‌ಗಿಂತ ಕಡಿಮೆ ವಿದ್ಯುತ್ ಬಳಕೆ ಮಾಡುವವರು ಈಗಾಗಲೇ ಪ್ರತಿ ಯುನಿಟ್‌ಗೆ 4.75 ರೂ. ಪಾವತಿಸುತ್ತಿದ್ದಾರೆ. ಇನ್ನು ರಾಜ್ಯ ಸರ್ಕಾರ 200 ಯುನಿಟ್ ಒಳಗೆ ಬಳಸುವವರಿಗೆ ಗೃಹಜ್ಯೋತಿ ಯೋಜನೆಯಡಿ ಉಚಿತ ವಿದ್ಯುತ್ ನೀಡುವುದರಿಂದ ಈ ಸೌಲಭ್ಯಕ್ಕೆ ನೋಂದಾಯಿಸಿಕೊಂಡವರಿಗೆ ದರ ಇಳಿಕೆಯ ಪ್ರಯೋಜನ ಸಿಗುವುದಿಲ್ಲ.

ಭಾರತದಲ್ಲಿ ಪೆಟ್ರೋಲ್, ಡೀಸೆಲ್ ವಾಹನ ಬಳಕೆ ನಿಷೇಧಿಸಲು ಯೋಜನೆ

ನವದೆಹಲಿ, ಏ. 1– ಭಾರತದಲ್ಲಿ ಎಲೆಕ್ಟ್ರಿಕ್ ವಾಹನಗಳ ಬಳಕೆ ಹೆಚ್ಚಿಸಲು ಫೇಮ್ II ಯೋಜನೆಯಡಿ ಕೇಂದ್ರ ಸರ್ಕಾರ ಹಲವು ಸೌಲಭ್ಯಗಳನ್ನು ನೀಡಿದೆ. ಇತ್ತ ಇಂಧನ ವಾಹನಗಳ ಮೇಲಿನ ನಿಯಮ ಮತ್ತಷ್ಟು ಬಿಗಿಗೊಳಿಸಿದೆ. ಬಿಎಸ್6 ಎಮಿಶನ್ ಎಂಜಿನ್, ಹಳೇ ವಾಹನ ಗುಜುರಿ ನೀತಿ ಸೇರಿದಂತೆ ಹಲವು ಯೋಜನೆಗಳ ಮೂಲಕ ದೇಶದ ಮಾಲಿನ್ಯ ಹಾಗೂ ಜಾಗತಿಕ ತಾಪಮಾನ ಏರಿಕೆ ನಿಯಂತ್ರಿಸಲು ಹಂತ ಹಂತವಾಗಿ ಕ್ರಮಗಳನ್ನು ಕೈಗೊಳ್ಳುತ್ತಿದೆ.

ಇದರ ನಡುವೆ ಕೇಂದ್ರ ಸರ್ಕಾರ ಮಹತ್ವದ ಪ್ಲಾನ್ ಬಹಿರಂಗಪಡಿಸಿದೆ. ಈ ಕುರಿತು ಕೇಂದ್ರ ರಸ್ತೆ ಮತ್ತು ಸಾರಿಗೆ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

ಎಚ್.ಡಿ.ಕುಮಾರಸ್ವಾಮಿ ಬದುಕಿದ್ದರೂ ಸಿದ್ಧಾಂತದಲ್ಲಿ ಸತ್ತಂತೆ

ಬೆಂಗಳೂರು: ಹೆಚ್.ಡಿ. ಕುಮಾರಸ್ವಾಮಿ ಅವರು ಕಮಲದ ಧ್ವಜ ಹಾಕಿದ್ದಾರೆ, ಬದುಕಿದ್ದು ಸತ್ತಂತೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಾಗ್ದಾಳಿ ನಡೆಸಿದ್ದಾರೆ. ಮಂಡ್ಯದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಡಿಕೆ ಶಿವಕುಮಾರ್, ರಾಜ್ಯದ ಜನರಿಗೆ ನಾವು ಹೇಳಿದಂತೆ ಮಾತು ಉಳಿಸಿಕೊಂಡಿದ್ದೇವೆ. ಮಂಡ್ಯದ ಜನತೆ ಸ್ವಾಭಿಮಾನಕ್ಕೆ ಮತ ಕೊಡಿ ಎಂದು ಮನವಿ ಮಾಡಿದರು.



ಮಂಡ್ಯ ರಾಜಕಾರಣ ನೋಡಿದರೆ ನಾಚಿಗೆ ಆಗುತ್ತೆ. ಪುಟ್ಟರಾಜು ಟಿಕೆಟ್‌ಗಾಗಿ ಕಾದು ಕುಳಿತಿದ್ದ, ಇದೀಗ ಗೋವಿಂದ. ಕುಮಾರಸ್ವಾಮಿ ಕಮಲದ ಧ್ವಜ ಹಾಕಿಕೊಂಡಿದ್ದಾರೆ. ಬದುಕಿದ್ದು ಸತ್ತಂತೆ ಎಂದರು. ಕಳೆದ ಬಾರಿ ಮೈತ್ರಿಯಂತೆ ಕುಮಾರಸ್ವಾಮಿ ಅವರಿಗೆ ಸಹಾಯ ಮಾಡಲು ಬಂದಿದ್ದೆ. ಆದರೆ ಅವರಿಗೆ ಅಧಿಕಾರ ಉಳಿಸಿಕೊಳ್ಳಲು ಆಗಿಲ್ಲ. ಆದರೆ ಈಗ ತಮ್ಮ ಅಧಿಕಾರ ತೆಗೆದವರ ಜೊತೆಯೇ ಕುಮಾರಸ್ವಾಮಿ ಹೋಗಿದ್ದಾರೆ ಎಂದರು.

ಹೆಚ್.ಡಿ.ಕುಮಾರಸ್ವಾಮಿ ಹಾಸನದಿಂದ ರಾಮನಗರಕ್ಕೆ ಬಂದಿದ್ದರು. ಇದೀಗ ಮಂಡ್ಯಕ್ಕೆ ಬಂದಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಯಾರು ಎಲ್ಲಿ ಬೇಕಾದರೂ ಸ್ಪರ್ಧೆ ಮಾಡಬಹುದು, ಮಾಡಲಿ. ಬೆಂಗಳೂರು ಗ್ರಾಮಾಂತರದಲ್ಲಿ ಭಾವನನ್ನು ಬಿಜೆಪಿಯಿಂದ ನಿಲ್ಲಿಸಿದ್ದಾರೆ. ಎಲ್ಲಾ ಕಡೆ ನೀವೇ ನಿಂತರೆ ಕಾರ್ಯಕರ್ತರು ಏನು ಮಾಡುತ್ತಾರೆ ಎಂದು ಡಿಕೆ ಶಿವಕುಮಾರ್ ಪ್ರಶ್ನಿಸಿದರು.

ನಾನು ಸುಮಲತಾ ವಿಷಯಕ್ಕೆ ಹೋಗಲ್ಲ: ಇದಕ್ಕೂ ಮುನ್ನ ಸದಾಶಿವನಗರದ ನಿವಾಸದ ಬಳಿ ಮಾಧ್ಯಮಗಳ ಪ್ರಶ್ನೆಗಳಿಗೆ ಉತ್ತರಿಸಿದ ಶಿವಕುಮಾರ್, ಕುಮಾರಸ್ವಾಮಿ ಅವರನ್ನು ಉದ್ದೇಶಿಸಿ ವಿಷ ಹೇಳಿಕೆ ನೀಡಿದ್ದೇನೆ. ಕುಂಬಳಕಾಯಿ ಕಳ್ಳ ಎಂದರೆ ಸುಮಲತಾ ಅವರು ಏಕೆ ಹೆಗಲು ಮುಟ್ಟಿ ನೋಡಿಕೊಳ್ಳಬೇಕು? ನಾನು ಸುಮಲತಾ ಅವರ ಸುದ್ದಿಗೆ ಹೋಗಿಲ್ಲ, ಅವರ ಸುದ್ದಿ ನನಗೆ ಅವಶ್ಯಕತೆ ಇಲ್ಲ. ಅಂಬರೀಷ್ ಅವರಿಗೆ ಕಾಂಗ್ರೆಸ್ ಪಕ್ಷ ಏನು ಮಾಡಿದೆ ಎನ್ನುವುದು ಇಡೀ ದೇಶಕ್ಕೆ ಗೊತ್ತಿದೆ. ಅವರು ಕೊನೆಯುಸಿರು ಬಿಡುವ ವೇಳೆಯಲ್ಲಿ ಏನು ಹೇಳಿದರು ಎಂಬುದು ಗೊತ್ತಿದೆ. ನಾವು ಈಗ ಆ ವಿಚಾರಗಳನ್ನು ಮಾತನಾಡುವುದಿಲ್ಲ.

ನಾನು ಸುಮಲತಾ ಅವರ ವಿಚಾರಕ್ಕೆ ಇಂದು ಹೋಗಲ್ಲ, ನಾಳೆಯೂ ಹೋಗಲ್ಲ. ನನಗೆ ಅದರ ಅವಶ್ಯಕತೆಯೂ ಇಲ್ಲ. ಅವರ ಬಗ್ಗೆ ನಾನೇಕೆ ತಲೆ ಕೆಡಿಸಿಕೊಳ್ಳಬೇಕು. ಪಕ್ಷದ ಸಿದ್ಧಾಂತದ ಬಗ್ಗೆ ಮಾತನಾಡಲಿ, ಉತ್ತರ ಕೊಡುತ್ತೇನೆ. ಅವರು ಪಕ್ಷದ ಸಿದ್ಧಾಂತದಿಂದ ಹೊರಗೆ ಬರಲಿ, ಆನಂತರ ಮಾತನಾಡುವ ಎಂದರು.

ಅಮಿತ್ ಷಾ ಜೊತೆ ಕುಮಾರಸ್ವಾಮಿ ಉಪಾಹಾರ ಸಭೆ

ನಮ್ಮಲ್ಲಿ ರುವ ಮಾಹಿತಿಯನ್ನು ಅಮಿತ್ ಷಾ ಅವರೊಂದಿಗೆ ಹಂಚಿಕೊಳ್ಳುತ್ತೇವೆ ಎಂದು ಅವರು ತಿಳಿಸಿದರು. ಒಟ್ಟಾರೆಯಾಗಿ ರಾಜ್ಯದ 28 ಕ್ಷೇತ್ರಗಳನ್ನು ನಮ್ಮ ಮೈತ್ರಿಕೂಟ ಗೆಲ್ಲಬೇಕು. ಯಾವುದೇ ಕ್ಷೇತ್ರದಲ್ಲಿಯೂ ಸಮಸ್ಯೆ ಆಗಬಾರದು. ಹೊಂದಾಣಿಕೆಗೆ ಧಕ್ಕೆ ಆಗಬಾರದು, ಗುರಿ ತಲುಪಲು ಯಾವ ಲೋಪ ಆಗಬಾರದು ಎಂಬ ಉದ್ದೇಶ ನಮ್ಮದು. ಅದಕ್ಕೆ ಪೂರಕವಾಗಿ ಎಲ್ಲ ರೀತಿಯಲ್ಲಿ ಚರ್ಚೆ ಮಾಡ್ತೇವೆ. ನಂತರ ಸಂಜೆ ಚನ್ನಪಟ್ಟಣದಲ್ಲಿ ರೋಡ್ ಶೋದಲ್ಲಿ ಇಬ್ಬರೂ ಭಾಗವಹಿಸುತ್ತೇವೆ. ಇಡೀ ರಾಜ್ಯಕ್ಕೆ ಚನ್ನಪಟ್ಟಣ ದಿಂದಲೇ ಒಂದು ಸ್ಪಷ್ಟ ಸಂದೇಶ ಕೊಡುತ್ತೇವೆ ಎಂದರು.

ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿಯೂ ಪ್ರಚಾರ: ನಾನು ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಕನಕಪುರ, ರಾಮನಗರ, ಚನ್ನಪಟ್ಟಣ, ಕುಣಿಗಲ್‌ನಲ್ಲಿ ಪ್ರವಾಸ ಮಾಡುತ್ತೇನೆ. ತುಮಕೂರು, ಚಾಮರಾಜನಗರ, ಮೈಸೂರು ಕೋಲಾರ, ಚಿಕ್ಕಬಳ್ಳಾಪುರ ಸೇರಿದಂತೆ 14 ಕಡೆ ಪ್ರಚಾರ ನಡೆಸುತ್ತೇನೆ. ಸುಮಲತಾ ಬೆಂಬಲ ನೀಡುವ ಬಗ್ಗೆ ವಿಶ್ವಾಸ ಇದಿಯಾ ಎಂದು ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಕುಮಾರಸ್ವಾಮಿ, ಸುಮಲತಾ ಅವರು ಆರೋಗ್ಯಕರ ಚರ್ಚೆ ಆಗಿದೆ ಎಂದು ಹೇಳಿದ್ದಾರೆ. ಅದಕ್ಕೆ ಕಾಂಗ್ರೆಸ್‌ನವರು ಭಯ ಬಿದ್ದು ಮಾತಾಡ್ತಾ ಇದ್ದಾರೆ ಎಂದರು.

ಡಿಕೆ ಸಹೋದರರಿಗೆ ತಿರುಗೇಟು: ರಾಮನಗರ ಜನರ ಸೇವೆ ಮಾಡಲು ಅಣ್ಣ–ತಮ್ಮ ಇರುವುದು ಎಂದು ಡಿ.ಕೆ.ಶಿವಕುಮಾರ್ ನೀಡಿರುವ ಹೇಳಿಕೆ ಬಗ್ಗೆ ತೀಕ್ಷ್ಣವಾಗಿ ಉತ್ತರ ಕೊಟ್ಟ ಕುಮಾರಸ್ವಾಮಿ, ಅವರು ಏನು ಸೇವೆ ಮಾಡುತ್ತಿದ್ದಾರೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಬೆಂಗಳೂರಿನಲ್ಲಿ ಫ್ಲಾಟ್ ಪ್ಲಾನ್ ಮಂಜೂರಾತಿಗೆ ಪ್ರತೀ ಚದರ ಅಡಿಗೆ 100 ರೂಪಾಯಿ ಫಿಕ್ಸ್ ಮಾಡಿರುವುದು ಸೇವೆ ಅಲ್ಲವೇ. ಅದು ಒಂದು ಸೇವೆ! ಎಲ್ಲರಿಗೂ ಧಮ್ಕಿ ಹಾಕೋದು ಒಂದು ಸೇವೆ!! ಅದನ್ನೆ ತಾನೇ ಮಾಡ್ತಾ ಇರೋದು ಎಂದು ಕುಟುಕಿದರು.

ಕೋವಿಡ್ ಸಮಯದಲ್ಲಿ ಕುಮಾರಸ್ವಾಮಿ ಎಲ್ಲಿ ಹೋಗಿದ್ದರು ಎಂದು ಕೇಳುತ್ತಾರೆ. ಅನಿತಾ ಕುಮಾರಸ್ವಾಮಿ ರಾಮನಗರ ಶಾಸಕರಿದ್ದರು. ನಾನು ಚನ್ನಪಟ್ಟಣ ಶಾಸಕನಿದ್ದೆ. ರಾಮನಗರ, ಚನ್ನಪಟ್ಟಣಕ್ಕೆ ನಾನು ಏನು ಸೇವೆ ಸಲ್ಲಿಸಬೇಕು ಸಲ್ಲಿಸಿದ್ದೇನೆ. ಪ್ರಚಾರ ಮಾಡಿಕೊಂಡಿಲ್ಲ. ಪ್ರತಿ ಕುಟುಂಬಕ್ಕೂ ಕೈಲಾದ ಸಹಾಯ ಮಾಡಿದ್ದೇವೆ. ಇವರಂತೆ ನಾವು ಡಂಗೂರ ಹೊಡೆದ್ವಾ? ಪಾಪ.. ಹೆಣ ಹೊರೋಕೆ ಹೋಗಿದ್ದರಂತೆ ಇವರು. ನಾವು ಜನರು ಹೆಣವಾಗದಂತೆ ನೋಡಿಕೊಂಡೆವು. ಅವರ ಜೀವ ಉಳಿಸಲಿಕ್ಕೆ ಪ್ರಯತ್ನ ಮಾಡಿದೆವು ಎಂದು ತಿರುಗೇಟು ಕೊಟ್ಟರು.

ಚನ್ನಪಟ್ಟಣದಲ್ಲಿ ಅಮಿತ್ ಷಾ ರೋಡ್ ಶೋ

ಹಂತದಲ್ಲಿ ಚುನಾವಣೆ ನಡೆಯಲಿರುವ ಕ್ಷೇತ್ರಗಳಲ್ಲೂ ಪಕ್ಷದಲ್ಲಿ ಗೊಂದಲವಿದೆ. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ರಾಜ್ಯ ಲೋಕಸಭಾ ಉಸ್ತುವಾರಿ ರಾಧಾ ಮೋಹನದಾಸ್ ಅಗರವಾಲ್, ಅಭ್ಯರ್ಥಿಗಳ ಆಯ್ಕೆ ನಂತರ ಎದ್ದಿರುವ ಗೊಂದಲ ನಿವಾರಣೆಗೆ ನಡೆಸಿದ ಯತ್ನ ಫಲಪ್ರದವಾಗಿಲ್ಲ. ಚಿತ್ರದುರ್ಗ ಹಾಗೂ ಚಿಕ್ಕಬಳ್ಳಾಪುರ ಕ್ಷೇತ್ರಗಳಲ್ಲಿ ಪಕ್ಷದ ಪ್ರಭಾವಿ ಶಾಸಕರೇ ತಿರುಗಿ ಬಿದ್ದಿದ್ದಾರೆ. ಇದನ್ನು ಮನಗಂಡ ವರಿಷ್ಠರು ಅಮಿತ್ ಷಾ ಮೂಲಕವೇ ಇದಕ್ಕೆ ಇತಿಶ್ರೀ ಹಾಡಲು ಬಯಸಿದ್ದಾರೆ.

ನಾಳೆ ಕೆಲವು ಮುಖಂಡರ ಜೊತೆ ಷಾ, ಚರ್ಚೆ ಮಾಡಲಿದ್ದಾರೆ. ಪಕ್ಷದ ತೀರ್ಮಾನಕ್ಕೆ ವಿರುದ್ಧ ಹೋಗುವವರಿಗೆ ಮುಖಂಡರ ಸಭೆಯಲ್ಲೇ ಎಚ್ಚರಿಕೆ ನೀಡುವುದಲ್ಲದೆ, ಕಠಿಣ ನಿರ್ಧಾರ ಕೈಗೊಳ್ಳಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ಇದೇ ಸಂದರ್ಭದಲ್ಲಿ ಪಕ್ಷದ ಅಭ್ಯರ್ಥಿಗಳ ಗೆಲುವಿಗೆ ಒಗ್ಗಟ್ಟಿನಿಂದ ಕೆಲಸ ಮಾಡಿ ಕಳೆದ ಬಾರಿಯಂತೆ ಈ ಬಾರಿಯೂ ಕರ್ನಾಟಕದಿಂದ ಹೆಚ್ಚು ಸ್ಥಾನಗಳನ್ನು ಕೊಡುಗೆಯಾಗಿ ನೀಡುವಂತೆ ಸಲಹೆ ನೀಡಲಿದ್ದಾರೆ.

ಸಭೆಯ ನಂತರ ವಿಶೇಷ ಹೆಲಿಕಾಪ್ಟರ್‌ನಲ್ಲಿ ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಚನ್ನಪಟ್ಟಣಕ್ಕೆ ತೆರಳಿ ರೋಡ್ ಶೋ ನಡೆಸಲಿದ್ದಾರೆ. ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಇದೊಂದೇ ಕ್ಷೇತ್ರದಲ್ಲಿ ಖಾತೆ ತೆರೆದಿದ್ದು, ಈ ಕ್ಷೇತ್ರವನ್ನು ಈ ಬಾರಿ ಕಸಿದುಕೊಳ್ಳಲೆಂದೇ ಡಿಕೆ ಸಹೋದರರ ನೆಲದಿಂದಲೇ ಚುನಾವಣಾ ಪ್ರಚಾರ ಆರಂಭಿಸುತ್ತಿದ್ದಾರೆ.

ಪಕ್ಷದ ಅಭ್ಯರ್ಥಿ ಡಾ.ಮಂಜುನಾಥ್ ಜೊತೆಗೂಡಿ ಚನ್ನಪಟ್ಟಣ ಹೊರವಲಯದ ಶೆಟ್ಟಿಳ್ಳಿಯಿಂದ ಟೌನ್ ಪೊಲೀಸ್ ಠಾಣೆವರೆಗೂ ಸಂಜೆ ಬೃಹತ್ ರೋಡ್ ಶೋ ನಡೆಸಲಿದ್ದಾರೆ. ನಂತರ ಠಾಣಾ ವೃತ್ತದಲ್ಲಿ ಕಾರ್ಯಕರ್ತರು ಮತ್ತು ಸಾರ್ವಜನಿಕರ ಬೃಹತ್ ಸಮಾವೇಶ ಉದ್ದೇಶಿಸಿ ಮಾತನಾಡಲಿದ್ದಾರೆ.

ಸಾರ್ವಜನಿಕ ಭಾಷಣದಲ್ಲಿ ಯಾವ ಸಂದೇಶ ನೀಡುತ್ತಾರೆಂಬ ಬಗ್ಗೆ ಬಿಜೆಪಿ ಮುಖಂಡರಲ್ಲೇ ಕುತೂಹಲ ಇದೆ. ಬಿಜೆಪಿ ಮತ್ತು ಜೆಡಿಎಸ್ ಒಟ್ಟಾಗಿ ರೋಡ್ ಶೋ ಮತ್ತು ಸಮಾವೇಶ ನಡೆಸುತ್ತಿದ್ದು ಸ್ಥಳೀಯ ಶಾಸಕ ಜೆಡಿಎಸ್ ರಾಜ್ಯಾಧ್ಯಕ್ಷ ಹಾಗೂ ಮಂಡ್ಯ ಅಭ್ಯರ್ಥಿ ಎಚ್.ಡಿ.ಕುಮಾರಸ್ವಾಮಿ, ಬಿಜೆಪಿ ಮುಖಂಡ ಹಾಗೂ ವಿಧಾನಪರಿಷತ್ ಸದಸ್ಯ ಸಿ.ಪಿ.ಯೋಗೇಶ್ವರ್ ವೇದಿಕೆ ಹಂಚಿಕೊಳ್ಳಲಿದ್ದಾರೆ. ನಂತರ ಶೆಟ್ಟಳ್ಳಿಗೆ ಹಿಂತಿರುಗಿ ಹೆಲಿಕಾಪ್ಟರ್ ಮೂಲಕ ನಗರಕ್ಕೆ ಧಾವಿಸಿ ವಿಶೇಷ ವಿಮಾನದಲ್ಲಿ ದೆಹಲಿಗೆ ಹಿಂತಿರುಗಲಿದ್ದಾರೆ.



ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿ ಯದುವೀರ್ ನಾಮಪತ್ರ ಸಲ್ಲಿಕೆ

ಮೈಸೂರು,ಏ.1(ಆರ್‌ಕೆ)- ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಸ್ಪರ್ಧೆ ಬಯಸಿ ಇಂದು ನಾಮಪತ್ರ ಸಲ್ಲಿಸಿದರು.

ತಾಯಿ ಪ್ರಮೋದಾ ದೇವಿ ಒಡೆಯರ್, ಶಾಸಕ ಶ್ರೀವತ್ಸ, ಮೈಸೂರು ನಗರ ಬಿಜೆಪಿ ಉಪಾಧ್ಯಕ್ಷ ರುದ್ರಮೂರ್ತಿ ಹಾಗೂ ಮಾಧ್ಯಮ ಸಂಚಾಲಕ ಪ್ರದೀಪ್ ಕುಮಾರ್ ಅವರೊಂದಿಗೆ ತೆರಳಿ ಜಿಲ್ಲಾ ಚುನಾವಣಾಧಿಕಾರಿ ಡಾ.ರಾಜೇಂದ್ರ ಅವರಿಗೆ ಒಂದು ಸೆಟ್ ಉಮೇದುವಾರಿಕೆ ಸಲ್ಲಿಸಿದರು.

ನಂತರ ಹೊರಗೆ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದ ಯದುವೀರ್ ಅವರು, ಇಂದು ಜಿಲ್ಲಾ ಚುನಾವಣಾಧಿಕಾರಿಗಳಿಗೆ ಮೊದಲ ಸೆಟ್ ನಾಮಪತ್ರ ಸಲ್ಲಿಸಿದ್ದೇನೆ. ಏಪ್ರಿಲ್ 3ರಂದು ಬಿಜೆಪಿ ಮುಖಂಡರೊಂದಿಗೆ ಮತ್ತೊಂದು ಸೆಟ್ ಉಮೇದುವಾರಿಕೆ ಸಲ್ಲಿಸುತ್ತೇವೆ ಎಂದರು.

ಬಿಜೆಪಿ ಮುಖಂಡರು, ನಾಯಕರು, ಕಾರ್ಯ ಕರ್ತರೊಡಗೂಡಿ ವ್ಯಾಪಕ ಪ್ರಚಾರ ನಡೆಸುತ್ತಿದ್ದೇವೆ ಎಂದು ಯದುವೀರ್ ಇದೇ ವೇಳೆ ತಿಳಿಸಿದರು.



ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸೋಮವಾರ ನಾಮಪತ್ರ ಸಲ್ಲಿಸಿದರು.

ಯದುವೀರ್‌ಗೆ ಸ್ವಂತ ಮನೆ ಇಲ್ಲ; ಓಡಾಡಲು ಕಾರಿಲ್ಲ

ಮೈಸೂರು, ಏ.1(ಬಿಎಲ್‌ಯು)- ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅರಮನೆಯಲ್ಲಿದ್ದರೂ ಅವರಿಗೆ ಸ್ವಂತ ಮನೆ ಇಲ್ಲ, ಓಡಾಡಲು ಕಾರೂ ಇಲ್ಲ.

ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರಿಗೆ ಸಲ್ಲಿಸಿದ ನಾಮಪತ್ರದಲ್ಲಿ ಯದುವೀರ್ ತಮಗಿರುವ ಆಸ್ತಿ ವಿವರವನ್ನು ಘೋಷಿಸಿಕೊಂಡಿದ್ದಾರೆ. ತಮ್ಮ ಬಳಿ 1 ಲಕ್ಷ ನಗದು ಹಣ, ಎರಡು ಬ್ಯಾಂಕ್ ಖಾತೆಯಲ್ಲಿ 23.55 ಲಕ್ಷ ಹಣ ಇದೆ. ಜೊತೆಗೆ ವಿವಿಧ ಕಂಪನಿಗಳಲ್ಲಿ ಒಂದು ಕೋಟಿ ರೂಪಾಯಿ ಮೌಲ್ಯದ ಬಾಂಡ್ ಮತ್ತು ಷೇರು ಇದೆ ಎಂದು ಮಾಹಿತಿ ನೀಡಿದ್ದಾರೆ. ಇದಲ್ಲದೆ 4 ಕೆ.ಜಿ. ಚಿನ್ನ, 10 ಕೆ.ಜಿ. ಬೆಳ್ಳಿ ಇದೆ ಎಂದು ಕೂಡ ಯದುವೀರ್ ನಾಮಪತ್ರದ ದಾಖಲೆಯಲ್ಲಿ ಆಸ್ತಿ ವಿವರ ನೀಡಿದ್ದಾರೆ. ಒಟ್ಟಾರೆ 4,99,59,303 ಮೌಲ್ಯದ ಚರಾಸ್ತಿ ಹೊಂದಿರುವುದಾಗಿ ಯದುವೀರ್ ತಿಳಿಸಿದ್ದಾರೆ.

ಯಾವುದೇ ಕೃಷಿ ಭೂಮಿ, ಸ್ವಂತ ಮನೆ, ವಾಣಿಜ್ಯ ಕಟ್ಟಡ ಹಾಗೂ ಸಾಲ ಹೊಂದಿಲ್ಲ. ಅಷ್ಟೆ ಏಕೆ ಓಡಾಡಲು ಸ್ವಂತ ಕಾರು ಕೂಡ ಇಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಯಾವುದೇ ಆದಾಯ ತೆರಿಗೆ ಹಣ ಬಾಕಿ ಉಳಿಸಿಕೊಂಡಿಲ್ಲ. ತಮ್ಮ ವಿರುದ್ಧ ಯಾವುದೇ ಪ್ರಕರಣಗಳು ದಾಖಲಾಗಿಲ್ಲ ಎಂದು ಯದುವೀರ್ ನಾಮಪತ್ರದ ದಾಖಲಾತಿ ಪ್ರಮಾಣ ಪತ್ರದಲ್ಲಿ ತಿಳಿಸಿದ್ದಾರೆ.

ಯದುವೀರ್‌ಗೆ ಬಿಜೆಪಿ 'ಬಿ ಫಾರಂ' ಹಸ್ತಾಂತರ



ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿರುವ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಸೋಮವಾರ ಪಕ್ಷದ ಮುಖಂಡರು 'ಬಿ' ಫಾರಂ ಹಸ್ತಾಂತರಿಸಿದರು.

ಮೈಸೂರು,ಏ.1(ಆರ್‌ಕೆ)- ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿರುವ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಇಂದು ಪಕ್ಷದ 'ಬಿ' ಫಾರಂ ಹಸ್ತಾಂತರಿಸಲಾಯಿತು.

ಬಿಜೆಪಿ ರಾಜ್ಯ ಉಪಾಧ್ಯಕ್ಷ ರಾಜೇಂದ್ರ, ಮೈಸೂರು ನಗರಾಧ್ಯಕ್ಷ ಎಲ್.ನಾಗೇಂದ್ರ ಅವರು ಅರಮನೆಗೆ ತೆರಳಿ ಯದುವೀರ್ ಅವರಿಗೆ ಪಕ್ಷದ 'ಬಿ'ಫಾರಂ ನೀಡಿದರು. ಈ ವೇಳೆ ಯದುವೀರ್ ತಾಯಿ ಪ್ರಮೋದಾದೇವಿ ಒಡೆಯರ್, ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಸಚಿವ ಎಸ್.ಎ.ರಾಮದಾಸ್, ಮಾಜಿ ಶಾಸಕ ಪ್ರೀತಂಗೌಡ, ಜಿಲ್ಲಾ ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ನಗರ ಪ್ರಧಾನ ಕಾರ್ಯದರ್ಶಿ ಕೇಬಲ್ ಮಹೇಶ್, ಮುಖಂಡರಾದ ನಂದೀಶ್, ಸಿದ್ದರಾಜು ಇತರರಿದ್ದರು.

ಚಾಮುಂಡೇಶ್ವರಿ ಸನ್ನಿಧಿಯಲ್ಲಿ ಬಿ ಫಾರಂ ಇಟ್ಟು ಪೂಜೆ ಸಲ್ಲಿಸಿದ ಶೋಭಾ ಕರಂದ್ಲಾಜೆ



ಮೈಸೂರು,ಏ.1(ಬಿಎಲ್‌ಯ)-ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶೋಭಾ ಕರಂದ್ಲಾಜೆ ಇಂದು ಚಾಮುಂಡಿಬೆಟ್ಟದಲ್ಲಿ ನಾಡದೇವತೆ ತಾಯಿ ಚಾಮುಂಡೇಶ್ವರಿ ಸನ್ನಿಧಿಯಲ್ಲಿ ಬಿ ಫಾರಂ ಇಟ್ಟು ವಿಶೇಷ ಪೂಜೆ ಸಲ್ಲಿಸಿದ್ದಾರೆ.

ಇಂದು ಬೆಳಗ್ಗೆ ಚಾಮುಂಡಿಬೆಟ್ಟಕ್ಕೆ ಆಗಮಿಸಿದ ಶೋಭಾ ಕರಂದ್ಲಾಜೆ ಶಕ್ತಿ ದೇವತೆಗೆ ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ದೇವಿಯ ಸನ್ನಿಧಿಯಲ್ಲಿ ಬಿ ಫಾರಂ ಇರಿಸಿ, ಪೂಜೆ ಕೂಡ ಮಾಡಿಸಿದರು. ಲೋಕಸಭಾ ಚುನಾವಣೆಯಲ್ಲಿ ತಮಗೆ ಗೆಲುವು ಸಿಗಲಿ ಎಂದು ಶೋಭಾ, ಚಾಮುಂಡೇಶ್ವರಿಯಲ್ಲಿ ಪ್ರಾರ್ಥಿಸಿದ್ದಾರೆ. ಶೋಭಾ ಮೊದಲಿಂದಲೂ ಚಾಮುಂಡೇಶ್ವರಿ ದೇವಿಯ ಮಹಾ ಆರಾಧಕಿ. ಯಾವುದೇ ಶುಭ ಕೆಲಸಕ್ಕೆ ಮುನ್ನ ಚಾಮುಂಡಿಬೆಟ್ಟಕ್ಕೆ ಬರುತ್ತಾರೆ. ಅಲ್ಲದೆ ಆಷಾಢ ಶುಕ್ರವಾರದ ಸಮಯದಲ್ಲಿ ಮೆಟ್ಟಿಲು ಮೂಲಕ ಚಾಮುಂಡಿಬೆಟ್ಟ ಹತ್ತಿ ದೇವಿ ದರ್ಶನ ಪಡೆಯುತ್ತಾರೆ. ಅದರಂತೆ ಇಂದು ತನ್ನ ಇಷ್ಟಾರ್ಥ ಸಿದ್ಧಿಯಾಗಲೆಂದು ಚಾಮುಂಡೇಶ್ವರಿಯಲ್ಲಿ ಬೇಡಿದ್ದಾರೆ. ನಂತರ ನಂಜನಗೂಡಿಗೂ ಭೇಟಿ ನೀಡಿ, ಶ್ರೀಕಂಠೇಶ್ವರನಿಗೂ ವಿಶೇಷ ಪೂಜೆ ಸಲ್ಲಿಸಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್ ಬಿರುಸಿನ ಪ್ರಚಾರ



ಮೈಸೂರು,ಏ.1-ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್ ಕೃಷ್ಣರಾಜ ಕ್ಷೇತ್ರದ ವಾರ್ಡ್ ನಂ.59ರ ಕುವೆಂಪುನಗರ ಎಂ-ಬ್ಲಾಕ್ ಬಡಾವಣೆಯಲ್ಲಿ ಮನೆ ಮನೆಗೆ ತೆರಳಿ ಮತಯಾಚನೆ ಮಾಡಿದರು.

ಈ ವೇಳೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಜಿ.ಸೋಮಶೇಖರ್, ಶ್ರೀಧರ್, ಮಾಜಿ ಮಹಾಪೌರರಾದ ಟಿ.ಬಿ.ಚಿಕ್ಕಣ್ಣ, ಪುಷ್ಪಲತಾ ಚಿಕ್ಕಣ್ಣ, ಬಿ.ಕೆ.ಪ್ರಕಾಶ್, ಅಯೂಬ್‌ಖಾನ್, ರಾಜ್ಯ ಕಾರ್ಯದರ್ಶಿ ಲತಾಮೋಹನ್, ಮಹಿಳಾ ಆಯೋಗದ ಮಾಜಿ ಅಧ್ಯಕ್ಷರಾದ ಮಂಜುಳಾ ಮಾನಸ, ಮಾಜಿ ಸಿಂಡಿಕೇಟ್ ಸದಸ್ಯ ಗೋಪಿನಾಥ್, ಪ್ರಧಾನ ಕಾರ್ಯದರ್ಶಿ ಭಾಸ್ಕರ್ ಎಲ್.ಗೌಡ, ಕಾರ್ಯದರ್ಶಿಗಳಾದ ಡೈರಿ ವೆಂಕಟೇಶ್, ರಮೇಶ್ ರಾಮಪ್ಪ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷೆ ಇಂದಿರಾ, ನಗರ ಸಂಘಟನಾ ಕಾರ್ಯದರ್ಶಿ ಮಲ್ಲಾಜಮ್ಮ ವಾರ್ಡ್ ಅಧ್ಯಕ್ಷೆ ಜ್ಯೋತಿ, ಲಕ್ಷ್ಮಿ, ಮುಖಂಡರಾದ ಆನಂದ್, ಕುಮಾರ್ ಗೌಡ, ಶ್ರೀಧರ್, ಲೋಕೇಶ್‌ಕುಮಾರ್ ಮಾದಾಪುರ, ರಾಮನ್, ಅವಿನಾಶ್, ಮನೋಜ್, ರವಿ ಮತ್ತಿತರರಿದ್ದರು.

ಎನ್‌ಡಿಎ ಮೈತ್ರಿ ಅಭ್ಯರ್ಥಿಗಳ ವಿರುದ್ಧ ರೈತ ಸಂಘದಿಂದ ಕರಪತ್ರ ಹಂಚಿಕೆ

ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಘೋಷಣೆ

ಮೈಸೂರು, ಏ.1(ಎಂಟಿವೈ)- ರಾಜ್ಯಕ್ಕೆ ಬರ ಪರಿಹಾರ ನೀಡದೆ ಅನ್ಯಾಯ ಮಾಡಿರುವುದರಿಂದ ಲೋಕಸಭಾ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಗಳ ವಿರುದ್ಧ ಕರಪತ್ರ ಹಂಚಿ ಜಾಗೃತಿ ಮೂಡಿಸುವುದಾಗಿ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಘೋಷಿಸಿದ್ದಾರೆ.

ಮೈಸೂರಿನ ಕುವೆಂಪುನಗರದ ವಿಶ್ವಮಾನವ ಜೋಡಿರಸ್ತೆಯಲ್ಲಿರುವ ರಾಜ್ಯ ರೈತ ಸಂಘದ ಕಚೇರಿಯಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತಿಹಾಸದಲ್ಲಿ ಕರ್ನಾಟಕಕ್ಕೆ ಎಂದೂ ಆಗಿರದ ಅವಮಾನ ಹಾಗೂ ಅನ್ಯಾಯವನ್ನು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ನಿರಂತರವಾಗಿ ಮಾಡುತ್ತಿದ್ದು, ರೈತರು ಕಂಗಾಲಾಗಿದ್ದಾರೆ. ಈ ಹಿನ್ನೆಲೆಯಲ್ಲಿ ರೈತರು ಹಾಗೂ ರಾಜ್ಯದ ಜನತೆ ಎನ್‌ಡಿಎ ಮೈತ್ರಿಕೂಟದ ವಿರುದ್ಧ ಮತಚಲಾಯಿಸಬೇಕು. ಆ ಮೂಲಕ ಕನ್ನಡಿಗರು ಕೇಂದ್ರ ಸರ್ಕಾರದಿಂದ ತಮಗೆ ಆಗಿರುವ ಅನ್ಯಾಯವನ್ನು ಪ್ರತಿಭಟಿಸಬೇಕು. ಇದರಿಂದಾಗಿ ರಾಜ್ಯ ರೈತ ಸಂಘದ ವತಿಯಿಂದ ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟದ ವಿರುದ್ಧ ಮತ ಚಲಾಯಿಸುವಂತೆ ಕರಪತ್ರಗಳನ್ನು ಹಂಚಿ ಜಾಗೃತಿ ಮೂಡಿಸಲಾಗುತ್ತಿದೆ. ಸಭೆ-ಸಮಾರಂಭಗಳನ್ನು ನಡೆಸಿ ಬಿಜೆಪಿ ವಿರುದ್ಧ ಗೆಲ್ಲಲು ಸಾಮರ್ಥ್ಯವಿರುವ ಅಭ್ಯರ್ಥಿಗೆ ಮತ ಚಲಾಯಿಸುವಂತೆ ಮನವಿ ಮಾಡಲಾಗುತ್ತಿದೆ ಎಂದರು.

ಮಣ್ಣಿನ ಮಕ್ಕಳು ಎಂದು ಕರೆದುಕೊಳ್ಳುವ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಮತ್ತು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ರೈತ ವಿರೋಧಿ ಪಕ್ಷದೊಂದಿಗೆ ಹೊಂದಾಣಿಕೆಯಾಗಿ ಕೇಂದ್ರದ ಅನ್ಯಾಯವನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ. ರಾಜ್ಯದ ಹಿತಕ್ಕೆ ಮಾರಕವಾಗುವ ಹೇಳಿಕೆ ನೀಡುತ್ತಿದ್ದಾರೆ. ಕೇಂದ್ರದಿಂದ ಬಿಡಿಗಾಸು ಬಾರದೇ ಇದ್ದಾಗ 628 ಕೋಟಿ ರೂ. ಪರಿಹಾರ ವಿತರಿಸಿರುವ ರಾಜ್ಯ ಸರ್ಕಾರವನ್ನೇ ಟೀಕೆ ಮಾಡುತ್ತಿದ್ದಾರೆ. ಆದರೆ, ಕೇಂದ್ರದ ಅಮಾನವೀಯ, ಅಸಂವಿಧಾನಿಕ ನಡೆಯನ್ನು ಖಂಡಿಸುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.



ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಮೈಸೂರಿನ ಕುವೆಂಪುನಗರದಲ್ಲಿರುವ ರೈತ ಸಂಘದ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದರು.

ಕಳೆದ 122 ವರ್ಷಗಳಲ್ಲಿ ಕಂಡರಿಯದ ಬರವನ್ನು ರಾಜ್ಯ ಎದುರಿಸುತ್ತಿದೆ. ಇದರಿಂದ ರೈತರು ತತ್ತರಿಸಿದ್ದಾರೆ. ಆದರೆ, ಬರ ಪರಿಹಾರ ಬಿಡುಗಡೆಯ ಕುರಿತು ಒಂದೇ ಒಂದು ಸಭೆ ಕರೆಯಲು ಸಮಯ ಕೊಡದ ಕೇಂದ್ರ ಸಚಿವ ಅಮಿತ್ ಶಾ ರಾಜ್ಯದಲ್ಲಿ ಚುನಾವಣಾ ಪ್ರಚಾರ ನಡೆಸುವ ನೈತಿಕ ಅರ್ಹತೆ ಹೊಂದಿಲ್ಲ. ಮೊದಲು ಕರ್ನಾಟಕಕ್ಕೆ ಬರ ಪರಿಹಾರ ಬಿಡುಗಡೆ ಮಾಡಿದ ನಂತರ ಅವರು ಮತ ಕೇಳಲು ರಾಜ್ಯಕ್ಕೆ ಬರಬೇಕು. ರಾಜ್ಯ ಸರ್ಕಾರ ವರದಿ ಸಲ್ಲಿಸಿದ 1 ತಿಂಗಳಲ್ಲಿ ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿ (ಎನ್‌ಡಿಆರ್‌ಎಫ್)ನಿಂದ ಹಣ ಬಿಡುಗಡೆ ಮಾಡಬೇಕು. ಆದರೆ, ಕಳೆದ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದ ಜನತೆ ಬಿಜೆಪಿಯನ್ನು ತಿರಸ್ಕರಿಸಿದ ಕಾರಣ ಈಗ ಅಮಿತ್ ಶಾ ದ್ವೇಷ ಸಾಧಿಸುತ್ತಿದ್ದಾರೆ. ಅಪ್ರಜಾತಾಂತ್ರಿಕ, ಅಮಾನವೀಯ ಮತ್ತು ಕ್ರೌರ್ಯದಿಂದ ನಡೆದುಕೊಳ್ಳುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

> ಕರ್ನಾಟಕದಿಂದ ಆಯ್ಕೆಯಾದ ಬಿಜೆಪಿಯ 25 ಮತ್ತು ಬಿಜೆಪಿಯನ್ನು ಬೆಂಬಲಿಸುವ ಓರ್ವ ಸಂಸದರು ತಮ್ಮದೇ ಪಕ್ಷದ ಪ್ರಧಾನಿ ಮೋದಿ ಅವರ ಬಳಿ ಬರ ಪರಿಹಾರ ನೀಡುವಂತೆ ಒಂದು ಬಾರಿಯೂ ಮನವಿ ಮಾಡಿಲ್ಲ. ರಾಜ್ಯದ ಜನರ ಹಿತ ಕಾಯುವುದು ನಮಗೆ ಸಂಬಂಧಿಸಿಲ್ಲದಂತೆ ವರ್ತಿಸಿದ್ದಾರೆ. ರಾಜ್ಯದ ಜನರಿಗೆ ದ್ರೋಹ ಬಗೆದಿದ್ದಾರೆ. ಇದು ರೈತ ಕುಲದ, ಜನ-ಜಾನುವಾರುಗಳ ಬವಣೆಯತ್ತ ತೋರಿದ ಕ್ರೌರ್ಯ. ಇಷ್ಟೆಲ್ಲಾ ಅವಮಾನ ಮಾಡಿದರೂ ಧೈರ್ಯವಾಗಿ ರಾಜ್ಯದಲ್ಲಿ ಚುನಾವಣಾ ಪ್ರಚಾರಕ್ಕೆ ಗೃಹ ಸಚಿವ ಅಮಿತ್ ಶಾ ಬರುತ್ತಿದ್ದಾರೆ. ಈ ಪ್ರಮಾಣದಲ್ಲಿ ಅನ್ಯಾಯವೆಸಗಿದ್ದರೂ ಗೃಹ ಸಚಿವರನ್ನು ಮತ್ತೆ ಚುನಾವಣೆ ಪ್ರಚಾರಕ್ಕೆ ಕರೆಸುತ್ತಿರುವ ಬಿಜೆಪಿ ಪಕ್ಷ ರಾಜ್ಯದ ಮಟ್ಟಿಗೆ ಸತ್ತು ಹೋಗಿದೆ. **-ಬಡಗಲಪುರ ನಾಗೇಂದ್ರ**

ಇತ್ತೀಚೆಗೆ ಕೇಂದ್ರದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮೈಸೂರಿನಲ್ಲಿ ನಡೆದ ಸಂವಾದದಲ್ಲಿ ಕೇಂದ್ರದಿಂದ ರಾಜ್ಯಕ್ಕೆ ಬರ ಪರಿಹಾರ ಬಿಡುಗಡೆ ಮಾಡಿದೆ ಎಂದು ಸುಳ್ಳು ಹೇಳಿ ಜನರನ್ನು ದಿಕ್ಕು ತಪ್ಪಿಸುತ್ತಿದ್ದಾರೆ. ಬರ ಪರಿಹಾರ, ತೆರಿಗೆ ಬಾಕಿ ನೀಡಬೇಕಿರುವ ಕುರಿತು ನಿರ್ಮಲಾ ಸೀತಾರಾಮನ್ ರೈತ ಸಂಘದೊಂದಿಗೆ ಬಹಿರಂಗ ಚರ್ಚೆಗೆ ಬರಲಿ. ರಾಜ್ಯ ಬಿಜೆಪಿ ನಾಯಕರು ರೈತರ ಬಗ್ಗೆ ಕಾಳಜಿ ಹೊಂದಿಲ್ಲ. ಆ ಕಾರಣದಿಂದ ಅವರು ರಾಜ್ಯದ ಪರ ಧ್ವನಿ ಎತ್ತುತ್ತಿಲ್ಲ. ಈ ಹಿನ್ನೆಲೆಯಲ್ಲಿ ರಾಜ್ಯದ ಜನತೆ ಬಿಜೆಪಿಯನ್ನು ತಿರಸ್ಕರಿಸಬೇಕು ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊಸಕೋಟೆ ಬಸವರಾಜು, ಮೈಸೂರು ತಾಲೂಕು ಅಧ್ಯಕ್ಷ ಮಂಡಕಳ್ಳಿ ಮಹೇಶ್ ಇದ್ದರು.

ಇದುವರೆಗಿನದ್ದೇ ಶೂನ್ಯ ಇರುವಾಗ ಇನ್ನು ಟ್ರೈಲರ್ ಎಲ್ಲಿಂದ ಬಂತು?

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಅಭಿವೃದ್ಧಿ ಹೇಳಿಕೆಗೆ ಮೈಸೂರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಎದಿರೇಟು

- ಸುಳ್ಳಿನ ಪಿಕ್ಚರ್ ಬಾಕಿ ಇರಬಹುದು
- ಮೋದಿ ಮೋಡಿ ಇನ್ನು ನಡೆಯಲ್ಲ
- ನನ್ನ ಮಗ ಹೇಳಿದ್ದು ಸರಿ
- ಜೆಡಿಎಸ್ ಮೈತ್ರಿ ಅನುಭವ ನಮಗೆ ಚೆನ್ನಾಗಿ ಆಗಿದೆ

ಮೈಸೂರು, ಏ.1(ಬಿಎಲ್‌ಯು)- ಕೇಂದ್ರದ ಬಿಜೆಪಿ ಸರ್ಕಾರ ಅಭಿವೃದ್ಧಿ ಮಾಡಿದ್ದರೆ ತಾನೆ ಟ್ರೈಲರ್ ಇರುತ್ತದೆ. ಅಭಿವೃದ್ಧಿ ಶೂನ್ಯವಾಗಿರುವಾಗ ಟ್ರೈಲರ್ ಹೇಗೆ ಇರುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಪ್ರಧಾನಮಂತ್ರಿ ನರೇಂದ್ರ ಮೋದಿಯನ್ನು ಪ್ರಶ್ನಿಸಿದ್ದಾರೆ.

ಮೈಸೂರು ವಿಮಾನ ನಿಲ್ದಾಣದಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಹತ್ತು ವರ್ಷಗಳ ಕೇಂದ್ರ ಸರ್ಕಾರದ ಅಭಿವೃದ್ಧಿ ಟ್ರೈಲರ್ ಮಾತ್ರವಾಗಿದ್ದು, ಸಿನಿಮಾ ಇನ್ನು ಬಾಕಿ ಇದೆ ಎಂಬ ನರೇಂದ್ರ ಮೋದಿ ಹೇಳಿಕೆಗೆ ತಿರುಗೇಟು ನೀಡಿದ ಸಿದ್ದರಾಮಯ್ಯ, ಅಭಿವೃದ್ಧಿ ಆಗಿದ್ದರೆ ತಾನೆ ಟ್ರೈಲರ್ ಇರುವುದು. ಶೂನ್ಯ ಅಭಿವೃದ್ಧಿಯಲ್ಲಿ ಟ್ರೈಲರ್ ಆದರೂ ಹೇಗೆ ಇರುತ್ತದೆ. ಪ್ರಾಯಶಃ ಸುಳ್ಳಿನ ಪಿಕ್ಚರ್ ಬಾಕಿ ಇರಬಹುದು ಎಂದು ವ್ಯಂಗ್ಯವಾಡಿದರು.

ಹತ್ತು ವರ್ಷಗಳ ಕೇಂದ್ರ ಸರ್ಕಾರದ ಆಡಳಿತ ವೈಫಲ್ಯ ನೋಡಿರುವ ಜನರು ಅವರ ಸುಳ್ಳು ಮಾತಿಗೆ ಮರುಳಾಗುವುದಿಲ್ಲ. ಸ್ವತಃ ಪ್ರಧಾನಮಂತ್ರಿ ನರೇಂದ್ರ ಮೋದಿಯೇ ಬಂದು ಪ್ರಚಾರ ಮಾಡಿದರೂ ಬಿಜೆಪಿ ಗೆಲ್ಲುವುದಿಲ್ಲ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ನರೇಂದ್ರ ಮೋದಿ ಅವರೇ ಬಂದು ಪ್ರಚಾರ ಮಾಡಿದ್ದರು. ಆಗ ಏನಾಯಿತು, ಬಿಜೆಪಿ ಯಾವ ರೀತಿ ಹೀನಾಯ ಸೋಲು ಕಂಡಿತು ಎಂಬುದು ಎಲ್ಲರಿಗೂ ತಿಳಿದಿರುವ ಸತ್ಯವಾಗಿದೆ. ಅದೇ ಪರಿಸ್ಥಿತಿ ಲೋಕಸಭಾ ಚುನಾವಣೆಯಲ್ಲೂ ಪುನರಾವರ್ತನೆ ಆಗಲಿದೆ ಎಂದು ಭವಿಷ್ಯ ನುಡಿದರು.

ರಾಷ್ಟ್ರಮಟ್ಟದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ 400 ಸ್ಥಾನವಲ್ಲ 200 ಸ್ಥಾನ ಕೂಡ ದಾಟುವುದಿಲ್ಲ. ಇನ್ನು ಕರ್ನಾಟಕದಲ್ಲಿ ನಾವು ಸರ್ವೆ ಮಾಡಿಸಿದ್ದು, 20 ಸ್ಥಾನ ಗೆದ್ದೆ ಗೆಲ್ಲುತ್ತೇವೆ. ಈ ವಾಸ್ತವತೆ ತಿಳಿದಿದ್ದರೂ ಬಿಜೆಪಿಯವರು ಸುಳ್ಳು ಹೇಳುತ್ತಿದ್ದಾರೆ. ಆದರೆ ಇವರ ಸುಳ್ಳಿಗೆ ಜನರು ಮರುಳಾಗುವುದಿಲ್ಲ. ಇವರ ಮಾತನ್ನು ಯಾರೂ ನಂಬುವುದಿಲ್ಲ.

ಮೈಸೂರು ಮತ್ತು ಚಾಮರಾಜನಗರ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲ್ಲಲಿದೆ. ನನಗೆ ಮೈಸೂರು ಮತ್ತು ಚಾಮರಾಜನಗರ ಮಾತ್ರ ಮುಖ್ಯವಲ್ಲ. ರಾಜ್ಯದ ಎಲ್ಲಾ ಕ್ಷೇತ್ರಗಳೂ ಮುಖ್ಯ. ಸಾಧ್ಯವಾದಷ್ಟು ಎಲ್ಲಾ ಕ್ಷೇತ್ರದಲ್ಲೂ ಪ್ರಚಾರ ಮಾಡುತ್ತೇನೆ ಎಂದರು.

ನನ್ನ ಮಗ ಹೇಳಿದ್ದು ಸರಿ: ಅಮಿತ್ ಶಾ ಗೂಂಡಾ ಎಂಬ ತಮ್ಮ ಪುತ್ರ ಡಾ.ಯತೀಂದ್ರ ಹೇಳಿಕೆಯನ್ನು ಸಮರ್ಥಿಸಿಕೊಂಡ ಸಿದ್ದರಾಮಯ್ಯ, ಸಿಬಿಐ ಹೇಳಿರುವುದನ್ನು ಯತೀಂದ್ರ ಉಲ್ಲೇಖಿಸಿ ಹೇಳಿದ್ದಾನೆ. ಆ ಪದ ಯತೀಂದ್ರ ಬಳಸಿರುವ ಪದವಲ್ಲ, ಸಿಬಿಐ ವರದಿಯಲ್ಲಿ ಉಲ್ಲೇಖಿಸಿರುವ ಪದ. ಅಮಿತ್ ಶಾ ಅವರನ್ನು ಅವಮಾನಿಸುವ ಉದ್ದೇಶದಿಂದ ಆ ಪದ ಬಳಕೆ ಮಾಡಿಲ್ಲ. ಈ ವಿಚಾರವಾಗಿ ಯತೀಂದ್ರಗೆ ಸಂಸ್ಕಾರವಿಲ್ಲ ಎಂದು ಬಿಜೆಪಿ ನಾಯಕರು ಮುಗಿಬಿದ್ದರು. ಆದರೆ ಬಿಜೆಪಿಯವರಿಂದ ಯತೀಂದ್ರ ಸಂಸ್ಕಾರದ ಪಾಠ ಹೇಳಿಸಿಕೊಳ್ಳುವ ಪ್ರಮೇಯವಿಲ್ಲ ಎಂದು ಟಾಂಗ್ ನೀಡಿದರು.

ಕೇಂದ್ರದ ಬಿಜೆಪಿ ಸರ್ಕಾರದ ಹತ್ತು ವರ್ಷದ ಅವಧಿಯಲ್ಲಿ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಕಡಿಮೆಯಾದರೆ, ಇವರು ಇಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ ಕಡಿಮೆ ಮಾಡಬೇಕು. ಆದರೆ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯನ್ನು ಗಗನಕ್ಕೇರಿಸಿದ್ದಾರೆ. ಈ ಮೂಲಕ ಕೇಂದ್ರ ಸರ್ಕಾರದ ವೈಫಲ್ಯತೆ ಹಾಗೂ ನಮ್ಮ ಪಂಚ ಗ್ಯಾರಂಟಿಗಳು ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಕೈ ಹಿಡಿಯುತ್ತದೆ. ನಮಗೆ ಉತ್ತಮ ಫಲಿತಾಂಶ ಬರುತ್ತದೆ. ನಮ್ಮ ಗ್ಯಾರಂಟಿ ಯೋಜನೆ ಯಶಸ್ವಿಯಾದ ಮೇಲೆ ಮೋದಿ ನಮ್ಮ ಗ್ಯಾರಂಟಿ ಪದವನ್ನು ಕದ್ದಿದ್ದಾರೆ ಎಂದು ಹೇಳಿದರು.

ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ ಗಟ್ಟಿಯಾಗಿದೆ ಎಂಬ ದೋಸ್ತಿಗಳ ಹೇಳಿಕೆಗೆ ವ್ಯಂಗ್ಯವಾಡಿದ ಸಿದ್ದರಾಮಯ್ಯ, ಜೆಡಿಎಸ್ ಜೊತೆಗಿನ ಮೈತ್ರಿ ಹೇಗಿರುತ್ತದೆ ಎಂಬ ಅನುಭವ ನಮಗಿದೆ. ಮೈತ್ರಿ ಸಂಬಂಧ ಯಾವ ರೀತಿ ಇರುತ್ತದೆ ಎಂಬುದನ್ನು ಜೆಡಿಎಸ್‌ನವರು ನಮಗೆ ತೋರಿಸಿದ್ದಾರೆ. ನಮ್ಮ ಜೊತೆ ಮೈತ್ರಿ ಹೇಗಿತ್ತೊ ಅದೇ ರೀತಿ ಬಿಜೆಪಿ ಜೊತೆಯೂ ಇರುತ್ತದೆ ಎಂದು ಸಿದ್ದರಾಮಯ್ಯ ಲೇವಡಿ ಮಾಡಿದರು.

ಶ್ರೀನಿವಾಸಪ್ರಸಾದ್ ಭೇಟಿ ಮಾಡಿಲ್ಲ; ಫೋನ್‌ನಲ್ಲೂ ಮಾತಾಡಿಲ್ಲ

ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಸಂಸದ ಶ್ರೀನಿವಾಸ ಪ್ರಸಾದ್ ಜೊತೆ ಮಾತನಾಡಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಶ್ರೀನಿವಾಸ ಪ್ರಸಾದ್ ಅವರನ್ನು ನಾನು ಭೇಟಿ ಮಾಡಿಲ್ಲ. ದೂರವಾಣಿ ಮೂಲಕವೂ ಮಾತುಕತೆ ನಡೆಸಿಲ್ಲ ಎಂದರು. ಸಚಿವರಾದ ಡಾ.ಮಹದೇವಪ್ಪ ವೆಂಕಟೇಶ್, ಶ್ರೀನಿವಾಸ ಪ್ರಸಾದ್ ಭೇಟಿ ಮಾಡಿದ್ದಾರೆ. ಭೇಟಿ ವೇಳೆ ಶ್ರೀನಿವಾಸಪ್ರಸಾದ್ ಏನು ಹೇಳಿದ್ದಾರೆ ಎಂಬುವುದನ್ನು ಅವರನ್ನೆ ಕೇಳಿ ಎಂದರು. ಕಾಂಗ್ರೆಸ್‌ಗೆ ಬಹಳಷ್ಟು ನಾಯಕರು ಸೇರುತ್ತಿದ್ದಾರೆ. ನಮ್ಮ ತತ್ವ ಸಿದ್ಧಾಂತ ಒಪ್ಪಿ ಯಾರೇ ಪಕ್ಷಕ್ಕೆ ಬಂದರೂ ಅವರಿಗೆ ಸ್ವಾಗತ ಎಂದು ಸಿದ್ದರಾಮಯ್ಯ ಆಹ್ವಾನ ನೀಡಿದರು.



ಮೈಸೂರು ವಿಮಾನ ನಿಲ್ದಾಣದಲ್ಲಿ ಸೋಮವಾರ ಪತ್ರಕರ್ತರ ಜೊತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು. ಚಿತ್ರದಲ್ಲಿ ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ, ಕೆ.ವೆಂಕಟೇಶ್, ಮುಡಾ ಅಧ್ಯಕ್ಷ ಕೆ.ಮರಿಗೌಡ, ಪುಷ್ಪಾ ಅಮರನಾಥ್ ಇದ್ದಾರೆ.

ದೇವೇಗೌಡರಿಗೆ ನನ್ನ ಕಂಡರೆ ತುಂಬಾ ಪ್ರೀತಿ!

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಜೊತೆ ತುಂಬಾ ವರ್ಷ ಇದ್ದೆನ್ನಲ್ಲ, ಅದಕ್ಕೆ ಅವರಿಗೆ ನನ್ನ ಬಗ್ಗೆ ತುಂಬಾ ಪ್ರೀತಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನಗು ನಗುತ್ತಾ ಹೇಳಿದರು. ಸಿದ್ದರಾಮಯ್ಯ ಗರ್ವಭಂಗವಾಗಬೇಕು ಎಂಬ ಹೆಚ್.ಡಿ.ದೇವೇಗೌಡರ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ, ನನಗೆ ಗರ್ವ ಇದ್ದರೆ ತಾನೆ ಭಂಗ ಆಗುವುದು. ದೇವೇಗೌಡರು ಹೇಳಿರುವುದನ್ನು ನಾನು ಹೇಳಿದ್ದೇನೆ. ಸತ್ಯ ಹೇಳಿದರೆ ನನಗೆ ಗರ್ವ ಎಂದೇಳುತ್ತಾರೆ ಎಂದರು. ಮೋದಿ ಪ್ರಧಾನಿಯಾದರೆ ದೇಶ ಬಿಟ್ಟು ಹೋಗುತ್ತೇನೆ, ಮುಂದಿನ ಜನ್ಮದಲ್ಲಿ ಮುಸ್ಲಿಂನಾಗಿ ಹುಟ್ಟಬೇಕು ಎಂಬ ಆಸೆ ಇದೆ ಎಂಬ ಹೆಚ್.ಡಿ.ದೇವೇಗೌಡರ ಹೇಳಿಕೆಯನ್ನು ಉಲ್ಲೇಖಿಸಿ ನಾನು ಮಾತನಾಡಿದ್ದೇನೆ. ಇದನ್ನೆ ಗರ್ವ ಅಂದರೆ ಹೇಗೆ? ಎಂದು ಪ್ರಶ್ನಿಸಿದರು.

15 ದಿನದಲ್ಲಿ ಮೂರನೇ ಬಾರಿ ಮೈಸೂರಿಗೆ ಸಿದ್ದರಾಮಯ್ಯ ಭೇಟಿ

ಮೈಸೂರು-ಕೊಡಗು ಲೋಕಸಭಾ ಕ್ಷೇತ್ರ ಪ್ರತಿಷ್ಠೆಯ ಕಣವಲ್ಲ ಎಂದು ಸಿದ್ದರಾಮಯ್ಯ ಎಷ್ಟೇ ಬಾರಿ ಸಾರಿ ಹೇಳಿದರೂ, ತವರು ಜಿಲ್ಲೆಯ ಫಲಿತಾಂಶ ಅವರಿಗೆ ಪ್ರತಿಷ್ಠೆಯ ಕಣವೇ ಆಗಿದೆ. ಈ ಹಿನ್ನೆಲೆಯಲ್ಲಿ ಕಳೆದ 15 ದಿನದಲ್ಲಿ ಸಿದ್ದರಾಮಯ್ಯ ಮೈಸೂರಿಗೆ ಮೂರನೇ ಬಾರಿ ಭೇಟಿ ನೀಡಿದ್ದಾರೆ. ಅದರಲ್ಲೂ ಎಂಟು ದಿನ ಮೈಸೂರಿನಲ್ಲೇ ವಾಸ್ತವ್ಯ ಹೂಡಿದ್ದಾರೆ. ಮೊದಲ ಬಾರಿಗೆ ಬಂದಾಗ ಎರಡು ದಿನ, ಕಳೆದ ಬಾರಿ ಮೂರು ದಿನ ಮೈಸೂರಿನಲ್ಲೇ ವಾಸ್ತವ್ಯ ಹೂಡಿದ್ದ ಸಿದ್ದರಾಮಯ್ಯ ಈಗ ಮತ್ತೆ ಮೂರು ದಿನದ ವಾಸ್ತವ್ಯಕ್ಕೆ ಮೈಸೂರಿಗೆ ಬಂದಿದ್ದಾರೆ. ಈ ವೇಳೆ ಮೈಸೂರು ಮತ್ತು ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಪ್ರಚಾರ ಕಾರ್ಯದಲ್ಲಿ ತೊಡಗುವರು, ಜೊತೆಗೆ ಹಲವು ಮಠಾಧೀಶರನ್ನು ಭೇಟಿ ಮಾಡುವರು. ಈ ಮೂಲಕ ಎರಡೂ ಕ್ಷೇತ್ರದಲ್ಲಿ ಶತಾಯಗತಾಯ ಗೆಲ್ಲಲೇಬೇಕು ಎಂಬ ಛಲದಿಂದ ರಾಜಕೀಯ ತಂತ್ರಗಾರಿಕೆ ರೂಪಿಸುತ್ತಿದ್ದಾರೆ.

ಮೈಸೂರು ಮಿತ್ರ ಮಂಗಳವಾರ 2 ಏಪ್ರಿಲ್ 2024

ಮೂಲಸೌಕರ್ಯ ವಂಚಿತ ತಟ್ಟಳ್ಳಿ ಹಾಡಿ

● ವಿದ್ಯುತ್, ಕುಡಿಯುವ ನೀರು ಇಲ್ಲದ ನಿವಾಸಿಗಳಿಗೆ ಮರೀಚಿಕೆ ● ಪ್ಲಾಸ್ಟಿಕ್ ಗುಡಿಸಲೇ ಇವರ ವಾಸ ಸ್ಥಾನ

● ಮಳೆ ಬಂದಾಗ ಪ್ಲಾಸ್ಟಿಕ್ ಟಾರ್ಪಲ್ ಕೊಡುವ ಸರ್ಕಾರಕ್ಕೆ ಸೂರು ನಿರ್ಮಿಸಿಕೊಡುವ ಮನಸ್ಸಿಲ್ಲ

● ಕಾಡುಪ್ರಾಣಿಗಳ ಭಯದಿಂದ ರಾತ್ರಿಯಿಡೀ ಗುಡಿಸಲಲ್ಲೇ ಬಂಧಿಯಾಗುವ ಹಾಡಿ ನಿವಾಸಿಗಳು



ಹೋರಾಟ, ಪ್ರತಿಭಟನೆ ನಂತರ ಯೋಜನೆ

ಐಟಿಡಿಪಿ ಇಲಾಖೆಯಿಂದ 40 ಮನೆಗಳು ಮಂಜೂರಾಗಿ ಎರಡು ವರ್ಷ ಕಳೆದರೂ ಇಂದಿಗೂ ಕಾಮಗಾರಿ ಪೂರ್ಣಗೊಂಡಿಲ್ಲ. ಬಹುತೇಕ ಕುಟುಂಬಗಳು ಅಡಿಪಾಯ ಗೋಡೆ ಕಟ್ಟಿ ಹಾಗೆ ಬಿಟ್ಟಿದ್ದಾರೆ. ಮನೆ ಕಟ್ಟಲು ನೀರಿನ ಸಮಸ್ಯೆ ಹಾಗೂ ಅನುದಾನ ಬರುತ್ತಿಲ್ಲ ಎಂಬ ಆರೋಪಗಳು ಕೇಳಿ ಬರುತ್ತಿವೆ. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಮೂಲಕ 10 ಮನೆಗಳು ಮಂಜೂರಾಗಿದ್ದು ಬಹುತೇಕ ಮನೆಗಳ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿವೆ. ಸುಮಾರು 60 ಕುಟುಂಬಗಳು ಕೃಷಿಗಾಗಿ ಗಂಗಾ ಕಲ್ಯಾಣ ಯೋಜನೆಯಡಿ ಅರ್ಜಿ ಸಲ್ಲಿಸಿ 4 ವರ್ಷ ಕಳೆದರೂ ಇಂದಿಗೂ ಯೋಜನೆ ತಲುಪಿಲ್ಲ. ಹಲವು ಹೋರಾಟ, ಪ್ರತಿಭಟನೆಗಳ ನಂತರ ಇದೀಗ ಯೋಜನೆ ಬರಲಾರಂಭಿಸಿದೆ.

ಎಸ್.ಎಂ. ಮುಬಾರಕ್

ಸಿದ್ದಾಪುರ, ಏ.1–ಕಾಡುಪ್ರಾಣಿಗಳ ಭಯದ ನಡುವೆ ಮೂಲಸೌಕರ್ಯ ವಂಚಿತರಾಗಿ ಬದುಕು ಸಾಗಿಸುತ್ತಿರುವ ತಟ್ಟಳ್ಳಿ ಹಾಡಿಯ ನಿವಾಸಿಗಳು ವಿದ್ಯುತ್ ಬೆಳಕು ಕಾಣದೆ ಕತ್ತಲ ಜೀವನ ನಡೆಸುವಂತಾಗಿದೆ.

ಹೌದು. ವಿರಾಜಪೇಟೆ ತಾಲೂಕಿನ ಮಾಲ್ದಾರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ತಟ್ಟಳ್ಳಿ ಹಾಡಿಯಲ್ಲಿ ಜೇನು ಕುರುಬ ಸಮುದಾಯದ 72 ಕುಟುಂಬಗಳ ನೂರಕ್ಕೂ ಹೆಚ್ಚು ಮಂದಿ ಪ್ಲಾಸ್ಟಿಕ್ ಗುಡಿಸಲು ಮನೆಗಳಲ್ಲಿ ಮೂಲಸೌಕರ್ಯ ವಂಚಿತರಾಗಿ ಜೀವನ ನಡೆಸುತ್ತಿದ್ದಾರೆ.

ಈ ಹಾಡಿಯ ಸುತ್ತಮುತ್ತ ಗ್ರಾಮಗಳು ಅಭಿವೃದ್ಧಿ ಹೊಂದಿದ್ದರೆ, ತಟ್ಟಳ್ಳಿ ಹಾಡಿ ಮಾತ್ರ ಅಭಿವೃದ್ಧಿಯಿಂದ ದೂರ ಉಳಿದಿದೆ. 2006ರ ಅರಣ್ಯ ಮಸೂದೆ ಕಾಯ್ದೆ ಜಾರಿ ನಂತರ ಇಲ್ಲಿನ ನಿವಾಸಿಗಳಿಗೆ ಹಕ್ಕುಪತ್ರ ನೀಡಿ, ಕೃಷಿ ಬಳಕೆಗೆ ಅಲ್ಪಸ್ವಲ್ಪ ಜಾಗವೂ ನೀಡಲಾಗಿದೆ. ಕೃಷಿ ಜಾಗದಲ್ಲಿ ನೀರಿನ ವ್ಯವಸ್ಥೆ ಇಲ್ಲದ ಕಾರಣ ಭೂಮಿಯಲ್ಲಿ ನೆಟ್ಟ ಗಿಡಗಳು ಒಣಗಿವೆ.

ಇಲ್ಲಿನ ಬಹುತೇಕ ಕುಟುಂಬಗಳು ಮನೆ ನಿರ್ಮಿಸಿಕೊಳ್ಳಲು ಸಾಧ್ಯವಾಗದೇ ಪ್ಲಾಸ್ಟಿಕ್ ಗುಡಿಸಲುಗಳಲ್ಲಿ ವಾಸವಾಗಿವೆ. ಪ್ರತಿವರ್ಷ ಮಳೆಗಾಲ ಸಂದರ್ಭದಲ್ಲಿ ಪಂಚಾಯಿತಿ ಹಾಗೂ ಇಲಾಖೆಯಿಂದ ಪ್ಲಾಸ್ಟಿಕ್ ಟಾರ್ಪಲ್‌ಗಳನ್ನು ಈ ಕುಟುಂಬಗಳಿಗೆ ನೀಡಲಾಗುತ್ತದೆಯೇ ಹೊರತು, ಇವರಿಗೆ ಮನೆ ನಿರ್ಮಿಸಿಕೊಡುವತ್ತ ಈವರೆಗೂ ಯಾವುದೇ ಸರ್ಕಾರ ಗಮನ ಹರಿಸಿಲ್ಲ. ಹೀಗಾಗಿ ಇಲ್ಲಿನ ನಿವಾಸಿಗಳು ಗುಡಿಸಲುಗಳಿಗೆ ಪ್ಲಾಸ್ಟಿಕ್ ಟಾರ್ಪಲ್‌ಗಳನ್ನು ಕಟ್ಟಿ ಜೀವನ ನಡೆಸುತ್ತಿದ್ದಾರೆ.

ಕೆಲ ವರ್ಷಗಳ ಹಿಂದೆ ಗ್ರಾಮೀಣ ಭಾಗದ ಜನರಿಗೂ ವಿದ್ಯುತ್ ಸಂಪರ್ಕ ಕಲ್ಪಿಸುವ ಯೋಜನೆಗಳನ್ನು ರೂಪಿಸಿ ಇತ್ತೀಚೆಗಷ್ಟೇ ಕೆಲವು ಹಾಡಿಗಳಲ್ಲಿ ವಿದ್ಯುತ್ ಬೆಳಕು ಕಾಣಲು ಸಾಧ್ಯವಾಗಿದೆ. ಆದರೆ, ತಟ್ಟಳ್ಳಿ ಹಾಡಿಗೆ ಮಾತ್ರ ವಿದ್ಯುತ್ ವ್ಯವಸ್ಥೆ ಇಲ್ಲದೆ ಕತ್ತಲ ಜೀವನ ನಡೆಸುವಂತಾಗಿದೆ. ಹಾಡಿಯ ಸಮೀಪದಲ್ಲೇ ವಿದ್ಯುತ್ ಲೈನ್ ಹಾದು ಹೋಗಿದ್ದರೂ ಈ ಹಾಡಿಯ ಜನರಿಗೆ ಮಾತ್ರ ಬೆಳಕಿನ ಭಾಗ್ಯ ಸಿಕ್ಕಿಲ್ಲ. ಬೆಳಕಿನ ವ್ಯವಸ್ಥೆ ಇಲ್ಲದೆ ಶಾಲಾ ವಿದ್ಯಾರ್ಥಿಗಳು, ಹಾಡಿ ನಿವಾಸಿಗಳು ರಾತ್ರಿ 7 ಗಂಟೆಯಿಂದ ಬೆಳಗ್ಗೆ 6ರವರೆಗೆ ಮನೆಗಳಲ್ಲೇ ಕಾಲ ಕಳೆಯಬೇಕಾಗಿದೆ.

ಹಾಡಿಯ ಸುಮಾರು 25ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹೆಚ್ಚಿನ ಶಿಕ್ಷಣಕ್ಕಾಗಿ ಮಾಲ್ದಾರೆ ಶಾಲೆಗೆ 10 ಕಿ.ಮೀ. ಹೋಗಿ ಬರುತ್ತಿದ್ದಾರೆ. ಈ ಹಾಡಿಯ ಮಾರ್ಗದಲ್ಲಿ ಯಾವುದೇ ಬಸ್ ವ್ಯವಸ್ಥೆಯೂ ಇಲ್ಲದೆ ಕೆಲವೊಮ್ಮೆ ಬಾಡಿಗೆ ವಾಹನ ಅವಲಂಬಿತರಾಗುತ್ತಾರೆ. ಕಾಡುಪ್ರಾಣಿಗಳ ಭಯದ ನಡುವೆ ವಿದ್ಯಾರ್ಥಿಗಳು ಶಾಲೆಗೆ ಹೋಗುತ್ತಿದ್ದಾರೆ.

ಕಲ್ಲಳ್ಳ ಮಾರ್ಗವಾಗಿ ಆಶ್ರಮ ಶಾಲೆಗೆ ಸಂಪರ್ಕಿಸುವ ರಸ್ತೆ ಬಹುತೇಕ ಕಡೆಗಳಲ್ಲಿ ಸಂಪೂರ್ಣ ಹದಗೆಟ್ಟಿದೆ. ಗುಂಡಿ ಬಿದ್ದ ರಸ್ತೆಯಲ್ಲಿ ನಿತ್ಯ ಶಾಲಾ ವಿದ್ಯಾರ್ಥಿಗಳು, ಹಾಡಿ ನಿವಾಸಿಗಳು ಸಂಚರಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಹಾಡಿಯ ರಸ್ತೆಗಳು ಅಭಿವೃದ್ಧಿ ಕಂಡಿಲ್ಲ. ಇತ್ತೀಚೆಗಷ್ಟೇ ಮುಖ್ಯ ರಸ್ತೆಯಿಂದ ಕೆಲವು ಮೀಟರ್‌ಗಳಷ್ಟು ಕಾಂಕ್ರೀಟ್ ರಸ್ತೆ ಮಾಡಲಾಗಿದೆ.

ಹಲವು ವರ್ಷಗಳಿಂದ ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿದ್ದ ಹಾಡಿಯ ನಿವಾಸಿಗಳಿಗೆ ಪಂಚಾಯಿತಿಯಿಂದ ನೀರಿನ ವ್ಯವಸ್ಥೆ ಮಾಡಲಾಗಿದ್ದರೂ ಕರೆಂಟ್ ಕೈಕೊಟ್ಟಾಗ ಮತ್ತೆ ನೀರಿನ ಸಮಸ್ಯೆಯಿಂದ ನರಳಿದ್ದಾರೆ. ಇಲ್ಲಿ ಅರ್ಧ ಕಿ.ಮೀ. ನಡೆದು ನೀರು ತರಬೇಕಾಗಿದೆ. ಹಾಡಿಗೆ ಕರೆಂಟ್ ವ್ಯವಸ್ಥೆಯಾದಲ್ಲಿ ಜಲಜೀವನ್ ಮಿಷನ್ ಮೂಲಕ ಪ್ರತಿ ಮನೆಗೆ ನೀರು ಸರಬರಾಜು ಮಾಡಬಹುದು. ಆದಿವಾಸಿಗಳ ಅಭಿವೃದ್ಧಿಗೆಂದೇ ಇರುವ ಐಟಿಡಿಪಿ ಇಲಾಖೆ ಹಾಡಿಯ ಅಭಿವೃದ್ಧಿಗೆ ಮುಂದಾಗುತ್ತಿಲ್ಲ ಎಂದು ಹಾಡಿ ನಿವಾಸಿ ಶೋಭಾ ಆರೋಪಿಸಿದರು.

> ವಿದ್ಯುತ್ ಹಾಗೂ ನೀರಿನ ವ್ಯವಸ್ಥೆ ಇಲ್ಲದ ಕಾರಣ ಮನೆಯ ಸಮೀಪ ಇರುವ ಜಾಗದಲ್ಲಿ ಏನೂ ಬೆಳೆಯಲು ಸಾಧ್ಯವಾಗದೆ ನೆಟ್ಟ ಗಿಡಗಳು ಒಣಗಿ ನಿಂತಿವೆ. ಅಧಿಕಾರಿಗಳ ನಿರ್ಲಕ್ಷ್ಯವೇ ಸಮಸ್ಯೆಗೆ ಕಾರಣ. ಜಿಲ್ಲಾಧಿಕಾರಿಗಳು ಕೂಡಲೇ ಹಾಡಿಗೆ ಬಂದು ಸಮಸ್ಯೆ ಬಗೆಹರಿಸಬೇಕು.
> –ಜೆ.ಕೆ.ಅಪ್ಪಾಜಿ, ಆದಿವಾಸಿ ಮುಖಂಡ, ತಟ್ಟಳ್ಳಿ ಹಾಡಿ

> ಅರಣ್ಯ ಪ್ರದೇಶವಾಗಿರುವುದರಿಂದ ಗಂಗಾ ಕಲ್ಯಾಣ ಯೋಜನೆಗೆ ವಿದ್ಯುತ್ ಸಂಪರ್ಕದ ಅಡೆತಡೆ ಎದುರಾಗಿತ್ತು. ಇದೀಗ ಸಮಸ್ಯೆ ಬಗೆಹರಿದಿದೆ. ಚುನಾವಣಾ ಹಿನ್ನೆಲೆ ನೀತಿ ಸಂಹಿತೆ ಜಾರಿಯಲ್ಲಿ ಇರುವುದರಿಂದ ಯೋಜನೆ ಅನುಷ್ಠಾನಗೊಳಿಸಲು ಸಾಧ್ಯವಿಲ್ಲ. ಮುಂದಿನ ದಿನಗಳಲ್ಲಿ ಸಮಸ್ಯೆ ಬಗೆಹರಿಯಲಿದೆ.
> –ಚಂದ್ರಪ್ಪ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ



ಕೊಡವ ಲ್ಯಾಂಡ್‌ಗಾಗಿ ಆಯೋಗ ರಚನೆಯ ಪ್ರಸ್ತಾಪ

ಜೂ.5ಕ್ಕೆ ವಿಚಾರಣೆ ಮುಂದೂಡಿಕೆ



ಖ್ಯಾತ ಅರ್ಥಶಾಸ್ತ್ರಜ್ಞರೂ ಹಾಗೂ ಕೇಂದ್ರದ ಮಾಜಿ ಸಚಿವರಾದ ಡಾ.ಸುಬ್ರಮಣಿಯನ್‌ಸ್ವಾಮಿ ಅವರೊಂದಿಗೆ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ, ಜಗದೀಶ್ ಶೆಟ್ಟಿ, ನಿಖುಂಜ್ ಶಾ, ಬಿ.ಎಂ.ಪಾರ್ವತಿ, ಶ್ರೇಯಾ ನಾಚಪ್ಪ ಇದ್ದರು.

ಮಡಿಕೇರಿ, ಏ.1–ಕೊಡವ ಲ್ಯಾಂಡ್ ಭೂ ರಾಜಕೀಯ ಸ್ವಾಯತ್ತತೆ ಕುರಿತು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯ ಬೇಡಿಕೆಗೆ ಪೂರಕವಾಗಿ ಆಯೋಗ ರಚಿಸಬೇಕು ಎಂದು ಖ್ಯಾತ ಅರ್ಥಶಾಸ್ತ್ರಜ್ಞರೂ ಆದ ಕೇಂದ್ರದ ಮಾಜಿ ಸಚಿವ ಡಾ. ಸುಬ್ರಮಣಿಯನ್‌ಸ್ವಾಮಿ ಅವರು ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ಜೂ.5ಕ್ಕೆ ಮುಂದೂಡಿದೆ.

ಹೈಕೋರ್ಟ್ ಸಿಎನ್‌ಸಿ ಬೇಡಿಕೆ ಕುರಿತು ಅಫಿಡವಿಟ್ ಸಲ್ಲಿಸುವಂತೆ ಡಾ.ಸುಬ್ರಮಣಿಯನ್‌ಸ್ವಾಮಿ ಅವರಿಗೆ ಸೋಮವಾರ ಸೂಚಿಸಿತು. ಅಲ್ಲದೆ, ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶ ನೀಡಿದೆ.


ವಕೀಲರಾದ ಸತ್ಯ ಸಬರ್ವಾಲ್ ಹಾಗೂ ಎಂ.ಎಸ್.ನಾರಾಯಣ ಕಿರಣ್ ಸಿಎನ್‌ಸಿ ಪರ ವಾದ ಮಂಡಿಸಿದರು. ಕೊಡವರಿಗೆ ನೀಡಿದ ಭರವಸೆಗಳನ್ನು ಸರ್ಕಾರ ಈಡೇರಿಸುತ್ತಿಲ್ಲ ಮತ್ತು ಅಸಡ್ಡೆ ತೋರುತ್ತಿದೆ ಎಂದು ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ನಿಲಯ್ ಬಿಪಿನ್ ಚಂದ್ರ ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕ್ರಿಶಾ ದೀಕ್ಷಿತ್ ಅವರ ಮುಂದೆ ವಕೀಲರು ಪ್ರತಿಪಾದಿಸಿದರು.

ಇದೇ ವೇಳೆ ಕೇಂದ್ರದ ಗೃಹ ಇಲಾಖೆ, ಕಾನೂನು ಇಲಾಖೆ ಮತ್ತು ರಾಜ್ಯ ಸರ್ಕಾರವನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ. ಅರ್ಜಿದಾರರಾದ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ, ವಿಹೆಚ್‌ಎಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಜಗದೀಶ್ ಶೆಟ್ಟಿ, ರಾಜ್ಯಾಧ್ಯಕ್ಷ ನಿಖುಂಜ್ ಶಾ, ಲೆಫ್ಟಿನೆಂಟ್ ಕರ್ನಲ್ ಬಿ.ಎಂ.ಪಾರ್ವತಿ, ಶ್ರೇಯಾ ನಾಚಪ್ಪ, ಸಿಎನ್‌ಸಿಯ ಪ್ರಮುಖರಾದ ಚಂಬಂಡ ಜನತ್, ಮಂದಪಂಡ ಮನೋಜ್, ಕಿರಿಯಮಾಡ ಶರಿನ್, ವಿಎಚ್‌ಎಸ್ ಸದಸ್ಯರಾದ ನಟರಾಜ್ ಹಾಗೂ ರವಿಶಂಕರ್ ಉಪಸ್ಥಿತರಿದ್ದರು.

ಇಂದಿನಿಂದ ವಿರಾಜಪೇಟೆಯಲ್ಲಿ ಮಹಾಕುಂಭಾಭಿಷೇಕ

ವಿರಾಜಪೇಟೆ: ಲೋಕ ಕಲ್ಯಾಣಕ್ಕಾಗಿ ನಗರದ ತೆಲುಗರ ಬೀದಿಯ ಶ್ರೀ ಮಾರಿಯಮ್ಮ ಮತ್ತು ಅಂಗಾಳ ಪರಮೇಶ್ವರಿ ದೇವಸ್ಥಾನದಲ್ಲಿ ಏ.2 ರಿಂದ 4ರವರೆಗೆ 'ಮಹಾಕುಂಭಾಭಿಷೇಕ' ಪೂಜಾ ಕಾರ್ಯ ನಡೆಯಲಿದೆ ಎಂದು ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಟಿ.ಪಿ.ಕೃಷ್ಣ ತಿಳಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇದು 500ಕ್ಕೂ ಹೆಚ್ಚು ಇತಿಹಾಸವಿರುವ ಐತಿಹಾಸಿಕ ದೇವಾಲಯ ಏ.4 ರಂದು ಬೆಳಗ್ಗೆ 10.30ಕ್ಕೆ ಶ್ರವಣ ನಕ್ಷತ್ರ ಮಿಥುನ ಲಗ್ನದಲ್ಲಿ ಗೋಪುರ ಕಲಶ ಕುಂಭಾಭಿಷೇಕ, ಗಣಪತಿ, ಸುಬ್ರಹ್ಮಣ್ಯ, ಕರುಪ್ಪಸ್ವಾಮಿ, ಅಂಗಾಳ ಪರಮೇಶ್ವರಿ ದೇವಿಗೆ ಕುಂಭಾಭಿಷೇಕ ಬಳಿಕ ಗೋಪೂಜೆ ನಡೆಯಲಿದೆ. ಪೂಜಾ ಕಾರ್ಯಗಳನ್ನು ತಮಿಳುನಾಡಿನ 17 ಪುರೋಹಿತ ತಂತ್ರಿಗಳು ನಡೆಸಲಿದ್ದಾರೆ ಎಂದರು.



ತಲಕಾವೇರಿಯಿಂದ ತೀರ್ಥ ತಂದು ಕುಂಭಾಭಿಷೇಕ ಮಾಡಿ ನಂತರ ವಿವಿಧ ಪೂಜೆ ನಡೆಸಲಾಗುವುದು. ಈ ಬಾರಿ ಉತ್ತಮ ಮಳೆ ಬೆಳೆಯಾಗಿ ದೇಶ ಸುಭೀಕ್ಷೆಯಾಗಲು ವರುಣ ಪೂಜೆ ನಡೆಸಲಾಗುವುದು. ಮೂರು ದಿನ ಅನ್ನಸಂತರ್ಪಣೆ ನಡೆಯಲಿದೆ ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ದೇವಸ್ಥಾನ ಟ್ರಸ್ಟ್ ಉಪಾಧ್ಯಕ್ಷ ಟಿ.ಜಿ.ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಟಿ.ಎನ್.ರಂಜನ್, ಟಿ.ಪಿ.ವೇಣು ಗೋಪಾಲ್, ಟಿ.ಪಿ.ಗುರುನಾಥ್, ಟಿ.ಆರ್.ಜನಾರ್ಧನ್, ಟಿ.ಡಿ.ಹರೀಶ್, ಟಿ.ಸಿ.ನಿಶಾಂಕ್ ಉಪಸ್ಥಿತರಿದ್ದರು.

ಅನಿಲ್ ನಿಧನ



ಕುಶಾಲನಗರ, ಏ.1–ಪಟ್ಟಣದ ರಾಧಾ ಕೃಷ್ಣ ಬಡಾವಣೆಯ ದಿವಂಗತ ಸೀತಾರಾಂ ಅವರ ಪುತ್ರ ನಡುವಟ್ಟಿರ ಅನಿಲ್ (44) ಭಾನುವಾರ ಮುಂಜಾನೆ ಹೃದಯಾಘಾತದಿಂದ ನಿಧನರಾದರು.

ಮೃತರು ಬೆಂಗಳೂರಿನ ಸಾಫ್ಟ್‌ವೇರ್ ಕಂಪನಿಯೊಂದರ ಉದ್ಯೋಗಿಯಾಗಿದ್ದರು. ಮೃತರು ತಾಯಿ ಜಾನಮ್ಮ, ಪತ್ನಿ, ಪುತ್ರಿಯನ್ನು ಅಗಲಿದ್ದಾರೆ. ಕುಶಾಲನಗರದ ಮಾರುಕಟ್ಟೆ ರಸ್ತೆಯ ಅರೆಭಾಷಿಗರ ರುದ್ರಭೂಮಿಯಲ್ಲಿ ಸೋಮವಾರ ಮಧ್ಯಾಹ್ನ ಅಂತ್ಯಕ್ರಿಯೆ ನೆರವೇರಿತು.

ಬೈಕ್ ನಿಯಂತ್ರಣ ತಪ್ಪಿ ಯುವಕ ಸಾವು

ವಿರಾಜಪೇಟೆ: ನಿಯಂತ್ರಣ ತಪ್ಪಿ ಬೈಕ್ ರಸ್ತೆಬದಿಯ ಸೂಚನಾ ಫಲಕಕ್ಕೆ ಡಿಕ್ಕಿ ಹೊಡೆದ ಪರಿಣಾಮ ಯುವಕ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಗೋಣಿಕೊಪ್ಪ–ವಿರಾಜಪೇಟೆ ಮುಖ್ಯರಸ್ತೆಯ ಅಂಬಟ್ಟಿ ತಿರುವಿನಲ್ಲಿ ಭಾನುವಾರ ರಾತ್ರಿ ನಡೆದಿದೆ.

ಪೊನ್ನಂಪೇಟೆ ತಾಲೂಕಿನ ಕೋತುರು ಗ್ರಾಮದ ನಿವಾಸಿ ಸತೀಶ್ ಅವರ ಪುತ್ರ ಕೆ.ಎಸ್.ಶ್ರವಣ್ (18) ಮೃತ ಯುವಕ. ಶ್ರವಣ್ ಬಿಟ್ಟಂಗಾಲ ಗ್ರಾಮದ ತನ್ನ ಸ್ನೇಹಿತನ ಹುಟ್ಟುಹಬ್ಬ ಆಚರಣೆ ಮುಗಿಸಿಕೊಂಡು ಬೈಕ್‌ನಲ್ಲಿ ಸ್ವಗ್ರಾಮಕ್ಕೆ ಹೋಗುತ್ತಿದ್ದ. ಈ ವೇಳೆ ನಿಯಂತ್ರಣ ತಪ್ಪಿ ಬೈಕ್ ಅಂಬಟ್ಟಿ ತಿರುವಿನ ಸೂಚನಾ ಫಲಕಕ್ಕೆ ಡಿಕ್ಕಿ ಹೊಡೆದಿದೆ. ಪರಿಣಾಮ ಈತನ ತಲೆಗೆ ಬಲವಾದ ಪೆಟ್ಟಾಗಿದ್ದು ಸ್ಥಳದಲ್ಲೇ ಮೃತಪಟ್ಟಿದ್ದಾನೆ.

ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾಂಗ್ರೆಸ್ ವಿರುದ್ಧ ಡಿಸಿಗೆ ಬಿಜೆಪಿ ದೂರು



ಕಾಂಗ್ರೆಸ್ ನಾಯಕರ ವಿರುದ್ಧ ಕ್ರಮ ಕೈಗೊಳ್ಳುವಂತೆ ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್ ಜಿಲ್ಲಾ ಚುನಾವಣಾಧಿಕಾರಿ ಶಿಲ್ಪನಾಗ್ ಅವರಿಗೆ ದೂರು ಸಲ್ಲಿಸಿದರು.

ಚಾಮರಾಜನಗರ, ಏ.1–ಇತ್ತೀಚಿಗೆ ಕೊಳ್ಳೇಗಾಲದಲ್ಲಿ ನಡೆದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ತಮ್ಮ ಮೇಲೆ ಭ್ರಷ್ಟಾಚಾರ ಆರೋಪ ಹೊರಿಸಿರುವ ಕಾಂಗ್ರೆಸ್ ನಾಯಕರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್ ಜಿಲ್ಲಾ ಚುನಾವಣಾಧಿಕಾರಿ ಶಿಲ್ಪನಾಗ್ ಅವರಿಗೆ ದೂರು ಸಲ್ಲಿಸಿದರು.

ಸಚಿವರಾದ ಕೆ.ವೆಂಕಟೇಶ್, ಎಚ್.ಸಿ.ಮಹದೇವಪ್ಪ, ಕೊಳ್ಳೇಗಾಲ ಮಾಜಿ ಶಾಸಕ ಜಿ.ಎನ್.ನಂಜುಂಡಸ್ವಾಮಿ ವಿರುದ್ಧ ಕ್ರಮ ಜರುಗಿಸುವಂತೆ ಆಗ್ರಹಿಸಿ ದೂರು ನೀಡಿದ್ದಾರೆ.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಎನ್.ಮಹೇಶ್, ಮಾ.28ರಂದು ಕೊಳ್ಳೇಗಾಲದಲ್ಲಿ ನಡೆದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಮಾಜಿ ಶಾಸಕ ಜಿ.ಎನ್.ನಂಜುಂಡಸ್ವಾಮಿ, ಬಿಜೆಪಿ ಅಭ್ಯರ್ಥಿ ಬಾಲರಾಜು ಬಗ್ಗೆ ಕೆಟ್ಟದಾಗಿ ಮಾತನಾಡಿದ್ದಾರೆ. ಅವರಿಗೆ ನಾಯಕತ್ವ ಗುಣ ಇಲ್ಲ. ಅವರೊಬ್ಬ ಲೀಡರೇ ಅಲ್ಲ. ನನ್ನ ಬಗ್ಗೆಯೂ ಮಾತನಾಡಿ, ಇಲ್ಲೊಬ್ಬ ಸಮಾಜಘಾತುಕ ಎನ್.ಮಹೇಶ್ ಇದ್ದಾರೆ. ಎನ್.ಮಹೇಶ್ ಶಿಕ್ಷಣ ಸಚಿವರಾಗಿದ್ದ ವೇಳೆ ವಿದ್ಯಾರ್ಥಿಗಳ ಶೂ, ಸಾಕ್ಸ್ ವಿತರಣೆಯಲ್ಲಿ 30 ಕೋಟಿ ರೂ. ಲೂಟಿ ಹೊಡೆದಿದ್ದಾರೆ. ಈಗ ಬಾಲರಾಜು ಅವರನ್ನು ಹಾಳು ಮಾಡಲು ಬಂದಿದ್ದೀಯಾ ಎಂದು ಏಕವಚನದಲ್ಲಿ ಮಾತನಾಡಿದ್ದಾರೆ ಎಂದರು.

ಸಚಿವರಾದ ಕೆ.ವೆಂಕಟೇಶ್, ಮಹದೇವಪ್ಪ ಅವರು ನನ್ನ ಮೇಲೆ ಭ್ರಷ್ಟಾಚಾರ ಆರೋಪ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಇವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಚುನಾವಣಾಧಿಕಾರಿಗೆ ದೂರು ನೀಡಲಾಗಿದೆ ಎಂದರು. ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಪಿ.ವೃಷಭೇಂದ್ರಪ್ಪ, ಮೂಡ್ನಾಕೂಡು ಪ್ರಕಾಶ್, ಕೊಳ್ಳೇಗಾಲ ನಗರಸಭಾ ಸದಸ್ಯ ರಾಮಕೃಷ್ಣ, ಜಗದೀಶ್ ಶಂಕನಪುರ ಹಾಜರಿದ್ದರು.

ಮೂರನೇ ದಿನ ನಾಲ್ಕು ನಾಮಪತ್ರ ಸಲ್ಲಿಕೆ

ಚಾಮರಾಜನಗರ, ಏ.1– ಲೋಕಸಭಾ ಚುನಾವಣೆಗೆ ನಾಮಪತ್ರ ಸಲ್ಲಿಕೆಯ ಮೂರನೇ ದಿನವಾದ ಸೋಮವಾರ ಚಾಮರಾಜನಗರ ಮೀಸಲು ಕ್ಷೇತ್ರದಿಂದ 4 ನಾಮಪತ್ರಗಳು ಸಲ್ಲಿಕೆಯಾದವು.

ಪಕ್ಷೇತರ ಅಭ್ಯರ್ಥಿಗಳಾಗಿ ಗುರುಲಿಂಗಯ್ಯ, ಕೆ.ರಾಜು, ಎಂ.ನಾಗೇಂದ್ರ ಬಾಬು ಹಾಗೂ ಎನ್.ಅಂಬರೀಷ್ ಅವರು ತಲಾ ಒಂದು ನಾಮಪತ್ರ ಸಲ್ಲಿಸಿದ್ದಾರೆ. ಒಟ್ಟಾರೆ ಇದುವರೆಗೆ ಎಂಟು ಅಭ್ಯರ್ಥಿಗಳಿಂದ ಒಂಭತ್ತು ನಾಮಪತ್ರಗಳು ಸಲ್ಲಿಕೆಯಾಗಿವೆ. ನಾಮಪತ್ರದೊಂದಿಗೆ ಸಲ್ಲಿಸಿರುವ ಅಫಿಡವಿಟ್ ಪ್ರತಿಯನ್ನು ಚುನಾವಣಾ ಆಯೋಗದ ವೆಬ್‌ಸೈಟ್ https://affidavit.eci.gov.in ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಶಿಲ್ಪನಾಗ್ ತಿಳಿಸಿದ್ದಾರೆ. ನಾಮಪತ್ರ ಸ್ವೀಕಾರ ವೇಳೆ ಜಿಲ್ಲಾ ಸಹಾಯಕ ಚುನಾವಣಾಧಿಕಾರಿ ಗೀತಾ ಹುಡೇದ ಉಪಸ್ಥಿತರಿದ್ದರು.

ಜಿಲ್ಲೆಯ ವಿವಿಧೆಡೆ ಸಿದ್ಧಗಂಗಾ ಶ್ರೀಗಳ ಜಯಂತಿ

● ಶ್ರೀ ಶಿವಕುಮಾರಸ್ವಾಮೀಜಿ ಭಾವಚಿತ್ರಕ್ಕೆ ವಿಶೇಷ ಪೂಜೆ ● ಅನ್ನದಾಸೋಹ, ಸಿಹಿ ವಿತರಣೆ



ಚಾಮರಾಜನಗರದಲ್ಲಿ ಡಾ. ಶ್ರೀ ಶಿವಕುಮಾರಸ್ವಾಮೀಜಿ ಜಯಂತಿ ಆಚರಿಸಲಾಯಿತು.

ಚಾಮರಾಜನಗರ, ಏ.1–ಜಿಲ್ಲೆಯ ವಿವಿಧೆಡೆ ಸೋಮವಾರ ಕಾಯಕ ಯೋಗಿ ಸಿದ್ಧಗಂಗಾ ಮಠದ ಡಾ.ಶ್ರೀ ಶಿವಕುಮಾರ ಸ್ವಾಮೀಜಿ ಅವರ 117ನೇ ಜಯಂತಿಯನ್ನು ಆಚರಿಸಲಾಯಿತು.

ಹನೂರು, ಯಳಂದೂರು, ಕೊಳ್ಳೇಗಾಲ, ಗುಂಡ್ಲುಪೇಟೆ ಹಾಗೂ ಚಾಮರಾಜನಗರ ಸೇರಿದಂತೆ ವಿವಿಧೆಡೆ ಪ್ರಮುಖ ರಸ್ತೆ, ವೃತ್ತ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ವಿವಿಧ ಸಂಘ–ಸಂಸ್ಥೆಗಳಿಂದ ಶ್ರೀಗಳ ಭಾವಚಿತ್ರಕ್ಕೆ ಪುಷ್ಪ ನಮನ, ಶಿವಕುಮಾರ ಸ್ವಾಮೀಜಿಯ ಗುಣಗಾನ, ಗ್ರಾಮೀಣ ಪ್ರದೇಶದಲ್ಲಿ ಸ್ಮರಣೆ, ಸಮಾಜಕ್ಕೆ ಅರಿವನ್ನು ನೀಡುವ ಮೂಲಕ ದಾರಿ ದೀಪವಾಗಿದ್ದ ಶ್ರೀಗಳ ಜನ್ಮದಿವನ್ನು ಜಿಲ್ಲಾದ್ಯಂತ ಭಕ್ತರು ಭಕ್ತಿಯಿಂದ ಆಚರಿಸಿದರು. ಇದೇ ವೇಳೆ ಶಿವಕುಮಾರ ಸ್ವಾಮೀಜಿ ಅವರ ಭಾವಚಿತ್ರವಿಟ್ಟು ಗೌರವ ಸಮರ್ಪಿಸಲಾಯಿತು. ಅನ್ನದಾಸೋಹ, ಸಿಹಿ, ಮಜ್ಜಿಗೆ–ಪಾನಕ ವಿತರಿಸಿ ಸ್ವಾಮೀಜಿ ಸ್ಮರಣೆ ಮಾಡಲಾಯಿತು.

ಮಜ್ಜಿಗೆ–ಪಾನಕ ವಿತರಣೆ: ನಗರದ ಸಿದ್ದಮಲ್ಲೇಶ್ವರ ವಿರಕ್ತ ಮಠ, ಶ್ರೀ ಬಸವೇಶ್ವರ ಪತ್ತಿನ ಸಹಕಾರ ಸಂಘ, ಸಿದ್ಧಗಂಗಾ ಹೋಟೆಲ್ ಸೇರಿದಂತೆ ವಿವಿಧೆಡೆ ಡಾ.ಶಿವಕುಮಾರ ಸ್ವಾಮೀಜಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಸಾರ್ವಜನಿಕರಿಗೆ ಅನ್ನದಾಸೋಹ, ಸಿಹಿ, ಪಾನಕ, ಮಜ್ಜಿಗೆ ವಿತರಿಸಲಾಯಿತು.

ಉಚಿತ ನೀರು: ನಗರದ ಶ್ರೀ ಬಸವೇಶ್ವರ ಪತ್ತಿನ ಸಹಕಾರ ಸಂಘದಲ್ಲಿರುವ ಸಿದ್ಧಗಂಗಾ ಶುದ್ಧ ಕುಡಿಯುವ ನೀರಿನ ಘಟಕದಿಂದ ಗ್ರಾಹಕರಿಗೆ ಉಚಿತವಾಗಿ ನೀರು ವಿತರಿಸಲಾಯಿತು. ಸಂಘದ ಅಧ್ಯಕ್ಷ ಗೌರಿಶಂಕರ್ ಸ್ವಾಮೀಜಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಬಳಿಕ ಕ್ಯಾನ್‌ಗಳಿಗೆ ಉಚಿತವಾಗಿ ನೀರು ತುಂಬಿಸುವ ಕಾರ್ಯಕ್ಕೆ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ವೀರಶೈವ–ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಸಿದ್ದಮಲ್ಲಪ್ಪ, ಉಪಾಧ್ಯಕ್ಷ ಕುಮಾರಸ್ವಾಮಿ, ನಿರ್ದೇಶಕರಾದ ಡಾ.ಪರಮೇಶ್ವರಪ್ಪ, ಗುರುಸ್ವಾಮಿ, ಲಿಂಗರಾಜಮೂರ್ತಿ, ಎಚ್.ಎಂ.ಗುರುಸ್ವಾಮಿ, ವಿ.ನಂಜುಂಡಸ್ವಾಮಿ, ಬಿ.ನಾಗೇಂದ್ರ, ಎನ್. ದೊರೆಸ್ವಾಮಿ, ರಾಜಶೇಖರಮೂರ್ತಿ, ಪ್ರಮೀಳಾ ಉದಗಟ್ಟಿ, ನಾಗಮಣಿ, ಲಿಂಗರಾಜು, ಸಿಇಓ ನಂಜುಂಡಸ್ವಾಮಿ, ಮಹೇಂದ್ರ, ಆಕಾಶ್ ಇದ್ದರು.

ಅನ್ನಸಂತರ್ಪಣೆ: ನಗರದ ನ್ಯಾಯಾಲಯ ರಸ್ತೆಯಲ್ಲಿರುವ ಸಿದ್ಧಗಂಗಾ ಕ್ಯಾಂಟೀನ್‌ನಲ್ಲಿ ಶಿವಕುಮಾರ ಸ್ವಾಮೀಜಿ ಜಯಂತ್ಯುತ್ಸವ ಪ್ರಯುಕ್ತ ಅನ್ನಸಂತರ್ಪಣೆ ನೆರವೇರಿಸಲಾಯಿತು. ಕ್ಯಾಂಟೀನ್ ಮುಂಭಾಗ ಶ್ರೀಗಳ ಭಾವಚಿತ್ರವಿಟ್ಟು ಪೂಜೆ ಸಲ್ಲಿಸಲಾಯಿತು. ಸಾರ್ವಜನಿಕರಿಗೆ ಉಪ್ಪಿಟ್ಟು, ಕೇಸರಿ ಬಾತ್, ರೈಸ್ ಬಾತ್, ಮೊಸರು ಬಜ್ಜಿ ವಿತರಿಸಲಾಯಿತು.

ಎಪಿಎಂಸಿ ಮಾಜಿ ಅಧ್ಯಕ್ಷ ಮನೋಜ್ ಪಟೇಲ್ ಮಾತನಾಡಿ, ಸಿದ್ಧಗಂಗಾ ಶ್ರೀಗಳ ಹೆಸರಿನಲ್ಲಿ ಆರಂಭಿಸುವ ಎಲ್ಲಾ ಉದ್ಯಮಗಳು ಬಹಳ ಯಶಸ್ಸು ಕಂಡಿದೆ. ನಡೆದಾಡುವ ದೇವರು ಎಂದೇ ಖ್ಯಾತಿಯಾಗಿದ್ದ ಶ್ರೀಗಳು ಅನ್ನ ದಾಸೋಹ, ಜ್ಞಾನ ದಾಸೋಹದ ಮೂಲಕ ಲಕ್ಷಾಂತರ ವಿದ್ಯಾರ್ಥಿಗಳ ಜೀವನಕ್ಕೆ ದಾರಿ ದೀಪವಾಗಿದ್ದಾರೆ ಎಂದು ಸ್ಮರಿಸಿದರು.

ನಗರಸಭಾ ಸದಸ್ಯ ಮಂಜುನಾಥ್, ನಾಗೇಂದ್ರ, ಶಿವು, ಶೈಲೇಶ್, ಅರುಣಾ, ಮಹೇಶ್, ಚಂದನ್, ಹರೀಶ್, ಮಂಜುನಾಥ್, ಮಧು, ನಂದನ್ ಇದ್ದರು.

ಸಂತೇಮರಹಳ್ಳಿಯಲ್ಲಿ ಸ್ಮರಣೆ: ತಾಲೂಕಿನ ಸಂತೇಮರಹಳ್ಳಿಯ ಶಿವಕುಮಾರಸ್ವಾಮಿ ವೃತ್ತದಲ್ಲಿ ಶ್ರೀಗಳ ಜನ್ಮದಿನ ಆಚರಿಸಲಾಯಿತು. ಈ ವೇಳೆ ಸ್ವಾಮೀಜಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಸಾರ್ವಜನಿಕರಿಗೆ ಸಿಹಿ ವಿತರಿಸಲಾಯಿತು.

ಸಂತೇಮರಹಳ್ಳಿ ಮಾದಪ್ಪ ಮಾತನಾಡಿದರು. ದುಗ್ಗಹಟ್ಟಿ ವೀರಭದ್ರಪ್ಪ, ಕಾಳನಹುಂಡಿ ಗುರುಸ್ವಾಮಿ, ಅಂಬಳೆ ಪ್ರತಾಪ್, ಗೌಡ್ರು ಮಹದೇವಸ್ವಾಮಿ, ಛೇರ್ಮನ್ ಮಹೇಶ್, ಕೆಸ್ತೂರು ಲಿಂಗರಾಜು, ನಾಗರಾಜು, ವಜ್ರಣ್ಣ, ನಂಜದೇವನಪುರ ರಾಜಣ್ಣ, ರವಿ, ತೀರ್ಥಪ್ರಸಾದ್, ಶಂಕರಪ್ಪ ಇದ್ದರು.



ಗುಂಡ್ಲುಪೇಟೆ ತಾಲೂಕಿನ ಬೇಗೂರು ಗ್ರಾಮದ ಮುಖಂಡರು ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮೀಜಿ ಜನ್ಮದಿನೋತ್ಸವ ಆಚರಿಸಿದರು.

ಆಶ್ರಯ ಅನಾಥಾಶ್ರಮಕ್ಕೆ 10 ಸಾವಿರ ದೇಣಿಗೆ



ಉತ್ತುವಳ್ಳಿ ಸಮೀಪದ ಆಶ್ರಯ ಸೇವಾ ಚಾರಿಟಬಲ್ ಟ್ರಸ್ಟ್‌ನ ವೃದ್ಧ ಮತ್ತು ಅನಾಥಾಶ್ರಮಕ್ಕೆ ನಂಜನಗೂಡಿನ ಸುಧಾ ಶಿವಕುಮಾರ್ ದೇಣಿಗೆ ಚೆಕ್ ನೀಡಿದರು.

ಚಾಮರಾಜನಗರ, ಏ.1–ನಗರದ ಉತ್ತುವಳ್ಳಿ ಸಮೀಪದ ಆಶ್ರಯ ಸೇವಾ ಚಾರಿಟಬಲ್ ಟ್ರಸ್ಟ್‌ನ ವೃದ್ಧ ಮತ್ತು ಅನಾಥಾಶ್ರಮಕ್ಕೆ ಸಮಾಜ ಸೇವಕರಾದ ನಂಜನಗೂಡಿನ ಸುಧಾ ಶಿವಕುಮಾರ್ 10 ಸಾವಿರ ರೂ. ದೇಣಿಗೆ ನೀಡಿದರು.

ದೇಣಿಗೆ ಚೆಕ್ ವಿತರಿಸಿ ಮಾತನಾಡಿದ ಸುಧಾ ಶಿವಕುಮಾರ್, ವೃದ್ಧ ಮತ್ತು ಅನಾಥಾಶ್ರಮ ನಡೆಸುವುದು ಅಷ್ಟು ಸುಲಭವಲ್ಲ. ಈ ಕೆಲಸಕ್ಕೆ ತುಂಬಾ ತಾಳ್ಮೆ, ಸಮಾನ ಮನಸ್ಸು ಬೇಕು. ಎರಡು ವರ್ಷಗಳಿಂದ ಇಂತಹ ಪುಣ್ಯದ ಕೆಲಸ ಮಾಡುತ್ತಿರುವ ಆಶ್ರಯ ಸೇವಾ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ರಮೇಶ್ ಪ್ರಭು ಅವರ ಸೇವೆ ಶ್ಲಾಘನೀಯ ಎಂದರು.

ಇದೇ ಸಂದರ್ಭದಲ್ಲಿ ವೃದ್ಧರನ್ನು ಸಂಗೀತದ ಮೂಲಕ ಕಲಾವಿದರಾದ ಹರದನಹಳ್ಳಿ ನಟರಾಜು ರಂಜಿಸಿದರು. ಸಮಾಜ ಸೇವಕ ಸುರೇಶ್‌ಗೌಡ, ಚಲನಚಿತ್ರ ಹಿರಿಯ ನಟರಾದ ಘಟಂ ಕೃಷ್ಣ, ಬಿ.ಬೊಮ್ಮಾಯಿ, ಸಂಜೀವಿನಿ ಟ್ರಸ್ಟ್ ಕಾರ್ಯದರ್ಶಿ ಸತೀಶ್, ಆಶ್ರಯ ಸೇವಾ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ರಮೇಶ್ ಪ್ರಭು, ಮಾದೇಶ್, ಅನು, ಭವ್ಯ ಮತ್ತಿತರರಿದ್ದರು.

ಅರಣ್ಯಾಧಿಕಾರಿಗಳ ವಿರುದ್ಧ ಹಾಡಿ ನಿವಾಸಿಗಳ ಧರಣಿ

ಕೊಳ್ಳೇಗಾಲ: ಗಡಿಪ್ರದೇಶ ಪಾಲರ್ ಹಾಡಿಗೆ ವಿದ್ಯುತ್ ಸಂಪರ್ಕ ಕಲ್ಪಿಸದಂತೆ ಅರಣ್ಯಾಧಿಕಾರಿಗಳು ತಡೆಯುತ್ತಿದ್ದಾರೆ ಎಂದು ಆರೋಪಿಸಿ ಪಾಲಾರ್ ಹಾಡಿಯ ನಿವಾಸಿಗಳು ಪಟ್ಟಣದ ಡಿಎಫ್‌ಓ ಕಚೇರಿ ಎದುರು ಧರಣಿ ನಡೆಸಿದರು.

ಪಾಲಾರ್ ಹಾಡಿಗೆ ವಿದ್ಯುತ್ ನೀಡುವಂತೆ 15 ದಿನಗಳ ಹಿಂದೆ ಸೆಸ್ಕ್ ಕಚೇರಿ ಎದುರು ಪ್ರತಿಭಟನೆ ನಡೆಸಲಾಗಿತ್ತು. ನಂತರ ಹಾಡಿಗೆ ವಿದ್ಯುತ್ ಅಳವಡಿಸಲು ವಿದ್ಯುತ್ ಪರಿಕರಗಳನ್ನು ತರಲಾಗಿದೆ. ಆದರೆ, ಅರಣ್ಯ ಇಲಾಖೆಯವರು ಅನುಮತಿ ನೀಡುತ್ತಿಲ್ಲ. ಇದರಿಂದ ಹಾಡಿಯ ನಿವಾಸಿಗಳಿಗೆ ವಿದ್ಯುತ್ ಇಲ್ಲದೆ ತೊಂದರೆಯಾಗುತ್ತಿದೆ ಎಂದು ಪ್ರತಿಭಟನಾಕಾರರು ದೂರಿದರು.

ಅರಣ್ಯಾಧಿಕಾರಿಗಳ ಕಿರುಕುಳದಿಂದ ಲೋಕಸಭಾ ಚುನಾವಣೆಯ ಮತದಾನ ಬಹಿಷ್ಕರಿಸಲಾಗುವುದು. ಹಾಡಿಗೆ ವಿದ್ಯುತ್ ದೊರೆಯುವವರೆಗೂ ಅರಣ್ಯ ಇಲಾಖೆ ಕಚೇರಿ ಮುಂದೆ ಉಪವಾಸದೊಂದಿಗೆ ಧರಣಿ ನಡೆಸುವುದಾಗಿ ಪಟ್ಟುಹಿಡಿದರು.

ಬಳಿಕ ಸ್ಥಳಕ್ಕೆ ಆಗಮಿಸಿದ್ದ ಡಿಎಫ್‌ಓ ಸಂತೋಷ್ ಕುಮಾರ್, ಉಪವಿಭಾಗಾಧಿಕಾರಿ ಶಿವಮೂರ್ತಿ, ಪರಿಶಿಷ್ಟ ವರ್ಗಗಳ ಜಿಲ್ಲಾ ಕಲ್ಯಾಣಾಧಿಕಾರಿ ಮಂಜುಳಾ, ತಹಸೀಲ್ದಾರ್ ಗುರುಪ್ರಸಾದ್, ತಾಲೂಕು ಪರಿಶಿಷ್ಟ ಕಲ್ಯಾಣಾಧಿಕಾರಿ ನವೀನ್ ಮಠದ, ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಮಲ್ಲಿಕಾರ್ಜುನ್, ಸೆಸ್ಕ್ ಇಇ ತಬಸುಮ್ಮ, ಎಇಇ ಶಂಕರ್ ಪ್ರತಿಭಟನಾಕಾರರ ಸಮಸ್ಯೆ ಆಲಿಸಿ, ಅಲ್ಲಿನ ಸಮಸ್ಯೆ ಬಗೆಹರಿಸಲಾಗುವುದು. ವಿದ್ಯುತ್ ನೀಡಲು 40 ದಿನ ಕಾಲಾವಕಾಶ ಬೇಕು. ನಂತರ ವಿದ್ಯುತ್ ಸಂಪರ್ಕ ಕಲ್ಪಿಸುವುದಾಗಿ ಭರವಸೆ ನೀಡಿದರು. ಬಳಿಕ ಪ್ರತಿಭಟನಾಕಾರರು ಧರಣಿ ಕೈಬಿಟ್ಟರು.

ಪ್ರತಿಭಟನೆಯಲ್ಲಿ ಅರಣ್ಯವಾಸಿ ಸೇವಾ ಟ್ರಸ್ಟ್ ಕಾರ್ಯಾಧ್ಯಕ್ಷ ನಾಗೇಂದ್ರ, ಮ.ಬೆಟ್ಟಿ ಉಪಾಧ್ಯಕ್ಷೆ ಕೆಂಪಾರೆ, ಮಹದೇವ, ಚಿನ್ನಪ್ಪಿ, ಸತ್ಯಮಂಗಲ ಗಿರೀಶ್, ಮಾಸ್ತಮ್ಮ, ಗಂಗೆ, ಮಾದಿ, ಮಾದೇವಿ, ದುಂಡಮ್ಮ ಇದ್ದರು.



ಕೊಳ್ಳೇಗಾಲ ಡಿಎಫ್‌ಓ ಕಚೇರಿ ಎದುರು ಧರಣಿ ನಡೆಸಿದ ಪಾಲಾರ್ ಹಾಡಿಯ ನಿವಾಸಿಗಳೊಂದಿಗೆ ಅರಣ್ಯಾಧಿಕಾರಿಗಳು ಚರ್ಚಿಸಿದರು.

ಯತೀಂದ್ರ ಸಿದ್ದರಾಮಯ್ಯಗೆ ನೋಟಿಸ್



ಚಾಮರಾಜನಗರ, ಏ.1– ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಗೂಂಡಾ, ರೌಡಿ ಎಂದು ಕರೆದ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್‌ನ ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಅವರಿಗೆ ಜಿಲ್ಲಾ ಚುನಾವಣಾಧಿಕಾರಿ ಸಿ.ಟಿ.ಶಿಲ್ಪನಾಗ್ ನೋಟಿಸ್ ಜಾರಿ ಮಾಡಿದ್ದಾರೆ.

ಹನೂರಿನಲ್ಲಿ ನಡೆದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದ ಯತೀಂದ್ರ, ಗೃಹ ಸಚಿವ ಅಮಿತ್ ಶಾ ವಿರುದ್ಧ ಹರಿಹಾಯ್ದಿದ್ದರು. ಈ ವೇಳೆ ಅವರೊಬ್ಬ, ಗೂಂಡಾ, ರೌಡಿ, ಗುಜರಾತ್‌ನಲ್ಲಿ ಅವರ ಮೇಲೆ ಕೊಲೆ ಪ್ರಕರಣಗಳಿವೆ. ಅಂತಹವರು ದೇಶದ ಉನ್ನತ ಸ್ಥಾನದಲ್ಲಿದ್ದಾರೆ ಎಂದು ಆರೋಪಿಸಿದ್ದರು.

ಈ ಹೇಳಿಕೆಯನ್ನು ಖಂಡಿಸಿದ್ದ ಬಿಜೆಪಿ, ಯತೀಂದ್ರ ವಿರುದ್ಧ ಚುನಾವಣಾಧಿಕಾರಿಗಳಿಗೆ ದೂರು ನೀಡಿತ್ತು. ಫ್ಲೈಯಿಂಗ್ ಸ್ಕ್ವಾಡ್, ಸ್ಥಳೀಯ ಚುನಾವಣಾಧಿಕಾರಿ ಮತ್ತು ಮಾದರಿ ನೀತಿ ಸಂಹಿತೆ ನೋಡಲ್ ಅಧಿಕಾರಿ ನೀಡಿರುವ ವರದಿ ಆಧಾರದಲ್ಲಿ ನೋಟಿಸ್ ನೀಡಲಾಗಿದೆ.

ಮೈಸೂರು ರಾಜ ಮನೆತನದ ಶಾಶ್ವತ ಕೊಡುಗೆಯನ್ನು ಜನ ಮರೆತಿಲ್ಲ

ಮೈಸೂರು–ಕೊಡಗು ಜನರು ಪಕ್ಷಾತೀತವಾಗಿ ಯದುವೀರರ ಬೆಂಬಲಿಸುತ್ತಾರೆ: ಜಿಟಿಡಿ

ಮೈಸೂರು, ಏ.1(ಎಸ್‌ಬಿಡಿ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿ ಯದುವೀರ್ ಅವರ ಗೆಲುವಿನೊಂದಿಗೆ ದೇಶಕ್ಕೆ ಹೊಸ ಸಂದೇಶ ರವಾನೆಯಾಗಲಿದೆ ಎಂದು ಜೆಡಿಎಸ್ ರಾಜ್ಯ ಕೋರ್ ಕಮಿಟಿ ಅಧ್ಯಕ್ಷರಾದ ಹಿರಿಯ ಶಾಸಕ ಜಿ.ಟಿ.ದೇವೇಗೌಡರು ವಿಶ್ವಾಸ ವ್ಯಕ್ತಪಡಿಸಿದರು.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ದೇಶದಲ್ಲೇ ಮೈಸೂರು ಮಹಾರಾಜರು ಮಾದರಿ ಆಡಳಿತ ನೀಡಿದರು. ರಾಜ ಮನೆತನದವರ ಶಾಶ್ವತ ಕೊಡುಗೆಯನ್ನು ಜನ ಮರೆತಿಲ್ಲ. ಮೈಸೂರು ಹಾಗೂ ಕೊಡಗು ಜಿಲ್ಲೆಗಳಲ್ಲಿ ಉಭಯ ಪಕ್ಷಗಳ ಕಾರ್ಯಕರ್ತರು, ಬೆಂಬಲಿಗರು ಮಾತ್ರವಲ್ಲದೆ ಎಲ್ಲರೂ ಪಕ್ಷಾತೀತವಾಗಿ ಯದುವೀರ್ ಅವರನ್ನು ಗೆಲ್ಲಿಸಬೇಕೆಂದು ತೀರ್ಮಾನಿಸಿರುವುದು ಬಹುದೊಡ್ಡ ವಿಶೇಷ ಎಂದರು.

ಹೋದಲೆಲ್ಲಾ ಯುವ ಜನತೆ, ಮಹಿಳೆಯರು ಸೇರಿದಂತೆ ಎಲ್ಲಾ ವರ್ಗದ ಜನ ಹೆಚ್ಚು ಸಂಖ್ಯೆಯಲ್ಲಿ ನೆರೆದು ಯದುವೀರ್ ಅವರಿಗೆ ಸ್ವಯಂ ಬೆಂಬಲ ವ್ಯಕ್ತಪಡಿಸುತ್ತಿದ್ದಾರೆ. ಚುನಾವಣೆಯಲ್ಲಿ ಯದುವೀರ್ ಗೆಲುವಿನೊಂದಿಗೆ ದೇಶಕ್ಕೆ ಮಾದರಿ ಸಂದೇಶ ರವಾನೆಯಾಗಲಿದೆ. ಮಂಡ್ಯ, ಚಾಮರಾಜನಗರ, ಹಾಸನ, ಕೋಲಾರ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಪಕ್ಷಾತೀತವಾಗಿ ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿಗಳನ್ನು ಬೆಂಬಲಿಸುವ ವಿಶ್ವಾಸವಿದೆ ಎಂದು ಹೇಳಿದರು.



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಜೆಡಿಎಸ್ ರಾಜ್ಯ ಕೋರ್ ಕಮಿಟಿ ಅಧ್ಯಕ್ಷರಾದ ಶಾಸಕ ಜಿ.ಟಿ.ದೇವೇಗೌಡರು ಹಾಗೂ ಮೈಸೂರು–ಕೊಡಗು ಕ್ಷೇತ್ರದ ಅಭ್ಯರ್ಥಿ ಯದುವೀರ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಜನತೆ ಒತ್ತಾಸೆಯ ಮೈತ್ರಿ: ಜೆಡಿಎಸ್–ಬಿಜೆಪಿಯ ಹಿಂದಿನ ಮೈತ್ರಿಯನ್ನು ಜನ ಒಪ್ಪಿರಲಿಲ್ಲ. ಆ ಸಂದರ್ಭದಲ್ಲಿ ಹುಣಸೂರು ಕ್ಷೇತ್ರದಲ್ಲಿ ಸ್ಪರ್ಧಿಸಿ ನಾನೂ ಸೋತಿದ್ದೆ. ಆದರೆ ಪ್ರಸ್ತುತ ಜನರ ಒತ್ತಾಸೆಯಂತೆಯೇ ಬಿಜೆಪಿ–ಜೆಡಿಎಸ್ ಮೈತ್ರಿಯಾಗಿರುವುದರಿಂದ ಬಹಳ ಗಟ್ಟಿಯಾಗಿದೆ. ಹಿಂದಿನ ವಿಧಾನಸಭೆ ಚುನಾವಣೆಯಲ್ಲಿ ಗ್ಯಾರಂಟಿಗಳನ್ನು ಜನ ನಂಬಿ, ಕಾಂಗ್ರೆಸ್ ಬೆಂಬಲಿಸಿದರು. ಆದರೆ ಅಭಿವೃದ್ಧಿಯಲ್ಲಿ ಕಾಂಗ್ರೆಸ್ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಕುಡಿಯುವ ನೀರಿಗೆ ಹಾಹಾಕಾರ ಸೃಷ್ಟಿಯಾಗಿದ್ದರೂ ನಿರ್ಲಕ್ಷಿಸಲಾಗಿದೆ. ಲೋಕಸಭಾ ಚುನಾವಣೆಯಲ್ಲಿ ರಾಜ್ಯದ ಜನ ಖಂಡಿತವಾಗಿ ಬಿಜೆಪಿ–ಜೆಡಿಎಸ್ ಮೈತ್ರಿ ಬೆಂಬಲಿಸುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮಂಡ್ಯದ ಮೈತ್ರಿ ಅಭ್ಯರ್ಥಿ ಹೆಚ್.ಡಿ.ಕುಮಾರಸ್ವಾಮಿ, ಹಾಲಿ ಸಂಸದೆ ಸುಮಲತಾ ಅವರನ್ನು ಭೇಟಿಯಾದ ಬಗ್ಗೆ ಪ್ರತಿಕ್ರಿಯಿಸಿ, ಯಾರೇ ಅಭ್ಯರ್ಥಿಯಾದರೂ ಕ್ಷೇತ್ರದ ಮುಖಂಡರನ್ನು ಭೇಟಿಯಾಗಿ ಬೆಂಬಲ ಕೇಳುವುದು ಸಹಜ. ಆ ಕೆಲಸವನ್ನು ಕುಮಾರಸ್ವಾಮಿ ಅವರು ಗೌರವಯುತವಾಗಿ ನೆರವೇರಿಸಿದ್ದಾರೆ. ಸುಮಲತಾ ಅವರು ಖಂಡಿತವಾಗಿ ಬೆಂಬಲಿಸುತ್ತಾರೆಂಬ ವಿಶ್ವಾಸವಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ನಮ್ಮ ವರಿಷ್ಠರಾದ ಹೆಚ್.ಡಿ.ದೇವೇಗೌಡರನ್ನು ಟೀಕಿಸುವಾಗ ಪ್ರಸ್ತಾಪಿಸದ ವಿಚಾರಗಳನ್ನು ಇಂದು ಹೇಳಿ ಹಿಂದಿನ ಹೇಳಿಕೆ ಮುಚ್ಚಿಡುವ ಪ್ರಯತ್ನ ಮಾಡಿದ್ದಾರೆ ಎಂದು ಟಾಂಗ್ ನೀಡಿದರು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಜೆಡಿಎಸ್ ರಾಜ್ಯಾಧ್ಯಕ್ಷರೂ ಆದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಈಗಾಗಲೇ ಬಿಜೆಪಿ–ಜೆಡಿಎಸ್ ಕೋರ್ ಕಮಿಟಿ ಸಭೆ ಹಾಗೂ ಉಭಯ ಪಕ್ಷಗಳ ಸಮನ್ವಯ ಸಭೆಯನ್ನು ಮಾಡಿದ್ದಾರೆ. ಮೈತ್ರಿ ಅಭ್ಯರ್ಥಿ ಯದುವೀರ್ ಅವರು ನಾಮಪತ್ರ ಸಲ್ಲಿಸುವ ಸಂದರ್ಭದಲ್ಲೂ ಭಾಗಿಯಾಗಲಿದ್ದಾರೆ. ಏ.3ರಂದು ಬೆಳಗ್ಗೆ 10 ಗಂಟೆಗೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿ ಹೆಚ್ಚಿನ ಸಂಖ್ಯೆಯಲ್ಲಿ ಉಭಯ ಪಕ್ಷಗಳ ನಾಯಕರು, ಮುಖಂಡರು, ಕಾರ್ಯಕರ್ತರು ಸೇರಬೇಕೆಂದು ಮನವಿ ಮಾಡಿದರು.

ಮೈಸೂರು, ಕೊಡಗು ಜನತೆ ಬಿಜೆಪಿ ಬೆಂಬಲಿಸುವ ಪೂರ್ಣ ವಿಶ್ವಾಸವಿದೆ

ಮೈಸೂರು, ಏ.1(ಎಸ್‌ಬಿಡಿ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಪರಂಪರೆ ಸಂರಕ್ಷಣೆ, ಕೃಷಿ ಹಾಗೂ ಪ್ರವಾಸೋದ್ಯಮ ಅಭಿವೃದ್ಧಿ ದೃಷ್ಟಿಯಿಂದ ಜನತೆ ಬಿಜೆಪಿ ಬೆಂಬಲಿಸುವ ವಿಶ್ವಾಸವಿದೆ ಎಂದು ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಹೇಳಿದರು.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿ ಏ.3ರಂದು ನಾಮಪತ್ರ ಸಲ್ಲಿಸುವ ಬಗ್ಗೆ ಬಿಜೆಪಿ ಕಚೇರಿಯಲ್ಲಿ ಜೆಡಿಎಸ್ ರಾಜ್ಯ ಕೋರ್ ಕಮಿಟಿ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡರೊಂದಿಗೆ ಸೋಮವಾರ ಜಂಟಿ ಸುದ್ದಿಗೋಷ್ಠಿಯಲ್ಲಿ ವಿವರಣೆ ನೀಡಿದರು.

ಪಾರಂಪರಿಕ ಹಿನ್ನೆಲೆಯುಳ್ಳ ಮೈಸೂರು ಹಾಗೂ ಕೊಡಗು, ಕೃಷಿ ಹಾಗೂ ಪ್ರವಾಸೋದ್ಯಮ ಪ್ರಧಾನ ಜಿಲ್ಲೆಗಳು. ಈ ಎರಡು ಜಿಲ್ಲೆಗಳು ಮೂಲ ಪರಂಪರೆ ಸಂರಕ್ಷಣೆಯೊಂದಿಗೆ ಅಭಿವೃದ್ಧಿಯಾಗಬೇಕು. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಹಾಗೂ ಕ್ಷೇತ್ರದ ನಡುವೆ ಸೇತುವೆಯಾಗಿ ಕೆಲಸ ಮಾಡುತ್ತೇನೆಂದು ಜನತೆಗೆ ಭರವಸೆ ನೀಡುತ್ತೇನೆ ಎಂದರು.

ಚಾಮುಂಡೇಶ್ವರಿ ಕ್ಷೇತ್ರದ ಶಾಸಕರಾದ ಜಿ.ಟಿ.ದೇವೇಗೌಡರು ಸೇರಿದಂತೆ ಮೈಸೂರು ಹಾಗೂ ಕೊಡಗು ಜಿಲ್ಲೆಗಳ ಎಲ್ಲಾ ಹಿರಿಯ ನಾಯಕರ ಸಲಹೆ, ಮಾರ್ಗದರ್ಶನದೊಂದಿಗೆ ಕೆಲಸ ಮಾಡುತ್ತೇನೆ. ಸಂಸದನಾಗಿ ಕೆಲಸ ಮಾಡಲು ಕಚೇರಿ ತೆರೆಯುವುದಾಗಿ ಹೇಳಿದ್ದೇನೆ. ಆದರೆ ಜನ ಅರಮನೆಗೆ ಬರಬಾರದೆಂದು ನಾನು ಎಲ್ಲೂ ಹೇಳಿಲ್ಲ. ಅರಮನೆ ಬಾಗಿಲು ಜನರಿಗಾಗಿ ಸದಾ ತೆರೆದಿರುತ್ತದೆ. ಎಲ್ಲರಂತೆ ನನಗೂ ಕರೆ ಮಾಡಬಹುದು. ಜನರ ಕೆಲಸಕ್ಕೆ ನಾನೂ ಸದಾ ಸಿದ್ಧನಿದ್ದೇನೆ ಎಂದು ಸ್ಪಷ್ಟಪಡಿಸಿದರು.

ಎರಡೂ ಜಿಲ್ಲೆಗಳಲ್ಲಿ ಜನರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಬಿಜೆಪಿ ಹಾಗೂ ಜೆಡಿಎಸ್ ಮುಖಂಡರು ಹಾಗೂ ಕಾರ್ಯಕರ್ತರು ಸಮನ್ವಯತೆಯೊಂದಿಗೆ ಅತ್ಯಂತ ಉತ್ಸಾಹದಿಂದ ಪ್ರಚಾರದಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ನಮ್ಮ ತಾಯಿಯವರು ಸದ್ಯಕ್ಕೆ ಪ್ರಚಾರಕ್ಕೆ ಬರುವುದಿಲ್ಲ, ಮುಂದೆ ನೋಡೋಣ. ಚುನಾವಣೆಯಲ್ಲಿ ಸ್ಪರ್ಧಿಸಬೇಕೆಂದು ಮಾ.13ರಂದು ಪಕ್ಷದಿಂದ ಅಧಿಕೃತವಾಗಿ ಸೂಚನೆ ಬಂತು. ಅದಕ್ಕೂ ಮುನ್ನ ಚರ್ಚೆ ನಡೆದಿತ್ತು ಎಂದು ತಿಳಿಸಿದರು.

ಪ್ರಧಾನಿ ಮೋದಿ ಅವರು ಕಳೆದ 10 ವರ್ಷಗಳಲ್ಲಿ ಅತ್ಯುತ್ತಮ ಆಡಳಿತ ನೀಡಿದ್ದಾರೆ. ದೇಶದ ಜಿಡಿಪಿ, ಕೊಳ್ಳುವ ಶಕ್ತಿ ಸ್ವಾಮ್ಯತೆ ಜೊತೆಗೆ ಆರ್ಥಿಕ ಅಭಿವೃದ್ಧಿ ಸಾಧಿಸಿದೆ. ಈ ಬಗ್ಗೆ ಜನರಿಗೆ ತಿಳಿದಿರುವುದರಿಂದ ವಿಕಸಿತ ಭಾರತಕ್ಕಾಗಿ ಮೋದಿ ಅವರ ಕೈ ಬಲಪಡಿಸುತ್ತಾರೆಂದು ನಂಬಿಕೆ ಇದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಜೆಡಿಎಸ್ ರಾಜ್ಯ ಕೋರ್ ಕಮಿಟಿ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡರು, ಬಿಜೆಪಿ ಶಾಸಕ ಟಿ.ಎಸ್.ಶ್ರೀವತ್ಸ, ಬಿಜೆಪಿ ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ರಾಜ್ಯ ಉಪಾಧ್ಯಕ್ಷ ಎಂ.ರಾಜೇಂದ್ರ, ಜೆಡಿಎಸ್ ಜಿಲ್ಲಾಧ್ಯಕ್ಷ ನರಸಿಂಹಸ್ವಾಮಿ, ಮಾಜಿ ಮೇಯರ್ ಶಿವಕುಮಾರ್, ಬಿಜೆಪಿ ನಗರ ಪ್ರಧಾನ ಕಾರ್ಯದರ್ಶಿಗಳಾದ ಕೇಬಲ್ ಮಹೇಶ್, ಗಿರಿಧರ್, ಬಿ.ಎಂ.ರಘು, ಗ್ರಾಮಾಂತರ ಪ್ರಧಾನ ಕಾರ್ಯದರ್ಶಿಗಳಾದ ಮಹೇಶ್ ಮಡುವಾಡಿ, ಕಿರಣ್ ಜಯರಾಮೇಗೌಡ, ವಸಂತ್ ಕುಮಾರ್, ನಗರ ಮಾಧ್ಯಮ ಸಂಚಾಲಕ ಮಹೇಶ್ ರಾಜೇ ಅರಸ್, ಸಹ ಸಂಚಾಲಕ ಬಿ.ಎಂ.ಸಂತೋಷ್ ಕುಮಾರ್ ಮತ್ತಿತರರಿದ್ದರು.

ನಾಳೆ ನಾಮಪತ್ರ ಸಲ್ಲಿಕೆ; ಭಾಗವಹಿಸಿ ಆಶೀರ್ವದಿಸಿ...

ಸೋಮವಾರ ಸಾಂಕೇತಿಕವಾಗಿ ನಾಮಪತ್ರ ಸಲ್ಲಿಸಿದ್ದೇನೆ. ಆದರೆ ಏ.3ರಂದು ಬೆಳಗ್ಗೆ 10.30ಕ್ಕೆ ಅರಮನೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗದಿಂದ ಬಿಜೆಪಿ ಹಾಗೂ ಜೆಡಿಎಸ್ ಮೆರವಣಿಗೆ ಮೂಲಕ ತೆರಳಿ ಮತ್ತೊಮ್ಮೆ ನಾಮಪತ್ರ ಸಲ್ಲಿಸುತ್ತಿದ್ದೇನೆ. ಆ ಸಂದರ್ಭದಲ್ಲಿ ಎರಡೂ ಜಿಲ್ಲೆಯ ಬಂಧುಗಳು, ಬಿಜೆಪಿ–ಜೆಡಿಎಸ್ ಮುಖಂಡರು, ಕಾರ್ಯಕರ್ತರು ದೊಡ್ಡ ಸಂಖ್ಯೆಯಲ್ಲಿ ಉಪಸ್ಥಿತರಿದ್ದು, ಆಶೀರ್ವದಿಸುವಂತೆ ಮನವಿ ಮಾಡುತ್ತೇನೆ.

-ಯದುವೀರ್, ಬಿಜೆಪಿ ಅಭ್ಯರ್ಥಿ

ಎನ್.ಆರ್.ಕ್ಷೇತ್ರದಲ್ಲಿ ಲಕ್ಷ್ಮಣ್‌ಗೆ ಒಂದೂವರೆ ಲಕ್ಷಕ್ಕೂ ಅಧಿಕ ಮತ

●ಕ್ಷೇತ್ರದ ಮುಖಂಡರು, ಕಾರ್ಯಕರ್ತರಿಗೆ ಕೆಪಿಸಿಸಿ ಕಾರ್ಯಾಧ್ಯಕ್ಷ ತನ್ವೀರ್ ಸೇಠ್ ಕರೆ ●ಇನ್ನೂ ಯಾರಿಗೆ ಗ್ಯಾರಂಟಿ ಸಿಕ್ಕಿಲ್ಲ ಅವರ ಪಟ್ಟಿ ಮಾಡಿ ●ಕಾಂಗ್ರೆಸ್ ಗೆಲ್ಲದಿದ್ದರೆ ನಮಗೆ ನೆಮ್ಮದಿ ಇಲ್ಲ!



ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಎನ್.ಆರ್ ಕ್ಷೇತ್ರ ಮುಖಂಡರು, ಕಾರ್ಯಕರ್ತರ ಸಭೆಯಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ತನ್ವೀರ್ ಸೇಠ್ ಮಾತನಾಡಿದರು.

ಮೈಸೂರು, ಏ.1(ಎಂಕೆ)– ನರಸಿಂಹರಾಜ ಕ್ಷೇತ್ರವೊಂದರಲ್ಲೇ ಒಂದೂವರೆ ಲಕ್ಷಕ್ಕೂ ಅಧಿಕ ಮತಗಳನ್ನು ನೀಡುವ ಮೂಲಕ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಎಂ.ಲಕ್ಷ್ಮಣ ಅವರನ್ನು ಜಯಶೀಲರನ್ನಾಗಿ ಮಾಡುವಂತೆ ಕ್ಷೇತ್ರದ ಶಾಸಕರೂ ಆದ ಕೆಪಿಸಿಸಿ ಕಾರ್ಯಾಧ್ಯಕ್ಷ ತನ್ವೀರ್ ಸೇಠ್ ಕರೆ ನೀಡಿದರು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಕಾಂಗ್ರೆಸ್ ಕಚೇರಿಯಲ್ಲಿ ಎನ್.ಆರ್.ಕ್ಷೇತ್ರದ ಮುಖಂಡರು, ಕಾರ್ಯಕರ್ತರ ಸಮಾಲೋಚನಾ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿರುವ ನಮ್ಮ ಸರ್ಕಾರ ನುಡಿದಂತೆ ನಡೆದಿದ್ದು, ಅದೇ ನಮಗೆ ಶ್ರೀರಕ್ಷೆಯಾಗಿದೆ. ನರಸಿಂಹರಾಜ ಕ್ಷೇತ್ರದ ಮತದಾರರು ಪ್ರಜ್ಞಾವಂತರಾಗಿ ಮೊದಲಿನಿಂದಲೂ ಕಾಂಗ್ರೆಸ್‌ಗೆ ಬೆಂಬಲ ನೀಡಿದ್ದಾರೆ. ಹಾಗೆಯೇ ಮುಂದಿನ ಲೋಕಸಭಾ ಚುನಾವಣೆಯಲ್ಲಿ ನಮ್ಮ ಅಭ್ಯರ್ಥಿ ಜಯಗಳಿಸಲೇಬೇಕು. ಈ ನಿಟ್ಟಿನಲ್ಲಿ ಕ್ಷೇತ್ರದ ಮನೆ ಮನೆಗೂ ಭೇಟಿ ನೀಡಿ, ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ಮತ್ತೆ ಮತ್ತೆ ಜ್ಞಾಪಿಸಿ ಫಲಾನುಭವಿಗಳ ಮನವೊಲಿಸುವ ಕಾರ್ಯ ಮಾಡಬೇಕಿದೆ ಎಂದು ಸೂಚಿಸಿದರು.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕ್ಷೇತ್ರದಲ್ಲಿ ಸುಮಾರು 70 ಸಾವಿರ ಮನೆಗಳಿಗೆ ಗ್ಯಾರಂಟಿ ಕಾರ್ಡ್‌ಗಳನ್ನು ಹಂಚಲಾಗಿತ್ತು. ಬಹುಶಃ ಇದರಿಂದಾಗಿಯೂ ನಾನು ಜಯಗಳಿಸಲು ಸಾಧ್ಯವಾಯಿತು. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ನೀಡಿದ ಗ್ಯಾರಂಟಿ ಭರವಸೆಗಳನ್ನು ಯಶಸ್ವಿಯಾಗಿ ಈಡೇಸುವ ಮೂಲಕ ನುಡಿದಂತೆ ನಡೆದಿದೆ. ಈ ಬಾರಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೇ ನೇರ ಫೈಟ್ ಇದ್ದು, ಕಾರ್ಯಕರ್ತರು ಜಾಗೃತರಾಗಿ ಕಾರ್ಯನಿರ್ವಹಿಸಬೇಕಾಗಿದೆ ಎಂದರು.

ಕಾರ್ಯಕರ್ತರು ಮತದಾರರ ಬಳಿಗೆ ಹೋದಾಗ ಗ್ಯಾರಂಟಿ ಯೋಜನೆ ಜ್ಞಾಪಿಸಿ, ಫಲಾನುಭವಿಗಳಿದ್ದರೆ ಮತ ನೀಡುವಂತೆ ಮನವಿ ಮಾಡಿ. ಆಕಸ್ಮಾತ್ ಗ್ಯಾರಂಟಿ ಫಲಾನುಭವಿಗಳಾಗಲು ಸಾಧ್ಯವಾಗದೆ ಇದ್ದಲ್ಲಿ ಅವರ ಮಾಹಿತಿ ಪಡೆದು ಚುನಾವಣೆ ನಂತರ ಅವರಿಗೆ ಸಹಕಾರ ನೀಡಿ ಎಂದರು.

ನೆಮ್ಮದಿಗಾಗಿ ಗೆಲುವು ಅನಿವಾರ್ಯ: ರಾಜ್ಯ ಹಾಗೂ ದೇಶದ ಜನತೆಯ ನೆಮ್ಮದಿಯ ಜೀವನಕ್ಕಾಗಿ ದೇಶದಲ್ಲಿ ಕಾಂಗ್ರೆಸ್ ಗೆಲುವು ಅನಿವಾರ್ಯವಾಗಿದೆ. ಎನ್‌ಆರ್‌ಸಿ, ಸಿಎಎ ಇಟ್ಟುಕೊಂಡು ದೇಶದ ಜನತೆಯೊಂದಿಗೆ ಚೆಲ್ಲಾಟವಾಡುತ್ತಿರುವ ಬಿಜೆಪಿ ತೊಲಗಿಸಿ, ನೆಮ್ಮದಿಯ ಬದುಕನ್ನು ಕಟ್ಟಿಕೊಳ್ಳಬೇಕಾದರೆ ದೇಶದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಬೇಕು. ಹಾಗಾಗಿ ನನ್ನ ಅನುಪ ಸ್ಥಿತಿಯಲ್ಲಿ ನೀವೇ ನಾನಾಗಿ ಕೆಲಸ ಮಾಡಿ ಕಾಂಗ್ರೆಸ್ ಅಭ್ಯರ್ಥಿ ಗೆಲ್ಲಿಸಿ ಎಂದು ಕೋರಿದರು.

ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಎನ್.ಆರ್ ಕ್ಷೇತ್ರದ ಸಾಹುಕಾರ್ ಚೆನ್ನಯ್ಯ ಬ್ಲಾಕ್‌ನ ಅಧ್ಯಕ್ಷ ಜಿ.ಎನ್.ಮಂಜುನಾಥ್, ಅಜೀಜ್ ಸೇಠ್ ಬ್ಲಾಕ್ ಅಧ್ಯಕ್ಷ ಸೈಯ್ಯದ್ ಇಕ್ಬಾಲ್, ಡಿಸಿಸಿ ಕಾರ್ಯದರ್ಶಿಗಳಾದ ಗಿರೀಶ್, ಈಶ್ವರ್ ಚಕ್ಕಡಿ ಸೇರಿದಂತೆ ಕ್ಷೇತ್ರದ ಮುಖಂಡರು, ಕಾರ್ಯಕರ್ತರು ಸಭೆಯಲ್ಲಿ ಉಪಸ್ಥಿತರಿದ್ದರು.

ಶ್ರೀ ಶಿವಕುಮಾರ ಸ್ವಾಮೀಜಿ ಸ್ಮರಣಾರ್ಥ ದಾಸೋಹ ದಿನ ಆಚರಣೆ



ಸಿದ್ದಗಂಗಾ ಮಠದ ಡಾ.ಶಿವಕುಮಾರಸ್ವಾಮಿ ಸ್ಮರಣಾರ್ಥ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ವಿವಿಧ ಸಂಘಟನೆಗಳ ವತಿಯಿಂದ ಆಯೋಜಿಸಿದ್ದ ದಾಸೋಹ ದಿನ ಕಾರ್ಯಕ್ರಮದಲ್ಲಿ ಲಕ್ಷ್ಮೀ ಟಿಫಾನಿಸ್ ಹೋಟೆಲ್ ಮಾಲೀಕ ಮಲ್ಲೇಶ್ ಅವರನ್ನು ಸನ್ಮಾನಿಸಲಾಯಿತು.

ಮೈಸೂರು,ಏ.1(ಎಂಟಿವೈ)– ಸಿದ್ದಗಂಗಾ ಮಠದ ಡಾ.ಶಿವಕುಮಾರಸ್ವಾಮಿ ಸ್ಮರಣಾರ್ಥ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ವಿವಿಧ ಸಂಘಟನೆಗಳ ವತಿಯಿಂದ ದಾಸೋಹ ದಿನ ಆಚರಿಸಿ, ಲಕ್ಷ್ಮೀ ಟಿಫಾನಿಸ್ ಹೋಟೆಲ್ ಮಾಲೀಕ ಮಲ್ಲೇಶ್ ಅವರನ್ನು ಸನ್ಮಾನಿಸಲಾಯಿತು.

ವಿವಿಧ ಸಂಘಟನೆಗಳು ಹಾಗೂ ಜಯಶಂಕರ್ ಬದನಗುಪ್ಪೆ ಸ್ನೇಹ ಬಳಗ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಿದ್ದಗಂಗಾ ಶ್ರೀ ಡಾ.ಶಿವಕುಮಾರಸ್ವಾಮಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ಇದೇ ವೇಳೆ ಸಮಾಜ ಸೇವಾ ಹಿನ್ನೆಲೆಯಲ್ಲಿ ಅಶಕ್ತರಿಗೆ ಉಚಿತವಾಗಿ ಊಟೋಪಚಾರ ನೀಡುತ್ತಾ ಬಂದಿರುವ ಲಕ್ಷ್ಮೀ ಟಿಫಾನಿಸ್ ಮಾಲೀಕ ಮಲ್ಲೇಶ್ ಅವರನ್ನು ದಾಸೋಹ ದಿನದ ಅಂಗವಾಗಿ ಗೌರವಿಸಲಾಯಿತು.

ಈ ವೇಳೆ ಪತ್ರಕರ್ತ ಕೆ.ದೀಪಕ್ ಮಾತನಾಡಿ, ಬುದ್ಧ, ಬಸವ, ಅಂಬೇಡ್ಕರ್ ಸಾಲಿನಲ್ಲಿ ಡಾ. ಶಿವಕುಮಾರ ಸ್ವಾಮೀಜಿ ನಿಲ್ಲುತ್ತಾರೆ. ಅವರು ಬದುಕಿದ ರೀತಿ, ನೀಡಿದ ಕೊಡುಗೆ ಸ್ಮರಣೀಯ ಓರ್ವ ಸಾಮಾನ್ಯ ವ್ಯಕ್ತಿಯೂ ಮಠಾಧಿಪತಿ ಹಾಗೂ ಮಾದರಿ ವ್ಯಕ್ತಿಯಾಗಬಲ್ಲರು ಎಂಬುದಕ್ಕೆ ಇವರು ಸಾಕ್ಷಿಯಾಗಿದ್ದಾರೆ. ಜೀವಿತಾವಧಿಯಲ್ಲೇ ನಡೆದಾಡುವ ದೇವರು ಎನಿಸಿಕೊಂಡರು. ಶತಾಯುಷಿಯಾಗಿದ್ದರೂ ಕ್ರಿಯಾಶೀಲರಾಗಿದ್ದರು. ಸರ್ಕಾರ ಮಾಡಬಹುದಾದ ಕೆಲಸವನ್ನು ತಮ್ಮ ಮಠ, ಶಿಕ್ಷಣ ಸಂಸ್ಥೆಗಳ ಮೂಲಕ ಮಾಡಿದರು ಎಂದು ಸ್ಮರಿಸಿದರು.

ಕಾರ್ಯಕ್ರಮದಲ್ಲಿ ಬಳಗದ ಅಧ್ಯಕ್ಷ ಜಯಶಂಕರ್ ಬದನಗುಪ್ಪೆ, ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್, ಪಾಲಿಕೆ ಮಾಜಿ ಸದಸ್ಯ ಪ್ರದೀಪ್‌ಕುಮಾರ್, ಕನ್ನಡ ಪರ ಹೋರಾಟಗಾರ ಮೂಗೂರು ನಂಜುಂಡಸ್ವಾಮಿ, ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಬಾಲಕೃಷ್ಣ ಹಾಗೂ ಇನ್ನಿತರರು ಇದ್ದರು.



ತ್ರಿವಿಧ ದಾಸೋಹಿಗಳು, ನಡೆದಾಡುವ ದೇವರು, ಕರ್ನಾಟಕ ರತ್ನ, ಪರಮಪೂಜ್ಯ ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳವರ 117ನೇ ಜಯಂತಿಯ ಪ್ರಯುಕ್ತ ಸೋಮವಾರ ಅಗ್ರಹಾರ ವೃತ್ತದಲ್ಲಿ ರಾಜ್ಯ ಬಸವಸೇನೆ ವತಿಯಿಂದ ಪೂಜ್ಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಸಾರ್ವಜನಿಕರಿಗೆ ಮಜ್ಜಿಗೆ, ಪಾನಕ ವಿತರಿಸಲಾಯಿತು. ಈ ಸಂದರ್ಭದಲ್ಲಿ ಮೈಸೂರು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ ಪ್ರಕಾಶ್, ನಗರ ಪಾಲಿಕೆ ಮಾಜಿ ಸದಸ್ಯ ಬಿ.ವಿ.ಮಂಜುನಾಥ್, ಬಿಜೆಪಿ ಉಪಾಧ್ಯಕ್ಷ ರಮೇಶ್, ಬಿಜೆಪಿ ಯುವ ಮುಖಂಡ ಸಂತೋಷ್ ಶಂಭು, ಉದ್ಯಮಿ ಕಿರಣ್, ಬಸವಸೇನೆ ರಾಜ್ಯ ಅಧ್ಯಕ್ಷ ಮನುಶೈವ್, ಪದಾಧಿಕಾರಿಗಳು, ಯುವ ಮುಖಂಡರುಗಳಾದ ಮಹದೇವಪ್ರಸಾದ್, ಯೋಗೀಶ್ ವಿಜಯನಗರ, ನಾಗೇಂದ್ರ ಎಂ ಉಪಸ್ಥಿತರಿದ್ದರು.



ಮೈಸೂರು ಕೊಡಗು ಲೋಕಸಭಾ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್ ಅವರು ಹಿರಿಯ ಕಾಂಗ್ರೆಸ್ ಮುಖಂಡ ವಿಕ್ರಾಂತ್ ಪಿ ದೇವೇಗೌಡ ಅವರ ನಿವಾಸಕ್ಕೆ ಸೌಜನ್ಯ ಭೇಟಿ ನೀಡಿ, ಮತಯಾಚಿಸಿದರು. ಈ ವೇಳೆ ನಗರ ಕಾಂಗ್ರೆಸ್ ಅಧ್ಯಕ್ಷ ಆರ್. ಮೂರ್ತಿ, ಕಾರ್ಯದರ್ಶಿ ಶಿವಣ್ಣ, ಎಲ್.ಭಾಸ್ಕರ್ ಗೌಡ, ಮಾಜಿ ಮೇಯರ್‌ಗಳಾದ ಅಯೂಬ್ ಖಾನ್, ಬಿ.ಕೆ.ಪ್ರಕಾಶ್, ಮೋದಾಮಣಿ, ಪುಷ್ಪಲತಾ ಜಗನ್ನಾಥ್, ಮುಖಂಡರಾದ ಕುಮಾರೇಗೌಡ, ಶ್ರೀನಿವಾಸ್, ಕುಮಾರ್, ಎಂ.ಸಿ.ಮೋಹನ್, ಶಿವಶಂಕರ್, ಎಚ್‌ಎಸ್ ವೆಂಕಟ ಸುಬ್ಬಯ್ಯ, ಗಣೇಶ್, ಚಂದ್ರು, ಪ್ರಶಾಂತ್ ಮುಂತಾದವರಿದ್ದರು.

ವಿಜಯಪುರದಲ್ಲಿ ಬಿರುಗಾಳಿ ಸಹಿತ ಮಳೆ; ಬೆಳೆ ನಾಶ

ವಿಜಯಪುರ: ಜಿಲ್ಲೆಯ ಬಹುತೇಕ ಕಡೆ ಬಿಸಿಲಿನ ಝಳ ಹೆಚ್ಚಿರುವ ಬೆನ್ನಲ್ಲೇ, ವಿಜಯಪುರದ ಕೆಲ ಗ್ರಾಮಗಳಲ್ಲಿ ಶನಿವಾರ ಸಂಜೆ ಬಿರುಗಾಳಿ ಸಹಿತ ಮಳೆಯಾಗಿದೆ. ಬೆಳೆದ ಬೆಳೆ ನಾಶವಾಗಿದ್ದು, ಜಾನುವಾರುಗಳು ಬಲಿಯಾಗಿವೆ.

ಮಳೆಗೆ ರೈತ ಮುರುಗೆಪ್ಪ ಚೌಗಲಾ ಎಂಬುವವರ ಸುಮಾರು ಒಂದು ಎಕರೆ ಜಮೀನಿನಲ್ಲಿದ್ದ ಸುಮಾರು 100 ಬಾಳೆ ಗಿಡಗಳು ನಾಶವಾಗಿವೆ. ಬರದಲ್ಲಿ ಬೆಳೆ ಉಳಿಸಿಕೊಳ್ಳಲು ಹರಸಾಹಸ ಪಡುತ್ತಿದ್ದ ರೈತ, ಇದೀಗ ಬೆಳೆ ಹಾನಿಯಿಂದಾಗಿ ಸಂಕಷ್ಟಕ್ಕೆ ಸಿಲುಕಿದ್ದಾರೆ. ಇಂಡಿ ತಾಲೂಕಿನ ಬೊಮ್ಮನಹಳ್ಳಿ ಗ್ರಾಮದಲ್ಲಿ ಮುರುಗೆಪ್ಪ ಅವರ ತೋಟವಿದ್ದು, ಸುಮಾರು 2 ಲಕ್ಷ ಮೌಲ್ಯದ ಬಾಳೆ ತೋಟವನ್ನು ಕಳೆದುಕೊಂಡಿದ್ದಾರೆ.

ಇಂಡಿ ತಾಲೂಕಿನ ಹಲಗುಣಕಿ ಗ್ರಾಮದಲ್ಲಿ ಸುಮಾರು 60 ಮರಗಳು, ಕೆಲವು ವಿದ್ಯುತ್ ಕಂಬಗಳು ಧರೆಗುರುಳಿವೆ. ಗ್ರಾಮದಲ್ಲಿ ಸಿಡಿಲು ಬಡಿದು ರೈತನೊಬ್ಬ ತನ್ನ ಎರಡು ಜಾನುವಾರುಗಳನ್ನು ಕಳೆದುಕೊಂಡಿದ್ದಾನೆ. ಮಳೆಯಿಂದಾಗಿ ರೈತರ ನಿಂಬೆ ತೋಟಗಳೂ ಹಾನಿಗೀಡಾಗಿವೆ. ಮಳೆಯಿಂದ ಆಗಿರುವ ಒಟ್ಟು ನಷ್ಟದ ಬಗ್ಗೆ ಜಿಲ್ಲಾಡಳಿತ ಪರಿಶೀಲನೆ ನಡೆಸುತ್ತಿದೆ.

ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನಲ್ಲಿ ಸುರಿದ ಮಳೆ ಮತ್ತು ಗಾಳಿಗೆ ಕಷ್ಟಪಟ್ಟು ಉಳಿಸಿಕೊಂಡಿದ್ದ ರೈತರ ಬೆಳೆ ಹಾನಿ ಸಂಭವಿಸಿದೆ.

ಕೌಟುಂಬಿಕ ಕಲಹ; ಇಬ್ಬರು ಗಂಡು ಮಕ್ಕಳಿಗೆ ವಿಷವುಣಿಸಿ ತಂದೆ ಆತ್ಮಹತ್ಯೆ!

ಕೋಲಾರ: ಇಬ್ಬರು ಗಂಡು ಮಕ್ಕಳಿಗೆ ವಿಷ ಕುಡಿಸಿ ತಂದೆಯೊಬ್ಬ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲೂಕಿನ ಶೀಗೆಹಳ್ಳಿ ಗ್ರಾಮದಲ್ಲಿ ನಡೆದಿದೆ. ನಾರಾಯಣಸ್ವಾಮಿ (40) ಹಾಗೂ ಮಕ್ಕಳಾದ ಪವನ್ (12), ನಿತಿನ್ (10) ಮೃತ ದುರ್ದೈವಿಗಳು. ಕೌಟುಂಬಿಕ ಕಲಹದಿಂದ ಬೇಸತ್ತು ಆತ್ಮಹತ್ಯೆಗೆ ಶರಣಾಗಿರುವ ಶಂಕೆ ವ್ಯಕ್ತವಾಗಿದೆ. ವಿಷಯ ತಿಳಿಯುತ್ತಿದ್ದಂತೆ ಶ್ರೀನಿವಾಸಪುರ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮೂವರ ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ರವಾನಿಸಿದ್ದಾರೆ. ಶ್ರೀನಿವಾಸಪುರ ಪೊಲೀಸ್ ಠಾಣೆಯಲ್ಲಿ ಈ ಸಂಬಂಧ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿಸಿದ್ದಾರೆ.

ಗ್ಯಾನವಾಪಿಯಲ್ಲಿ ಹಿಂದೂಗಳ ಪ್ರಾರ್ಥನೆ ತಡೆಗೆ ಸುಪ್ರೀಂ ನಕಾರ

ನವದೆಹಲಿ: ಗ್ಯಾನವಾಪಿ ಸಂಕೀರ್ಣದ ದಕ್ಷಿಣ ಭಾಗದ ನೆಲಮಾಳಿಗೆಯಲ್ಲಿ ಹಿಂದೂಗಳು ಪ್ರಾರ್ಥನೆ ಸಲ್ಲಿಸಿರುವುದಕ್ಕೆ ತಡೆ ನೀಡಲು ಸುಪ್ರೀಂಕೋರ್ಟ್ ನಿರಾಕರಿಸಿತು. ಮಸೀದಿ ವ್ಯವಸ್ಥಾಪನಾ ಸಮಿತಿಯು ಸಲ್ಲಿಸಿರುವ ಅರ್ಜಿಗೆ ಪ್ರತಿಕ್ರಿಯೆ ನೀಡುವಂತೆ ಕಾಶಿ ವಿಶ್ವನಾಥ ದೇವಸ್ಥಾನದ ಟ್ರಸ್ಟಿಗಳಿಗೆ ಸೂಚಿಸಿತು.

ಗ್ಯಾನವಾಪಿ ಮಸೀದಿ ಸಂಕೀರ್ಣದ 'ವ್ಯಾಸ ತೆಹಖಾನಾ'ದಲ್ಲಿ ಪೂಜೆ ಸಲ್ಲಿಸಲು ಹಿಂದೂ ಧರ್ಮೀಯರಿಗೆ ಅವಕಾಶ ನೀಡಿ ಕೆಳಹಂತದ ನ್ಯಾಯಾಲಯವೊಂದು ನೀಡಿರುವ ತೀರ್ಪನ್ನು ಅಲಹಾಬಾದ್ ಹೈಕೋರ್ಟ್ ಎತ್ತಿಹಿಡಿದಿರುವುದನ್ನು ಪ್ರಶ್ನಿಸಿ ಮಸೀದಿ ನಿರ್ವಹಣಾ ಸಮಿತಿ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಸುಪ್ರೀಂಕೋರ್ಟ್ ಸೋಮವಾರ ನಡೆಸಿತು.

ಸಂಕೀರ್ಣದಲ್ಲಿ ಮುಸ್ಲಿಮರು ನಮಾಜ್ ಕೂಡ ಸಲ್ಲಿಸುತ್ತಿದ್ದು, ಈ ವಿಷಯದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಸುಪ್ರೀಂ ಕೋರ್ಟ್ ಆದೇಶಿಸಿತು.

ಸಿ. ನರೇಂದ್ರ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ

ಮೈಸೂರು, ಏ.1– ಪ್ರದೇಶ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿಯನ್ನಾಗಿ ಮೈಸೂರು ತಾಲೂಕು ನಾಗವಾಲ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರೂ ಆದ ಸಿ. ನರೇಂದ್ರ ಅವರನ್ನು ನೇಮಕ ಮಾಡಲಾಗಿದೆ.



ಇಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಕೆಪಿಸಿಸಿ ನೂತನ ಪದಾಧಿಕಾರಿಗಳ ಪಟ್ಟಿ ಪ್ರಕಟಿಸಿದ್ದಾರೆ. 43 ಮಂದಿ ಉಪಾಧ್ಯಕ್ಷರು, 138 ಮಂದಿ ಪ್ರಧಾನ ಕಾರ್ಯದರ್ಶಿಗಳು, ಓರ್ವ ಖಜಾಂಚಿ, ಮೂವರು ಮಾಧ್ಯಮ ಮತ್ತು ಸಂಪರ್ಕ ಪದಾಧಿಕಾರಿಗಳು ಹಾಗೂ ಇಬ್ಬರು ಸಾಮಾಜಿಕ ಜಾಲತಾಣ ವಿಭಾಗದ ಸಹ ಅಧ್ಯಕ್ಷರನ್ನು ನೇಮಕ ಮಾಡಲಾಗಿದೆ. ಸಿ. ನರೇಂದ್ರ ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಆಪ್ತಬಳಗದಲ್ಲಿ ಗುರುತಿಸಿಕೊಂಡಿದ್ದು ನಿಗಮ ಮಂಡಳಿ ನೇಮಕಾತಿ ವೇಳೆ ಅಂತಿಮ ಘಳಿಗೆಯಲ್ಲಿ ಅವಕಾಶ ವಂಚಿತರಾಗಿದ್ದರು.

ಮೈಸೂರಲ್ಲಿ ಈ ವರ್ಷದ ಮೊದಲ 3 ತಿಂಗಳು ಅಪಘಾತ, ಸಾವಿನ ಸಂಖ್ಯೆ ಹೆಚ್ಚಳ

ಯುವಕರು ಹೆಲ್ಮೆಟ್ ಧರಿಸದೇ ದ್ವಿಚಕ್ರ ವಾಹನ ಚಾಲನೆ, ತಡರಾತ್ರಿ ಮದ್ಯಪಾನ ಮಾಡಿ ಅಡ್ಡಾದಿಡ್ಡಿ ಓಡಿಸಿದ್ದೇ ಶೇ. 60ರಷ್ಟು ಅಪಘಾತಗಳಿಗೆ ಪ್ರಮುಖ ಕಾರಣ



ಮೈಸೂರು, ಏ. 1(ಆರ್‌ಕೆ)– ಪೊಲೀಸರು ಸಂಚಾರ ನಿಯಮ ಅನುಷ್ಠಾನಗೊಳಿಸಲು ಸಾರ್ವಜನಿಕರಿಗೆ ಎಷ್ಟೇ ಅರಿವು ಮೂಡಿಸುತ್ತಿದ್ದರೂ ಮೈಸೂರು ನಗರ ಮತ್ತು ಸುತ್ತಮುತ್ತ ಅಪಘಾತಗಳ ಸಂಖ್ಯೆ ಹೆಚ್ಚಾಗುತ್ತಲೇ ಇದೆ.

ಹೆಲ್ಮೆಟ್ ಧರಿಸದೇ, ಮದ್ಯಪಾನ ಮಾಡಿ ತಡರಾತ್ರಿ ಅಡ್ಡಾದಿಡ್ಡಿ ವಾಹನ ಚಾಲನೆ ಮಾಡುತ್ತಿರುವ ಯುವಕರು, ವಿದ್ಯುತ್ ಕಂಬ, ಮರ, ರೋಡ್ ಡಿವೈಡರ್‌ಗಳಿಗೆ ಅಪ್ಪಳಿಸುತ್ತಿರುವುದರಿಂದ ಸಾವು–ನೋವುಗಳು ಸಂಭವಿಸುತ್ತಿವೆ ಎಂದು ಮೈಸೂರು ನಗರ ಸಂಚಾರ ವಿಭಾಗದ ಎಸಿಪಿ ಪರಶುರಾಮಪ್ಪ ತಿಳಿಸಿದ್ದಾರೆ.

ಕಳೆದ ವರ್ಷದ ಮೊದಲ ಮೂರು ತಿಂಗಳಿಗೆ ಹೋಲಿಸಿದಾಗ ಪ್ರಸಕ್ತ ಸಾಲಿನ ಜನವರಿ 1ರಿಂದ ಮಾರ್ಚ್ 31ರವರೆಗೆ ಅಪಘಾತಗಳು ಮತ್ತು ಸಾವಿನ ಸಂಖ್ಯೆ ಹೆಚ್ಚಾಗಿದೆ. 2023ರಲ್ಲಿ ಮೈಸೂರು ನಗರದಾದ್ಯಂತ 3 ತಿಂಗಳಲ್ಲಿ 37 ಮಾರಣಾಂತಿಕ, 168 ಮಾರಣಾಂತಿಕವಲ್ಲದ ಅಪಘಾತಗಳು ಸಂಭವಿಸಿ, 37 ಮಂದಿ ಪ್ರಾಣ ಕಳೆದುಕೊಂಡು, 226 ಮಂದಿ ಗಾಯಗೊಂಡಿದ್ದರು.

2024ರ ಜನವರಿಯಿಂದ ಮಾರ್ಚ್‌ವರೆಗೆ 37 ಮಾರಣಾಂತಿಕ, 260 ಮಾರಣಾಂತಿಕವಲ್ಲದ ಅಪಘಾತಗಳು ಸಂಭವಿಸಿದ್ದವು. ಅದರಲ್ಲಿ 40 ಮಂದಿ ಸಾವನ್ನಪ್ಪಿದ್ದು, ಒಟ್ಟು 311 ಮಂದಿ ಗಾಯಗೊಂಡಿದ್ದಾರೆ. ಎರಡೂ ವರ್ಷಗಳ ಈ ಅವಧಿಯಲ್ಲಿ ತಲಾ 37 ಮಾರಣಾಂತಿಕ ಅಪಘಾತಗಳಾಗಿದ್ದೂ ಸಾವಿನ ಸಂಖ್ಯೆ ಮಾತ್ರ ಹೆಚ್ಚಾಗಿರುವುದಿಲ್ಲ ಎಂಬುದು ಗಮನಾರ್ಹ.

2023ರಲ್ಲಿ 162 ಮಾರಣಾಂತಿಕ, 791 ಮಾರಣಾಂತಿಕವಲ್ಲದ ಅಪಘಾತಗಳು ಸಂಭವಿಸಿದ್ದು, 168 ಮಂದಿ ಸಾವನ್ನಪ್ಪಿ, 984 ಮಂದಿ ಗಾಯಗೊಂಡಿದ್ದರು. 2022ರಲ್ಲಿ 777 ಅಪಘಾತಗಳಲ್ಲಿ 172 ಮಂದಿ ಸಾವನ್ನಪ್ಪಿ, 776 ಮಂದಿ ಗಾಯಗೊಂಡಿದ್ದರು. ಅದೇ ರೀತಿ 221ರಲ್ಲಿ 650 ಅಪಘಾತಗಳಲ್ಲಿ 121 ಮಂದಿ ಪ್ರಾಣ ಕಳೆದುಕೊಂಡಿದ್ದರೆ, 675 ಮಂದಿ ಗಾಯಗೊಂಡಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಅತೀ ವೇಗ, ಅಜಾಗರೂಕ ಚಾಲನೆ, ಸೀಟ್ ಬೆಲ್ಟ್, ಹೆಲ್ಮೆಟ್ ಧರಿಸದೇ ವಾಹನ ಚಾಲನೆ, ಮದ್ಯಪಾನ ಮಾಡಿ, ಮೊಬೈಲ್‌ನಲ್ಲಿ ಮಾತನಾಡಿಕೊಂಡು ಚಾಲನೆ ಮಾಡುವುದು, ಅಪ್ರಾಪ್ತರಿಂದ ವಾಹನ ಚಾಲನೆ ರಸ್ತೆ ಅಪಘಾತಗಳಿಗೆ ಪ್ರಮುಖ ಕಾರಣವಾಗಿದೆ ಎಂದು ಸಂಚಾರ ಎಸಿಪಿ ಪರಶುರಾಮಪ್ಪ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಯುವಕರು ತಡರಾತ್ರಿ ಮದ್ಯಪಾನ ಮಾಡಿ ದ್ವಿಚಕ್ರ ವಾಹನ ಸವಾರಿ ಮಾಡುವುದರಿಂದ ನಿಯಂತ್ರಣ ತಪ್ಪಿ ರಸ್ತೆ ವಿಭಜಕಗಳಿಗೆ, ವಿದ್ಯುತ್ ಕಂಬಗಳು, ಮರಗಳಿಗೆ ಡಿಕ್ಕಿ ಹೊಡೆಯುತ್ತಿರುವುದು ಸೇರಿ ಸ್ವಯಂ ಅಪಘಾತ ಪ್ರಕರಣಗಳ ಸಂಖ್ಯೆ ಹೆಚ್ಚಾಗಿದೆ. ಅದರಲ್ಲೂ ಹೆಲ್ಮೆಟ್ ಧರಿಸದಿರುವುದರಿಂದ ತಲೆಗೆ ತೀವ್ರತರಹದ ಗಾಯಗಳಾಗಿ ಶೇ. 60ರಷ್ಟು ಯುವಕರು ಸಾವನ್ನಪ್ಪುತ್ತಿದ್ದಾರೆ ಎಂದು ಪರಶುರಾಮಪ್ಪ ತಿಳಿಸಿದರು.

2024ರ ಮೊದಲ ಮೂರು ತಿಂಗಳ ಅಪಘಾತಗಳ ವಿವರ				
ತಿಂಗಳು	ಮಾರಣಾಂತಿಕ	ಮಾರಣಾಂತಿಕವಲ್ಲದ	ಸಾವು	ಗಾಯಗೊಂಡವರು
ಜನವರಿ	16	87	17	123
ಫೆಬ್ರವರಿ	10	94	11	90
ಮಾರ್ಚ್	11	79	12	98
ಒಟ್ಟು	**37**	**260**	**40**	**311**

2023ರ ಮೊದಲ ಮೂರು ತಿಂಗಳ ಅಪಘಾತ ಮಾಹಿತಿ				
ಜನವರಿ	14	63	14	82
ಫೆಬ್ರವರಿ	12	58	12	75
ಮಾರ್ಚ್	11	47	11	69
ಒಟ್ಟು	**37**	**168**	**37**	**226**

ತಿರುವುಗಳು, ಸರ್ಕಲ್‌ಗಳು, ಬ್ಲಾಕ್ ಸ್ಪಾಟ್‌ಗಳಲ್ಲಿ ಬಹಳಷ್ಟು ಸುಧಾರಣೆ ಮಾಡಿದ ಮೇಲೂ ಅಪಘಾತಗಳು ಸಂಭವಿಸುತ್ತಿದ್ದು, ಸಾರ್ವಜನಿಕರು ನಿರ್ಲಕ್ಷ್ಯ, ಸಂಚಾರ ನಿಯಮ ಉಲ್ಲಂಘಿಸಿ ಅತೀ ವೇಗದಿಂದ ಚಾಲನೆ ಮಾಡುತ್ತಿರುವುದು ಅಪಘಾತಗಳು ಹೆಚ್ಚಾಗಲು ಕಾರಣ ಎಂದು ಅವರು ತಿಳಿಸಿದ್ದಾರೆ.

ಮೈಸೂರು ರೈಲ್ವೆ ವಿಭಾಗ ಸರಕು, ಪ್ರಯಾಣಿಕರ ಸಾಗಾಣೆ ಆದಾಯದಲ್ಲಿ ಹೊಸ ದಾಖಲೆ

ಮೈಸೂರು, ಏ.1(ಎಸ್‌ಬಿಡಿ)– ನೈಋತ್ಯ ರೈಲ್ವೆಯ ಮೈಸೂರು ವಿಭಾಗವು 2023–24ನೇ ಅವಧಿಯಲ್ಲಿ ಸರಕು ಮತ್ತು ಪ್ರಯಾಣಿಕರ ಸಾಗಾಣೆ ಆದಾಯ ಗಳಿಕೆಯಲ್ಲಿ ದಾಖಲೆ ಬರೆದಿದೆ.

ಸರಕು ಸಾಗಣೆಯಲ್ಲಿ 11.648 ದಶಲಕ್ಷ ಟನ್ ಅತ್ಯಧಿಕ ಲೋಡಿಂಗ್ ಸಾಧಿಸಿದ್ದು, ಇದು ಹಿಂದಿನ ವರ್ಷಕ್ಕಿಂತ ಶೇ.22ರಷ್ಟು ಹಾಗೂ ಪ್ರಸಕ್ತ ಸಾಲಿನ ಒಟ್ಟು ಗುರಿಯ ಶೇ.11.7ರಷ್ಟು ಹೆಚ್ಚಿದೆ. ಆರ್ಥಿಕ ವರ್ಷದ ಕಡೇ ದಿನ ಮಾ.31 ರಂದು ವರ್ಷದ ಅತ್ಯಧಿಕ 928 ವ್ಯಾಗನ್ ಲೋಡ್ ಆಗಿದ್ದು, ತಿಂಗಳಲ್ಲಿ 1.145 ದಶಲಕ್ಷ ಟನ್‌ಗಳನ್ನು ಲೋಡ್ ಮಾಡಲಾಗಿದೆ.

ಕಬ್ಬಿಣದ ಅದಿರು: ಈ ಬಾರಿ 9.325 ದಶಲಕ್ಷ ಟನ್‌ಗಳಷ್ಟು ಕಬ್ಬಿಣದ ಅದಿರನ್ನು ಲೋಡ್ ಮಾಡುವ ಮೂಲಕ, ಹಿಂದಿನ ವರ್ಷದ ಅತ್ಯಧಿಕ ದಾಖಲೆ(6.995 ದಶಲಕ್ಷ ಟನ್) ಪ್ರಮಾಣಕ್ಕಿಂತ ಶೇ.33.3ರಷ್ಟು ಹೆಚ್ಚು ಸಾಧನೆ ಮಾಡಲಾಗಿದೆ. ಮಾ.31 ರಂದು 696 ವ್ಯಾಗನ್ (12 ರೇಕ್‌ಗಳು), ತಿಂಗಳಲ್ಲಿ 0.939 ದಶಲಕ್ಷ ಟನ್ ಲೋಡ್ ಮಾಡಲಾಗಿದೆ.

ಆಟೋಮೊಬೈಲ್: 26 ರೇಕ್‌ಗಳ ಆಟೋಮೊಬೈಲ್‌ಗಳನ್ನು(ವಾಹನಗಳನ್ನು) ಲೋಡ್ ಮಾಡಿದ್ದು, ಇದು 2021–22 ಹಣಕಾಸು ವರ್ಷದಲ್ಲಿನ ಅತ್ಯಧಿಕ ದಾಖಲೆಯನ್ನು ಮೀರಿಸಿದೆ.

ದಾಖಲೆಗಳಿಕೆ ಸರಕು ಸಾಗಾಣೆ ವಿಭಾಗದಲ್ಲಿ ಒಟ್ಟು 993.51 ಕೋಟಿ ರೂ. ಗಳಿಸಿದ್ದು, ಹಿಂದಿನ ವರ್ಷಕ್ಕಿಂತ ಶೇ.10.8ರಷ್ಟು ಗಳಿಕೆ ಹೆಚ್ಚಾಗಿದೆ. ಪ್ರಯಾಣಿಕರ ಗಳಿಕೆ 413.73 ಕೋಟಿ ರೂ. ಆಗಿದ್ದು, ಹಿಂದಿನ ವರ್ಷಕ್ಕಿಂತ ಶೇ.9.3 ರಷ್ಟು ಮೀರಿಸಿದೆ. ಪಾರ್ಸೆಲ್ ಸೇವೆಯಿಂದಲೂ 10.65 ಕೋಟಿಗಳ ಗಳಿಕೆಯಾಗಿದ್ದು, ಹಿಂದಿಗಿಂತ ಶೇ.25.29 ರಷ್ಟು ಹೆಚ್ಚಳವಾಗಿದೆ. ಟಿಕೆಟ್ ತಪಾಸಣೆಯಿಂದ 8.06 ಕೋಟಿ ರೂ.(ಹಿಂದಿನ ವರ್ಷಕ್ಕಿಂತ ಶೇ.14.48 ಹೆಚ್ಚು) ಗಳಿಕೆಯಾಗಿದೆ.

ಸಂಘಟಿತ ಸಾಧನೆಗೆ ಶ್ಲಾಘನೆ: 2023–24ನೇ ಸಾಲಿನ ಸಾಧನೆ ಬಗ್ಗೆ ಪ್ರತಿಕ್ರಿಯಿಸಿರುವ ಮೈಸೂರ ವಿಭಾಗೀಯ ರೈಲ್ವೆ ವ್ಯವಸ್ಥಾಪಕಿ ಶ್ರೀಮತಿ ಶಿಲ್ಪಿ ಅಗರ್ವಾಲ್, ಎಲ್ಲಾ ಅಧಿಕಾರಿಗಳು, ಮೇಲ್ವಿಚಾರಕರು, ಸಿಬ್ಬಂದಿ ವರ್ಗದವರ ಸಮರ್ಪಣಾ ಮನೋಭಾವ ಮತ್ತು ಕಠಿಣ ಪರಿಶ್ರಮದಿಂದ ಹೊಸ ದಾಖಲೆ ಸಾಧ್ಯವಾಗಿದೆ ಲೋಡಿಂಗ್ ಗ್ರಾಹಕರು ಮತ್ತು ಪ್ರಯಾಣಿಕರು ಸೇರಿದಂತೆ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು. ಸಾಧನೆಗಳು, ಕಾರ್ಯಾಚರಣೆಯ ಶ್ರೇಷ್ಠತೆ, ಆದಾಯ ಹೆಚ್ಚಳ ಮತ್ತು ಗ್ರಾಹಕರ ತೃಪ್ತಿ ನಮ್ಮ ವಿಭಾಗದ ಅಚಲವಾದ ಬದ್ಧತೆಗೆ ಸಾಕ್ಷಿಯಾಗಿವೆ. ಸೂಕ್ತ ಮಾನದಂಡಗಳೊಂದಿಗೆ ರೈಲ್ವೆ ಕಾರ್ಯಾಚರಣೆ ಮುಂದುವರೆಸುವ ಮೂಲಕ ದೇಶದ ಅಭಿವೃದ್ಧಿಗೆ ಕೊಡುಗೆ ನೀಡಲು ನಮ್ಮ ವಿಭಾಗ ಸಮರ್ಪಿತವಾಗಿದೆ ಎಂದು ತಿಳಿಸಿದ್ದಾರೆ.

ವಿಭಾಗೀಯ ರೈಲ್ವೆ ವ್ಯವಸ್ಥಾಪಕರಾದ ಶ್ರೀಮತಿ ಶಿಲ್ಪಿ ಅಗರ್ವಾಲ್ ಅವರ ನೇತೃತ್ವದಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಸಮರ್ಪಿತ ಪ್ರಯತ್ನದ ಫಲವಾಗಿ ಮೈಸೂರು ವಿಭಾಗವು ಇತಿಹಾಸದಲ್ಲೇ ಗಮನಾರ್ಹ ಸಾಧನೆ ದಾಖಲಿಸಿದೆ. ಸರಕು ಸಾಗಾಣೆ ಮತ್ತು ಪ್ರಯಾಣಿಕರ ಗಳಿಕೆಯಲ್ಲಿ ಹಿಂದಿನ ದಾಖಲೆಗಳನ್ನು ಮುರಿಯುವುದರ ಜೊತೆಗೆ ಸೇವಾ ಬದ್ಧತೆ ಪ್ರದರ್ಶಿಸಿದಂತಾಗಿದೆ ಎಂದು ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು ಹಾಗೂ ಸಾರ್ವಜನಿಕ ಸಂಪರ್ಕಾಧಿಕಾರಿ ಜೆ. ಲೋಹಿತೇಶ್ವರ ಪ್ರಕಟಣೆಯಲ್ಲಿ ಸಂತಸ ವ್ಯಕ್ತಪಡಿಸಿದ್ದಾರೆ.



ಮುಂಬೈಗೆ ಮುಖಭಂಗ, ರಾಜಸ್ಥಾನ್‌ಗೆ ಹ್ಯಾಟ್ರಿಕ್ ಗೆಲುವು



ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ರಾಜಸ್ಥಾನ್	3	3	0	0	6
ಕೊಲ್ಕತ್ತಾ	2	2	0	0	4
ಚೆನ್ನೈ	3	2	1	0	4
ಗುಜರಾತ್	3	2	1	0	4
ಹೈದರಾಬಾದ್	3	1	2	0	2
ಲಕ್ನೋ	2	1	1	0	2
ಡೆಲ್ಲಿ	3	1	2	0	2
ಪಂಜಾಬ್	3	1	2	0	2
ಬೆಂಗಳೂರು	3	1	2	0	2
ಮುಂಬೈ	3	0	3	0	0

ಮುಂಬೈ, ಏ.1– ಟ್ರೆಂಟ್ ಬೋಲ್ಟ್ ಮತ್ತು ಯಜುವೇಂದ್ರ ಚಹಲ್ ಅವರ ಮಾರಕ ಬೌಲಿಂಗ್ ದಾಳಿ ಹಾಗೂ ರಿಯಾನ್ ಪರಾಗ್ ಅವರ ಭರ್ಜರಿ ಅರ್ಧಶತಕದ ನೆರವಿನಿಂದ ಮುಂಬೈ ಇಂಡಿಯನ್ಸ್ ವಿರುದ್ಧ ರಾಜಸ್ಥಾನ ರಾಯಲ್ಸ್ 6 ವಿಕೆಟ್‌ಗಳ ಜಯ ಸಾಧಿಸಿದೆ.

ಆ ಮೂಲಕ ರಾಜಸ್ಥಾನ ರಾಯಲ್ಸ್ ಟೂರ್ನಿಯಲ್ಲಿ ಹ್ಯಾಟ್ರಿಕ್ ಗೆಲುವು ಸಾಧಿಸಿ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದರೇ, ಮತ್ತೊಂದೆಡೆ ತವರಿನಲ್ಲೂ ಹೀನಾಯ ಸೋಲು ಅನುಭವಿಸಿದ ಮುಂಬೈ ಇಂಡಿಯನ್ಸ್ ಹ್ಯಾಟ್ರಿಕ್ ಸೋಲಿನೊಂದಿಗೆ ಅಂಕಪಟ್ಟಿಯಲ್ಲಿ ಕೊನೆ ಸ್ಥಾನದಲ್ಲಿದೆ.

ಇಲ್ಲಿನ ವಾಂಖೇಡೆ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಐದು ಬಾರಿಯ ಚಾಂಪಿಯನ್ ಮುಂಬೈ ಇಂಡಿಯನ್ಸ್ ನಿಗದಿತ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 125 ರನ್ ಗಳಿಸಿತು.

ಮೊದಲ ಓವರ್‌ನಲ್ಲೇ ಮುಂಬೈ ಇಂಡಿಯನ್ಸ್‌ಗೆ ಟ್ರೆಂಟ್ ಬೌಲ್ಟ್ ಶಾಕ್ ನೀಡಿದರು. ಪರಿಣಾಮ ರೋಹಿತ್ ಶರ್ಮಾ ಹಾಗೂ ನಮನ್ ಧೀರ್ ಶೂನ್ಯ ಸುತ್ತಿ ಪೆವಿಲಿಯನ್ ಸೇರಿದರು. ಇದರ ಬೆನ್ನಲ್ಲೇ ಡೆವಾಲ್ಡ್ ಬ್ರೆವೀಸ್ ಕೂಡಾ ಟ್ರೆಂಟ್ ಬೌಲ್ಟ್‌ಗೆ ವಿಕೆಟ್ ಒಪ್ಪಿಸಿ ಪೆವಿಲಿಯನ್ ಪೆರೇಡ್ ನಡೆಸಿದರು. ಇನ್ನು ಇಶಾನ್ ಕಿಶನ್ 2 ಬೌಂಡರಿ, 1 ಸಿಕ್ಸರ್ ಒಳಗೊಂಡ 16 ರನ್ ಗಳಿಸಿ ನಂದ್ರೆ ಬರ್ಗರ್‌ಗೆ ವಿಕೆಟ್ ಒಪ್ಪಿಸಿದರು. ಆಗ ಮುಂಬೈ ಇಂಡಿಯನ್ಸ್ ತಂಡದ ಮೊತ್ತ 4 ವಿಕೆಟ್ ನಷ್ಟಕ್ಕೆ 20 ರನ್ ಆಗಿತ್ತು. ಈ ವೇಳೆ ಜೊತೆಗೂಡಿದ ನಾಯಕ ಹಾರ್ದಿಕ್ ಪಾಂಡ್ಯ ಹಾಗೂ ತಿಲಕ್ ವರ್ಮಾ 5ನೇ ವಿಕೆಟ್‌ಗೆ 56 ರನ್ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಈ ಜೋಡಿ ಬೇರ್ಪಡಿಸುವಲ್ಲಿ ಯಜುವೇಂದ್ರ ಚಹಲ್ ಯಶಸ್ವಿಯಾದರು. ನಾಯಕ ಹಾರ್ದಿಕ್ ಪಾಂಡ್ಯ 34 ರನ್ ಹಾಗೂ ತಿಲಕ್ ವರ್ಮಾ 32 ರನ್ ಬಾರಿಸಿ ಚಹಲ್‌ಗೆ ವಿಕೆಟ್ ಒಪ್ಪಿಸಿದರು. ನಂತರ ಬಂದ ಟೀಮ್ ಡೇವಿಡ್ 17, ಗೆರಾಲ್ಡ್ ಕೋಟ್ಜಿ 4, ಚಾವ್ಲಾ 3, ಬೂಮ್ರಾ 8 ರನ್ ಗಳಿಸಿದರು. ರಾಜಸ್ಥಾನ ಪರ ಯಜುವೇಂದ್ರ ಚಹಲ್, ಟ್ರೆಂಟ್ ಬೋಲ್ಟ್ ತಲಾ 3, ನಂದ್ರೆ ಬರ್ಗರ್ 2 ಹಾಗೂ ಆವೇಶ್ ಖಾನ್ 1 ವಿಕೆಟ್ ಉರುಳಿಸಿದರು.

ಮುಂಬೈ ಇಂಡಿಯನ್ಸ್ ನೀಡಿದ 126 ರನ್‌ಗಳ ಸಾಧಾರಣ ಗೆಲುವಿನ ಗುರಿ ಬೆನ್ನತ್ತಿದ ರಾಜಸ್ಥಾನ್ ರಾಯಲ್ಸ್ 15.3 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 127 ರನ್ ಗಳಿಸಿ ಜಯ ಗಳಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಯಶಸ್ವಿ ಜೈಸ್ವಾಲ್ 10 ರನ್ ಗಳಿಸಿ ಬಹುಬೇಗ ನಿರ್ಗಮಿಸಿದರು. ನಂತರ ಬಂದ ನಾಯಕ ಸಂಜು ಸ್ಯಾಮ್ಸನ್ 3 ಬೌಂಡರಿ ಒಳಗೊಂಡ 12 ರನ್ ಗಳಿಸಿ ಔಟಾದರು. ಜೋಸ್ ಬಟ್ಲರ್ 13 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಬಳಿಕ ಕ್ರೀಸ್‌ಗೆ ಆಗಮಿಸಿದ 16 ರನ್ ಗಳಿಸಿ ಔಟಾದರು. ಒಂದೆಡೆ ವಿಕೆಟ್ ಬೀಳುತ್ತಿದ್ದರೂ ಸಮಯೋಚಿತ ಬ್ಯಾಟಿಂಗ್ ಪ್ರದರ್ಶನ ನೀಡಿದ ರಿಯಾನ್ ಪರಾಗ್ 39 ಎಸೆತಗಳಲ್ಲಿ 5 ಬೌಂಡರಿ, 3 ಸಿಕ್ಸರ್ ಒಳಗೊಂಡ 54 ರನ್ ಗಳಿಸಿ ತಂಡಕ್ಕೆ ಜಯ ತಂದು ಕೊಟ್ಟರು. ಮುಂಬೈ ಪರ ಆಕಾಶ್ ಮದ್ವಾಲ್ 3, ಕ್ವೆನಾ ಮಫಕಾ 1 ವಿಕೆಟ್ ಗಳಿಸಿದರು. ಟ್ರೆಂಟ್ ಬೋಲ್ಟ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಇಂದಿನ ಪಂದ್ಯ
ಬೆಂಗಳೂರು V/S ಲಕ್ನೋ
ಸ್ಥಳ: ಬೆಂಗಳೂರು, ಎಂ.ಚಿನ್ನಸ್ವಾಮಿ ಕ್ರೀಡಾಂಗಣ
ಸಮಯ: ಸಂಜೆ 7.30ಕ್ಕೆ

ಬಿಷಪ್ ಹೌಸ್‌ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿ

ಮನವಿ ಪತ್ರ ಸ್ವೀಕಾರ; ಕಾಂಗ್ರೆಸ್ ಅಭ್ಯರ್ಥಿ ಬೆಂಬಲಿಸಿದರೆ ನೆರವಿನ ಭರವಸೆ



ಮೈಸೂರು ಬಿಷಪ್ ಹೌಸ್(ಸನ್ಮಾರ್ಗಿ)ಗೆ ಭೇಟಿ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮೈಸೂರು ಧರ್ಮಪ್ರಾಂತ್ಯದ ಪ್ರೇಷಿತ ಆಡಳಿತಾಧಿಕಾರಿ ಡಾ.ಬರ್ನಾಡ್ ಮೊರಾಸ್ ಸ್ವಾಗತಿಸಿ, ಅಭಿನಂದಿಸಿ ಕೇಕ್ ತಿನಿಸುವ ಮೂಲಕ ಆತ್ಮೀಯತೆ ತೋರಿದರು. ಸಚಿವರಾದ ಡಾ.ಹೆಚ್.ಸಿ. ಮಹದೇವಪ್ಪ, ಕೆ.ವೆಂಕಟೇಶ್, ಶಾಸಕ ತನ್ವೀರ್ ಸೇಠ್, ಮಾಜಿ ಶಾಸಕ ಯತೀಂದ್ರ ಸಿದ್ದರಾಮಯ್ಯ, ಕ್ರೈಸ್ತ ಧರ್ಮಗುರು ಆಲ್‌ಫ್ರೆಡ್ ಜಾನ್ ಮೆಂಡೋಸಾ ಮತ್ತಿತರರಿದ್ದರು.

ಮೈಸೂರು, ಏ.1(ಎಂಕೆ)– ನಗರದ ಬನ್ನಿಮಂಟಪದಲ್ಲಿರುವ ನೂತನ ಬಿಷಪ್ ಹೌಸ್(ಸನ್ಮಾರ್ಗಿ)ಗೆ ಸೋಮವಾರ ಭೇಟಿ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮೈಸೂರು ಧರ್ಮಪ್ರಾಂತ್ಯದ ಪ್ರೇಷಿತ ಆಡಳಿತಾಧಿಕಾರಿ ಡಾ.ಬರ್ನಾಡ್ ಮೊರಾಸ್ ಸೇರಿದಂತೆ ಕ್ರೈಸ್ತ ಧರ್ಮಗುರುಗಳು ಅತ್ಯಂತ ಆತ್ಮೀಯವಾಗಿ ಬರಮಾಡಿಕೊಂಡರಲ್ಲದೆ ಸಮುದಾಯದ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಮನವಿ ಮಾಡಿದರು.

ಈ ವೇಳೆ ಮೈಸೂರು ಧರ್ಮಪ್ರಾಂತ್ಯದ ಪ್ರೇಷಿತ ಆಡಳಿತಾಧಿಕಾರಿ ಡಾ.ಬರ್ನಾಡ್ ಮೊರಾಸ್, ಜಾತಿ–ಮತ ಭೇದವಿಲ್ಲದೆ ಪಂಚ ಗ್ಯಾರಂಟಿಗಳು ಸೇರಿ ಅನೇಕ ಭಾಗ್ಯಗಳ ಮೂಲಕ ಎಲ್ಲರ ಜೀವನವನ್ನು ಸಮೃದ್ಧಗೊಳಿಸಿ ದೇಶದಲ್ಲಿಯೇ ಮಾದರಿ ರಾಜ್ಯವನ್ನಾಗಿ ಮಾಡುತ್ತಿರುವ ಹಾಗೂ ಮತಾಂತರ ನಿಷೇಧ ಕಾಯ್ದೆಯನ್ನು ರದ್ದುಗೊಳಿಸಿ ಸಂವಿಧಾನದ ಮೂಲಭೂತ ಹಕ್ಕನ್ನು ಎತ್ತಿ ಹಿಡಿಯುವ ಭರವಸೆ ನೀಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕ್ರೈಸ್ತ ಸಮುದಾಯ ಕೃತಜ್ಞವಾಗಿದ್ದು, ಮುಂಬರುವ ಚುನಾವಣೆಯಲ್ಲಿ ಯಶಸ್ಸು ಸಿಗಲೆಂದು ಪ್ರಾರ್ಥಿಸುತ್ತೇವೆ ಎಂದು ಮನವಿ ಪತ್ರದ ಮೂಲಕ ಧನ್ಯವಾದ ತಿಳಿಸಿದರು.

ಆಧುನಿಕತೆಯ ಕಾಲಘಟ್ಟದಲ್ಲಿಯೂ ಜಗತ್ತೇ ತಿರುಗಿ ನೋಡುವಂತೆ ಕನ್ನಡ ನಾಡಿನ ಸರ್ಕಾರದ ಚುಕ್ಕಾಣಿ ಹಿಡಿದು ಭವ್ಯ ಭವಿಷ್ಯದ ಕಡೆಗೆ ಮುನ್ನಡೆಸುತ್ತಿರುವ ದೇಶದ ಆದರ್ಶ ರಾಜಕಾರಣಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಕಾರ್ಯವೈಖರಿಯಿಂದಲೇ ರಾಜ್ಯ ಮಾತ್ರವಲ್ಲದೇ ದೇಶದಾದ್ಯಂತ ಪ್ರಖ್ಯಾತಿಯಾಗಿದ್ದಾರೆ. ಐದು ಗ್ಯಾರಂಟಿಗಳ ಮೂಲಕ ಮಕ್ಕಳು, ಮಹಿಳೆಯರು, ವಿಧವೆಯರು, ಅಂಗವಿಕಲರು, ಬಡವರು ಸೇರಿದಂತೆ ಸಮಾಜದ ಎಲ್ಲರ ಏಳಿಗೆಗಾಗಿ ದುಡಿಯುತ್ತಿದ್ದಾರೆ. ಕ್ರೈಸ್ತರ ಸಮಾಜ ಸೇವಾ ಕಾರ್ಯಗಳಿಗೆ ಉತ್ತೇಜನ ನೀಡುವ ದೃಷ್ಟಿಯಿಂದ ಅಭಿವೃದ್ಧಿ ಪ್ರಾಧಿಕಾರ ಸ್ಥಾಪನೆಗೆ ಬಜೆಟ್‌ನಲ್ಲಿ 200 ಕೋಟಿ ರೂ. ನೀಡಿರುವುದನ್ನು ಕ್ರೈಸ್ತ ಸಮುದಾಯ ತುಂಬು ಹೃದಯದಿಂದ ಪ್ರಶಂಸಿಸುತ್ತದೆ ಎಂದರು.

ಅಲ್ಪಸಂಖ್ಯಾತ ಸಮುದಾಯಗಳು ನಡೆಸುತ್ತಿರುವ ವಿದ್ಯಾಸಂಸ್ಥೆಗಳಲ್ಲಿ ಶೇ.25 ರಿಂದ 50 ರಷ್ಟು ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಇರಬೇಕು ಎಂಬ ಷರತ್ತು ತೆಗೆದುಹಾಕಿ ಎಲ್ಲಾ ಅಲ್ಪಸಂಖ್ಯಾತರು ಶೈಕ್ಷಣಿಕ ಸಂಸ್ಥೆಗಳನ್ನು ನಡೆಸಲು ಸಹಾಯ ಮಾಡಿದ್ದಕ್ಕೂ ಕೃತಜ್ಞರಾಗಿದ್ದೇವೆ. ಹಾಗೆಯೇ ಸಂತ ಫಿಲೋಮಿನಾ ಕಾಲೇಜಿಗೆ ಅಲ್ಪಸಂಖ್ಯಾತ ವಿದ್ಯಾಸಂಸ್ಥೆಯ ಪ್ರಮಾಣ ಪತ್ರ ಕೊಡಿಸಬೇಕು, ಖಾಲಿ ಇರುವ ಬೋಧಕ ಹುದ್ದೆಗಳಿಗೆ ಅನುಮೋದನೆ, ವಿದ್ಯಾಸಂಸ್ಥೆಗಳ ಮೇಲಿನ ಆಸ್ತಿ ತೆರಿಗೆ ಕಡಿಮೆ ಮಾಡಬೇಕು. 30 ವರ್ಷಗಳ ಹಿಂದೆ ಬಡವರಿಗಾಗಿ ಕೈಗೊಂಡ ಕ್ಯಾಥಿಡ್ರಲ್ ಹೌಸಿಂಗ್ ಯೋಜನೆಗಾಗಿ ಕೆಸರೆ ಭಾಗದ 106 ಎಕರೆ ಭೂಮಿಗೆ ಪರ್ಯಾಯವಾಗಿ ಶೇ.50ರ ಅನುಪಾತದಲ್ಲಿ ಭೂ ಸ್ವಾಧೀನ ಕಾಯ್ದೆಯ ರೀತಿಯಲ್ಲಿ ಕಾನೂನಾತ್ಮಕವಾಗಿ ನೀಡಲಾಗಿದ್ದು, ಮುಡಾದಿಂದ 2.5 ಎಕರೆ ಭೂಮಿಯನ್ನು ಬಿಡುಗಡೆ ಮಾಡಲಾಗಿದೆ. ಉಳಿದ ಭೂಮಿಯನ್ನು ಬಿಡುಗಡೆ ಮಾಡಲು ಆದೇಶ ಮಾಡಬೇಕು. ಇದರಿಂದ 1462 ಕುಟುಂಬಗಳಿಗೆ ಗೃಹ ಸೌಲಭ್ಯ ದೊರಕಲಿದೆ ಹಾಗೆಯೇ ಸೆಂಟ್ ಫಿಲೋಮಿನಾ ಚರ್ಚ್‌ಗೆ ಸ್ಟೈನ್ ಗ್ಲಾಸ್ ಅಳವಡಿಸುವ ಎರಡನೇ ಹಂತದ ಯೋಜನೆಯನ್ನು ಸಿದ್ಧಪಡಿಸಿದ್ದು, ಅತೀ ಶೀಘ್ರದಲ್ಲಿ ಅನುದಾನ ಬಿಡುಗಡೆ ಮಾಡಬೇಕಾಗಿ ಮನವಿ ಮಾಡಿದರು.

ಎಂ.ಲಕ್ಷ್ಮಣ್‌ಗೆ ಬೆಂಬಲ ನೀಡಿ, ಎಲ್ಲವೂ ಬಗೆಹರಿಸಲಿದೆ: ಮನವಿ ಆಲಿಸಿದ ಸಿಎಂ ಸಿದ್ದರಾಮಯ್ಯ, ಲೋಕಸಭಾ ಚುನಾವಣೆ ಬಳಿಕ ನಿಮ್ಮ ಎಲ್ಲಾ ಮನವಿಗಳನ್ನು ಸಕಾರಾತ್ಮಕವಾಗಿ ಪೂರೈಸಲಾಗುವುದು. ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ನಮ್ಮ(ಕಾಂಗ್ರೆಸ್) ಅಭ್ಯರ್ಥಿ ಎಂ. ಲಕ್ಷ್ಮಣ್‌ಗೆ ಬೆಂಬಲ ನೀಡಿ ಎಂದರು. ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ, ಕೆ.ವೆಂಕಟೇಶ್, ಶಾಸಕ ತನ್ವೀರ್ ಸೇಠ್, ಮಾಜಿ ಶಾಸಕ ಯತೀಂದ್ರ ಸಿದ್ದರಾಮಯ್ಯ, ಕ್ರೈಸ್ತ ಧರ್ಮಗುರು ಆಲ್‌ಫ್ರೆಡ್ ಜಾನ್ ಮೆಂಡೋಸಾ ಸೇರಿದಂತೆ ಕ್ರೈಸ್ತ ಧರ್ಮಗುರುಗಳ ಹಾಗೂ ಕಾಂಗ್ರೆಸ್ ಮುಖಂಡರು ಉಪಸ್ಥಿತರಿದ್ದರು.

ಮೈಸೂರು ಸಾತಗಳ್ಳಿಯಲ್ಲಿ ಮನೆಯ ಬಾಗಿಲು ಮೀಟಿ ಭಾರಿ ಪ್ರಮಾಣದ ಚಿನ್ನಾಭರಣ, ಬೆಳ್ಳಿ ಪದಾರ್ಥ, ನಗದು ಕಳ್ಳತನ

- ಜಾತ್ರೆಗಾಗಿ ಸ್ವಂತ ಸ್ಥಳ ಮಧುಗಿರಿಗೆ ತೆರಳಿದ್ದ ಕುಟುಂಬ
- ಪರಿಶೀಲನೆ ನಂತರ ಕಳವಾಗಿರುವ ಮಾಲಿನ ನಿಖರ ಮಾಹಿತಿ ಲಭ್ಯ

ಮೈಸೂರು, ಏ.1(ಎಸ್‌ಬಿಡಿ)– ಚಿನ್ನಾಭರಣ ವ್ಯಾಪಾರಿ ಮನೆಯ ಮುಂಬಾಗಿಲನ್ನು ಮೀಟಿ ನಗದು, ಚಿನ್ನಾಭರಣ ಹಾಗೂ ಬೆಳ್ಳಿ ಪದಾರ್ಥಗಳನ್ನು ದೋಚಿರುವ ಬಗ್ಗೆ ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ಸಾತಗಳ್ಳಿ, ಬಿ ವಲಯ(ವಿಟಿಯು ಎದುರು)ದ ನಿವಾಸಿ ವಿ.ನಾಗರಾಜು ಪೊಲೀಸರಿಗೆ ಭಾನುವಾರ ದೂರು ನೀಡಿದ್ದು, ಕುಟುಂಬ ಸಮೇತ ಸ್ವಂತ ಊರಾದ ತುಮಕೂರು ಜಿಲ್ಲೆ, ಮಧುಗಿರಿಗೆ ಹೋಗಿದ್ದಾಗ ಯಾರೋ ಕಳ್ಳರು ಮನೆ ಮುಂಬಾಗಿಲು ಮೀಟಿ, ವ್ಯಾಪಾರಕ್ಕೆಂದು ಇಟ್ಟಿದ್ದ ಚಿನ್ನಾಭರಣ, ಬೆಳ್ಳಿ ಪದಾರ್ಥಗಳು ಮತ್ತು ಹಣವನ್ನು ದೋಚಿದ್ದಾರೆ. ಆದರೆ ಇವುಗಳ ಪ್ರಮಾಣ ಹಾಗೂ ಮೌಲ್ಯ ಎಷ್ಟೆಂದು ಪರಿಶೀಲಿಸಬೇಕಿದೆ ಎಂದು ತಿಳಿಸಿದ್ದಾರೆ.

ಮನೆಗೆ ಹೊಂದಿಕೊಂಡಿರುವ ಮಳಿಗೆಯಲ್ಲಿ ಚಿನ್ನ–ಬೆಳ್ಳಿ ವ್ಯಾಪಾರ ಮಾಡಿಕೊಂಡಿದ್ದೇನೆ. ದಂಡಿನ ಮಾರಮ್ಮ ಜಾತ್ರೆ ಇದ್ದ ಕಾರಣ ಮಾ.22ರಂದು ಮಧ್ಯಾಹ್ನ ಕಾರಿನಲ್ಲಿ ಕುಟುಂಬ ಸಮೇತ ಊರಿಗೆ ಹೋಗಿದ್ದೆ. ಆದರೆ ನನ್ನ ತಾಯಿಯ ವೈದ್ಯಕೀಯ ದಾಖಲೆಗಳನ್ನು ಬಿಟ್ಟು ಹೋಗಿದ್ದರಿಂದ ಮಾ.26ರಂದು ರಾತ್ರಿ ಬಸ್ಸಿನಲ್ಲಿ ಮೈಸೂರಿಗೆ ಬಂದು, ದಾಖಲೆಗಳನ್ನು ತೆಗೆದುಕೊಂಡು ಬಾಗಿಲು ಲಾಕ್ ಮಾಡಿಕೊಂಡು ತಕ್ಷಣ ಮತ್ತೊಂದು ಕಾರಿನಲ್ಲಿ ಊರಿಗೆ ಹೊರಟೆ.

ಮರುದಿನ(ಮಾ.27) ಮನೆಗೆ ಅಳವಡಿಸಿರುವ ಸಿಸಿ ಕ್ಯಾಮರಾ ಫುಟೇಜ್‌ಗಳನ್ನು ಮೊಬೈಲ್‌ನಲ್ಲಿ ಪರಿಶೀಲಿಸಿದಾಗ ಅದು



ಓಪನ್ ಆಗಲಿಲ್ಲ. ನೆಟ್‌ವರ್ಕ್ ಸಮಸ್ಯೆಯಿಂದ ಹೀಗಾಗಿರಬಹುದು ಎಂದು ಸುಮ್ಮನಾದೆ. ಮಾ.30ರಂದು ನನ್ನ ಪತ್ನಿ, ಮನೆಯ ಕೆಲಸದವರಾದ ರತ್ನಮ್ಮ ಅವರಿಗೆ ಕರೆ ಮಾಡಿ, ನಮ್ಮ ಮನೆ ಮುಂದಿನ ಗಿಡಗಳಿಗೆ ನೀರು ಹಾಕುವಂತೆ ತಿಳಿಸಿದರು. ರತ್ನಮ್ಮ ಗಿಡಗಳಿಗೆ ನೀರು ಹಾಕಲೆಂದು ನಮ್ಮ ಮನೆ ಬಳಿ ಹೋದಾಗ ಮುಂಬಾಗಿಲು ತೆರೆದಿರುವುದನ್ನು ಗಮನಿಸಿ ನನ್ನ ಪತ್ನಿಗೆ ಕರೆ ಮಾಡಿ 'ನೀವು ಮನೆಯೊಳಗೆ ಇದ್ದೀರಾ, ಬಾಗಿಲು ತೆರೆದಿದೆಯಲ್ಲಾ' ಎಂದು ಕೇಳಿದರು.

ಈ ವಿಷಯವನ್ನು ನನಗೆ ತಿಳಿಸಿದಾಕ್ಷಣ ಸ್ನೇಹಿತ ರಕ್ಷಿತ್‌ಗೆ ಕರೆ ಮಾಡಿ ನಮ್ಮ ಮನೆ ಬಳಿ ಹೋಗಿ ನೋಡುವಂತೆ ಹೇಳಿದೆ. ಆತನೂ ಕೂಡ ಮನೆಯ ಬಾಗಿಲು ತೆರೆದಿದೆ ಎಂದು ಹೇಳಿದ. ಕೂಡಲೇ ಮಧುಗಿರಿಯಿಂದ ಮೈಸೂರಿಗೆ ಬಂದು ನೋಡಿದಾಗ ಮನೆಯ ಬಾಗಿಲು ಮೀಟಿರುವುದು ಕಂಡುಬಂತು. ವಸ್ತುಗಳೆಲ್ಲಾ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಮನೆಯಲ್ಲಿ ಸ್ವಲ್ಪ ಹಣ, ವ್ಯಾಪಾರಕ್ಕೆಂದು ಇಟ್ಟಿದ್ದ ಚಿನ್ನ–ಬೆಳ್ಳಿ ಆಭರಣಗಳಿದ್ದವು. ಪರಿಶೀಲಿಸಿ, ಕಳ್ಳತನವಾಗಿರುವ ಆಭರಣ ಎಷ್ಟೆಂದು ತಿಳಿಯಬೇಕಿದೆ ಎಂದು ನಾಗರಾಜು ದೂರಿನಲ್ಲಿ ತಿಳಿಸಿದ್ದಾರೆ.

ಪೊಲೀಸ್ ಅಧಿಕಾರಿಗಳು, ಶ್ವಾನದಳ ಹಾಗೂ ಬೆರಳಚ್ಚು ತಜ್ಞರ ತಂಡ ಪರಿಶೀಲನೆ ನಡೆಸಿದ್ದು, ಈ ಸಂಬಂಧ ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಪ್ರಕರಣ ಸಂಬಂಧ ಇನ್ಸ್‌ಪೆಕ್ಟರ್ ಮುದ್ದು ಮಹದೇವ್ ತನಿಖೆ ನಡೆಸುತ್ತಿದ್ದಾರೆ ಎಂದು ಡಿವೈಎಸ್ಪಿ ಅಬ್ದುಲ್ ಕರೀಂ ರಾವುತರ್ ಹೇಳಿದ್ದಾರೆ.

2 ಕೆಜಿ ಚಿನ್ನ, 25 ಕೆಜಿ ಬೆಳ್ಳಿ ಕಳ್ಳತನ?

ಎರಡು ಬೈಕ್‌ಗಳಲ್ಲಿ ದುಷ್ಕರ್ಮಿಗಳು ಬಂದು ಕಳ್ಳತನ ಮಾಡಿದ್ದಾರೆ. ಸುಮಾರು 2 ಕೆ.ಜಿ.ಗೂ ಹೆಚ್ಚು ಚಿನ್ನ, 25 ಕೆ.ಜಿ.ಯಷ್ಟು ಬೆಳ್ಳಿ ವಸ್ತುಗಳನ್ನು ದೋಚಿದ್ದಾರೆ. ಗುರುತು ಸಿಗಬಾರದೆಂದು ಸಿಸಿ ಟಿವಿಯ ಡಿವಿಆರ್ ಕೂಡ ಕದ್ದೊಯ್ದಿದ್ದಾರೆ ಎಂದು ನಾಗರಾಜ್ ಪೊಲೀಸರಿಗೆ ತಿಳಿಸಿರುವುದಾಗಿ ಮೂಲಗಳಿಂದ ತಿಳಿದುಬಂದಿದೆ. ಈ ಹಿಂದೆ ಮನೆ ಬಾಡಿಗೆ ಪಡೆದಿದ್ದ ಮಹಿಳೆಯೊಂದಿಗೆ ಗಲಾಟೆಯಾಗಿತ್ತು. ಆ ಮಹಿಳೆ ಮೇಲೂ ನಾಗರಾಜ್ ಅನುಮಾನ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ ಆದರೆ ಈ ಬಗ್ಗೆ ಪೊಲೀಸರು ಸ್ಪಷ್ಟಪಡಿಸಿಲ್ಲ. ತನಿಖೆ ನಂತರವೇ ನಿಖರ ಮಾಹಿತಿ ಲಭ್ಯವಾಗಲಿದೆ ಎಂದಿದ್ದಾರೆ.

ವಿ.ಶ್ರೀನಿವಾಸ ಪ್ರಸಾದ್ ಸಹೋದರ ವಿ.ರಾಮಸ್ವಾಮಿ ನೇತೃತ್ವದಲ್ಲಿ

ಇಂದು ಪ್ರಸಾದ್ ಅಭಿಮಾನಿಗಳು, ಹಿತೈಷಿಗಳು, ಬೆಂಬಲಿಗರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆ

ಮೈಸೂರು,ಏ.1(ಪಿಎಂ)– ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರ ಸಹೋದರ ವಿ.ರಾಮಸ್ವಾಮಿ ನೇತೃತ್ವದಲ್ಲಿ ವಿ.ಶ್ರೀನಿವಾಸ ಪ್ರಸಾದ್ ಅಭಿಮಾನಿಗಳು, ವಿ.ರಾಮಸ್ವಾಮಿ ಅಭಿಮಾನಿಗಳು, ಹಿತೈಷಿಗಳು, ಬೆಂಬಲಿಗರು ಹಾಗೂ ಬಿಜೆಪಿಯಲ್ಲಿನ ಹಲವು ಮುಖಂಡರು, ಪದಾಧಿಕಾರಿಗಳು ಏ.2ರಂದು ಮಧ್ಯಾಹ್ನ 3ಕ್ಕೆ ಕಾಂಗ್ರೆಸ್ ಪಕ್ಷ ಸೇರ್ಪಡೆಯಾಗಲಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್, ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ ಹಾಗೂ ಶಾಸಕರ ಸಮ್ಮುಖದಲ್ಲಿ ಪಕ್ಷ ಸೇರ್ಪಡೆ ಕಾರ್ಯಕ್ರಮ ನಡೆಯಲಿದೆ.

ವಿ.ರಾಮಸ್ವಾಮಿ ಅವರ ಪುತ್ರ ಭರತ್ ರಾಮಸ್ವಾಮಿ, ಚಾಮರಾಜನಗರ ಜಿಪಂ ಮಾಜಿ ಉಪಾಧ್ಯಕ್ಷ ಶಿವಕುಮಾರ್, ಮುಡಾ ಮಾಜಿ ಸದಸ್ಯ ಸಿ.ಜಿ.ಶಿವಕುಮಾರ್, ಮೈಸೂರು ಜಿಪಂ ಮಾಜಿ ಉಪಾಧ್ಯಕ್ಷ ಹೆಚ್.ಸುಬ್ಬಯ್ಯ, ಮುಖಂಡರಾದ ಹೊರಳವಾಡಿ ನಂಜುಂಡಸ್ವಾಮಿ, ಪ್ರೇಮಕುಮಾರಿ, ಚಂದ್ರಶೇಖರ್ ಸಣ್ಣಯ್ಯ, ಎಂ.ಚಂದ್ರಶೇಖರ್, ಬಸವರಾಜು, ಪ್ರಸನ್ನ, ಎಂ.ಸಂತೋಷ್, ಶಾಂತರಾಮ್ ಶೆಟ್ಟಿ, ಮದನ್, ರಮೇಶ್, ಸಿದ್ದಲಿಂಗ, ವೆಂಕಟೇಶ್, ರವಿ, ನಾಗೇಶ್, ಎಂ.ಹೆಚ್. ಸುರೇಶ್ ಕುಮಾರ್, ಸಿ.ಶ್ರೀನಿವಾಸ್, ಕೆಮಹೇಶ್, ಕೆ.ಶೇಖರ್, ಸೋಮಣ್ಣ, ರಘು, ಮಹದೇವ್, ಸಿದ್ದಪ್ಪ ಶಿವರಾಜು ಸಿದ್ದಯ್ಯನ ಪುರ, ನಿಧಿ ಸುರೇಶ್, ಬಸವರಾಜು, ಎಂ.ಕೆ. ಪುಟ್ಟಸ್ವಾಮಿ, ಮಹದೇವ್, ಮೋಹನ್, ಗುರು, ಕುಮಾರ್, ನಟೇಶ್, ರಮೇಶ್, ಅಹಿಂದಾ ರಕ್ಷಣಾ ವೇದಿಕೆ ಮುಖಂಡರಾದ ಕುಮಾರ್, ಕೆ.ನಾಗರಾಜು (ನಾಗ), ಆದಿ ಕರ್ನಾಟಕ ಅಭಿವೃದ್ಧಿ ಸಂಘದ ಮುಖಂಡ ರಾಮಕೃಷ್ಣ ಸೇರಿದಂತೆ ಇನ್ನೂ ಅಪಾರ ಸಂಖ್ಯೆಯಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ಮುಖಂಡರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗುತ್ತಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಲೋಕಸಭೆ ಚುನಾವಣೆ: ಸೋಮಣ್ಣ, ಮೋಹನ್ ನಾಮಪತ್ರ ಸಲ್ಲಿಕೆ

ಬೆಂಗಳೂರು: ಬೆಂಗಳೂರು ಕೇಂದ್ರ ಲೋಕಸಭೆ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಪಿ.ಸಿ.ಮೋಹನ್ ಅವರು ನಾಮಪತ್ರ ಸಲ್ಲಿಸಿದರು. ಮಾಜಿ ಸಿಎಂ ಯಡಿಯೂರಪ್ಪ ವಿಪಕ್ಷ ನಾಯಕ ಆರ್.ಅಶೋಕ್, ಮಾಜಿ ಸಚಿವ ಅರವಿಂದ್ ಲಿಂಬಾವಳಿ, ಶಾಸಕ ಸುರೇಶ್ ಕುಮಾರ್ ಅವರು ಪಿಸಿ ಮೋಹನ್‌ಗೆ ಸಾಥ್ ನೀಡಿದರು. ತುಮಕೂರಿನಲ್ಲಿ ವಿ.ಸೋಮಣ್ಣ ಅವರು ಕೂಡ ಉಮೇದುವಾರಿಕೆ ಸಲ್ಲಿಸಿದರು. ಶಾಸಕರಾದ ಜ್ಯೋತಿ ಗಣೇಶ್, ಸುರೇಶ್ ಗೌಡ, ಸುರೇಶ್ ಬಾಬು, ಮಾಜಿ ಶಾಸಕ ಸುಧಾಕರ್ ಲಾಲ್, ಬಿಜೆಪಿ ಮುಖಂಡ ಅನಿಲ್ ಕುಮಾರ್ ಅವರೊಂದಿಗೆ ತುಮಕೂರು ಜಿಲ್ಲಾಧಿಕಾರಿ ಕಚೇರಿಗೆ ತೆರಳಿದ ಅವರು ನಾಮಪತ್ರ ಸಲ್ಲಿಸಿದರು.

ಸಂಕಷ್ಟದಲ್ಲಿರುವವರಿಗೆ ನೆರವಾಗುವ ಮೂಲಕ ರಾಮ ರಾಜ್ಯ ನಿರ್ಮಿಸೋಣ


- ಉಡುಪಿ ಪೇಜಾವರ ಶ್ರೀಗಳ ಕರೆ
- ವಿಶೇಷ ಮಕ್ಕಳ ಶಾಲಾ ಕಟ್ಟಡದ ಉದ್ಘಾಟನೆ

ಮೈಸೂರು,ಏ.1(ಪಿಎಂ)– ಅಯೋಧ್ಯೆಯಲ್ಲಿ ಶ್ರೀರಾಮನಿಗೆ ಮಂದಿರ ನಿರ್ಮಾಣವಾಗಲು ನಾವೆಲ್ಲರೂ ಕೈಜೋಡಿಸಿದ್ದೇವೆ. ಅಂತೆಯೇ ಸಂಕಷ್ಟದಲ್ಲಿರುವವರಿಗೆ ಸಹಾಯಹಸ್ತ ನೀಡುವ ಮೂಲಕ ರಾಮ ರಾಜ್ಯ ನಿರ್ಮಾಣಕ್ಕೂ ನಾವೆಲ್ಲರೂ ಕೈಜೋಡಿಸಬೇಕಿದೆ ಎಂದು ಅಯೋಧ್ಯ ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ನ ಟ್ರಸ್ಟಿಗಳೂ ಆದ ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಹೇಳಿದರು.

ಮೈಸೂರಿನ ಆರ್‌ಟಿ ನಗರದ ದ್ವಾರಕನಗರದ ಸಿಎ ನಿವೇಶನದಲ್ಲಿ ರೋಟರಿ ಮಿಡ್‌ಟೌನ್ ವತಿಯಿಂದ ನಿರ್ಮಿಸಿರುವ 'ಮಾನಸ ಕುಟೀರ' ವಿಶೇಷ ಮಕ್ಕಳ ಶಾಲಾ (ಬುದ್ಧಿಮಾಂದ್ಯ ಮಕ್ಕಳ ಶಾಲೆ) ಕಟ್ಟಡದ ಉದ್ಘಾಟನಾ ಸಮಾರಂಭದಲ್ಲಿ ಸೋಮವಾರ ಸಾನ್ನಿಧ್ಯ ವಹಿಸಿ ಮಾತನಾಡಿದರು.

ರಾಮಾಯಣವನ್ನು ಒಮ್ಮೆ ಓದಿದರೆ ರಾಮನ ಸದ್ಗುಣಗಳನ್ನು ಕಾಣಬಹುದು. ಇಂದು ಅಯೋಧ್ಯೆಯ ರಾಮಮಂದಿರಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಆಗಿದ್ದು, ಆ ಮೂಲಕ ರಾಮ ರಾಜ್ಯ ನಿರ್ಮಾಣ ಆದಂತೆಯೂ ಆಗಿದೆ. ರಾಮನ ಪೂಜೆಯನ್ನು ನಾವು ನಿತ್ಯ ಮಾಡಬೇಕು. ರಾಮ ಸಂತಸವಾಗಿರಬೇಕೆಂದರೆ ಸಮಾಜದಲ್ಲಿ ಸಂಕಷ್ಟದಲ್ಲಿರುವವರಿಗೆ ಸಹಾಯ ಮಾಡಬೇಕು. ಅದು ರಾಮ ದೇವರಿಗೆ ಸಂತಸ ನೀಡುವ ಪೂಜೆಯೇ ಆಗಲಿದೆ. ಆಗಲೇ ಪರಿಪೂರ್ಣ ರಾಮ ರಾಜ್ಯ ಆಗಲೂ ಸಾಧ್ಯ ಎಂದು ತಿಳಿಸಿದರು.

ಭಗವಂತ ನಮಗೆ ಸರ್ವಶಕ್ತವಾದ ಈ ದೇಹ ಮತ್ತು ಬುದ್ಧಿಯನ್ನು ಕೊಟ್ಟಿರುವುದು ಅತ್ಯಂತ ದೊಡ್ಡ ಭಾಗ್ಯ. ಇಂತಹ ಭಾಗ್ಯದಿಂದ ವಂಚಿತರಾದವರಿಗೆ ಸಾಧ್ಯವಿರುವ ಸಹಾಯ ಮಾಡಿದರೆ ಅದು ನೇರವಾಗಿ ದೇವರಿಗೆ ಸಲ್ಲುವಂತಹ ಪೂಜೆಯೇ ಆಗಲಿದೆ ಎಂದರು.



ಮೈಸೂರಿನ ಆರ್‌ಟಿ ನಗರದ ದ್ವಾರಕನಗರದ ಸಿಎ ನಿವೇಶನದಲ್ಲಿ ರೋಟರಿ ಮಿಡ್‌ಟೌನ್ ವತಿಯಿಂದ ನಿರ್ಮಿಸಿರುವ 'ಮಾನಸ ಕುಟೀರ' ವಿಶೇಷ ಮಕ್ಕಳ ಶಾಲಾ ಕಟ್ಟಡವನ್ನು ಪೇಜಾವರ ಶ್ರೀಗಳ ಸಾನ್ನಿಧ್ಯದಲ್ಲಿ ಸೋಮವಾರ ಉದ್ಘಾಟಿಸಲಾಯಿತು.

ರೋಟರಿ ಮಿಡ್‌ಟೌನ್ ಸದಸ್ಯರು ಒಂದಾಗಿ ವಿಶೇಷ ಮಕ್ಕಳ ಶಾಲೆಯ ನಿರ್ಮಾಣ ಕಾರ್ಯವನ್ನು ತಪಸ್ಸಿನ ರೂಪದಲ್ಲಿ ಪೂರ್ಣಗೊಳಿಸಿದ್ದು, ಇದು ದೇವರಿಗೆ ಮಾಡಿರುವ ಅತ್ಯಂತ ದೊಡ್ಡ ಪೂಜೆ ಎಂದೇ ನಾವು ಭಾವಿಸಿದ್ದೇವೆ. ಈ ಕಾರ್ಯದಲ್ಲಿ ಕೈಜೋಡಿಸಿರುವ ಎಲ್ಲರಿಗೂ ಒಳ್ಳೆಯದಾಗಲಿ. ಇಲ್ಲಿ ಸೇರುವ ಮಕ್ಕಳಿಗೂ ಒಳ್ಳೆಯದಾಗಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ. ಉಡುಪಿಯಲ್ಲಿ ನಾವೂ ಇಂತಹ ಸಂಸ್ಥೆಯನ್ನು ಹಲವು ವರ್ಷಗಳಿಂದ ನಡೆಸುತ್ತಿದ್ದೇವೆ. ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ತುಂಬ ಸಂತಸ ಉಂಟಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ರೋಟರಿ ಜಿಲ್ಲೆ 3181ರ ಜಿಲ್ಲಾ ಗವರ್ನರ್ ಹೆಚ್.ಆರ್.ಕೇಶವ ಮಾತನಾಡಿ, ರೋಟರಿ ಮೈಸೂರು ಮಿಡ್‌ಟೌನ್ ಸಮಾಜಕ್ಕೆ ನೆರವಾಗುವಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿದೆ. ರೋಟರಿ ಕ್ಲಬ್‌ಗಳಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಕ್ಲಬ್‌ಗಳಲ್ಲಿ ಇದೂ ಒಂದಾಗಿದೆ. ರೋಟರಿ ಮೈಸೂರು ಮಿಡ್‌ಟೌನ್ ಪ್ರತಿವರ್ಷ ವಿಶೇಷ ಮಕ್ಕಳಿಗಾಗಿ ಬಾಂಧವ್ಯ ಎಂಬ ಕಾರ್ಯಕ್ರಮ ನಡೆಸುತ್ತಿದೆ. 'ಕ್ರಿಯೇಟ್ ಹೋಪ್ ಇನ್ ದ ವರ್ಲ್ಡ್' ಎಂಬುದು ರೋಟರಿ ಸಂಸ್ಥೆಯ ಈ ಬಾರಿಯ ಧ್ಯೇಯ ವಾಕ್ಯ. ಮಿಡ್‌ಟೌನ್ ಕೆಲಸ ಈ ವಾಕ್ಯಕ್ಕೆ ಪೂರಕವಾಗಿದೆ ಎಂದು ತಿಳಿಸಿದರು.

1.40 ಕೋಟಿ ವೆಚ್ಚದಲ್ಲಿ ನಿರ್ಮಾಣ: ಇದಕ್ಕೂ ಮುನ್ನ ಪ್ರಾಸ್ತಾವಿಕವಾಗಿ ಮಾತನಾಡಿದ ರೋಟರಿ ಮಿಡ್‌ಟೌನ್ ಮಾನಸ ಕುಟೀರದ ಅಧ್ಯಕ್ಷ ಎಸ್.ರಾಘವೇಂದ್ರ, 1 ಎಕರೆ ಪ್ರದೇಶದಲ್ಲಿ 7,800 ಚದರ ಅಡಿ ವಿಸ್ತೀರ್ಣದಲ್ಲಿ ಕುಟೀರ ಶಾಲೆ ಕಟ್ಟಡ ನಿರ್ಮಿಸಲಾಗಿದೆ. 1.40 ಕೋಟಿ ರೂ. ವೆಚ್ಚದಲ್ಲಿ ಕಟ್ಟಡ ನಿರ್ಮಾಣಗೊಂಡಿದ್ದು, ಸುಮಾರು 150 ಬುದ್ಧಿಮಾಂದ್ಯ ಮಕ್ಕಳಿಗೆ ಇಲ್ಲಿ ಕಲಿಯಲು ಅವಕಾಶ ದೊರೆಯಲಿದೆ. ಕೆಲವೇ ತಿಂಗಳಲ್ಲಿ ಶಾಲೆ ಕಾರ್ಯಾರಂಭ ಮಾಡಲಿದೆ ಎಂದು ತಿಳಿಸಿದರು.

ಇದೇ ವೇಳೆ ಮಾನಸ ಕುಟೀರ ವಿಶೇಷ ಮಕ್ಕಳ ಶಾಲಾ ಕಟ್ಟಡ ನಿರ್ಮಾಣಕ್ಕಾಗಿ ಆರ್ಥಿಕ ಕೊಡುಗೆ ನೀಡಿದ ರೋಟರಿ ಸದಸ್ಯರು ಹಾಗೂ ಇತರರನ್ನು ಸನ್ಮಾನಿಸಲಾಯಿತು. ಶಾಸಕ ಟಿ.ಎಸ್.ಶ್ರೀವತ್ಸ ಶಾಲಾ ಕಟ್ಟಡದ ಉದ್ಘಾಟನೆ ನೆರವೇರಿಸಿದರು. ರೋಟರಿ ಮೈಸೂರು ಮಿಡ್‌ಟೌನ್ ಅಧ್ಯಕ್ಷ ಡಿ.ಶ್ರೀನಿವಾಸನ್, ರೋಟರಿ ಮೈಸೂರು ಮಿಡ್‌ಟೌನ್ ಫೌಂಡೇಷನ್ ಅಧ್ಯಕ್ಷ ಡಾ.ಕೆ.ಎ.ಪ್ರಹ್ಲಾದ್, ಮುಖಂಡ ಎ.ಆರ್.ಅಲಗಪ್ಪ ವೇದಿಕೆಯಲ್ಲಿದ್ದರು. ಉದ್ಯಮಿಗಳಾದ ಆರ್.ಗುರು, ಶ್ರೀಕಾಂತ್‌ದಾಸ್, ಮಹಾಲಕ್ಷ್ಮೀ ಸ್ವೀಟ್ಸ್‌ನ ಶಿವಕುಮಾರ್ ಸೇರಿದಂತೆ ಮತ್ತಿತರರು ಹಾಜರಿದ್ದರು.


ಧರ್ಮಗಳ ನಡುವೆ ದ್ವೇಷದ ವಿಷ ಬೀಜ ಬಿತ್ತುತ್ತಿರುವ ಮೋದಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಕಿಡಿ

ತಿ.ನರಸೀಪುರ, ಏ.1– ಪ್ರಧಾನಿ ನರೇಂದ್ರ ಮೋದಿಯವರು ಮನ್ ಕಿ ಬಾತ್ ಮೂಲಕ ಧರ್ಮಗಳ ನಡುವೆ ದ್ವೇಷದ ವಿಷ ಬೀಜ ಬಿತ್ತಿ ಗಲಭೆ ಸೃಷ್ಟಿಸಲು ಮುಂದಾಗಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಿಡಿಕಾರಿದರು.

ಪಟ್ಟಣದ ಹೊರವಲಯದ ತೋಟ ಗೇರಿ ಮಾರಮ್ಮ ದೇವಸ್ಥಾನದ ಮುಂಭಾಗದ ಖಾಸಗಿ ಸ್ಥಳದಲ್ಲಿ ನಡೆದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಚಾಮರಾಜನಗರ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಸುನೀಲ್ ಬೋಸ್ ಪರ ಮತ ಯಾಚಿಸಿ ಮಾತನಾಡಿದ ಅವರು, ಬಿಜೆಪಿಯವರು ಧರ್ಮದ ಹೆಸರಿನಲ್ಲಿ ಗಲಭೆ ಸೃಷ್ಟಿಸಲು ಹೊರಟಿದ್ದಾರೆ. ಹಾಗಾಗಿ ಈ ಬಾರಿ ಬಿಜೆಪಿ ಸೋಲಿಸುವ ಮೂಲಕ ಜನಪರವಾಗಿರುವ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲು ಮತದಾರರು ಪಣ ತೊಡಬೇಕಿದೆ ಎಂದರು.

ರಾಮಮಂದಿರ ಕಟ್ಟುತ್ತೇವೆ. ನಾವು ಹಿಂದೂಗಳ ಪರ ಇದ್ದೇವೆ ನಮಗೆ ಮತ ನೀಡಿ ಎನ್ನುತ್ತಾರೆ. ಇದರಿಂದ ಬಡತನ ನಿವಾರಿಸಲು ಸಾಧ್ಯವೇ ಎಂದು ಪ್ರಶ್ನಿಸಿದ ಅವರು, ಅವರಿಗೆ ಮತ ಹಾಕಿದರೆ ಬಡತನ ಹೋಗುತ್ತದೆಯೇ, ಮೋದಿ ಎಂದಾದರೂ ದೇಶದ ಪ್ರಮುಖ ಸಮಸ್ಯೆಗಳ ಬಗ್ಗೆ ಚಿಂತಿಸಿದ್ದಾರೆಯೇ, ಉದ್ಯೋಗ ನೀಡದೇ ನೀವು ಮನ್ ಕಿ ಬಾತ್‌ನಲ್ಲಿ ಬಡತನದ ಬಗ್ಗೆ ಏನು ಮಾತನಾಡುತ್ತೀರಾ ಮಿಸ್ಟರ್ ನರೇಂದ್ರ ಮೋದಿಜಿ ಎಂದು ಕಿಡಿಕಾರಿದ ಸಿದ್ದರಾಮಯ್ಯ, ನಿರುದ್ಯೋಗ, ಬೆಲೆ ಏರಿಕೆ ಬಗ್ಗೆ ಮಾತನಾಡದ ನೀವು ಮನ್ ಕಿ ಬಾತ್ ಹೆಸರಿನಲ್ಲಿ ಜನರ ಭಾವನೆಗಳನ್ನು ಕೆರಳಿಸುವ ಕೆಲಸ ಮಾಡುತ್ತಿದ್ದೀರಾ. ಮುಸಲ್ಮಾನರನ್ನು ಹಿಂದೂಗಳ ಮೇಲೆ, ಹಿಂದೂಗಳನ್ನು ಮುಸಲ್ಮಾನರ ಮೇಲೆ ಎತ್ತಿ ಕಟ್ಟಿ ದ್ವೇಷದ ಬೀಜ ಬಿತ್ತಿ ತಮಾಷೆ ನೋಡುವ ನಿಮಗೆ ಜನರು ಏಕೆ ಮತ ನೀಡಬೇಕು ಎಂದರು.



ತಿ.ನರಸೀಪುರ ಹೊರವಲಯದಲ್ಲಿ ನಡೆದ ಕಾಂಗ್ರೆಸ್ ಕಾರ್ಯಕರ್ತರ ಸಭೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಚಿತ್ರದಲ್ಲಿ ಸಚಿವರಾದ ಹೆಚ್.ಸಿ. ಮಹದೇವಪ್ಪ, ಕೆ. ವೆಂಕಟೇಶ್, ಚಾಮರಾಜನಗರ ಕ್ಷೇತ್ರದ ಅಭ್ಯರ್ಥಿ ಸುನೀಲ್‌ಬೋಸ್ ಸೇರಿದಂತೆ ಇನ್ನಿತರರಿದ್ದಾರೆ.

ಬಿಜೆಪಿ ಸರ್ವೆಯಲ್ಲೇ 200 ಸ್ಥಾನ: ಮೋದಿ ಪ್ರಧಾನಿಯಾಗುವ ಮೊದಲೇ ನೀಡಿದ್ದ ಯಾವುದೇ ಭರವಸೆ ಅನುಷ್ಠಾನಕ್ಕೆ ಬಂದಿಲ್ಲ. ಈ ಬಾರಿ 400 ಸ್ಥಾನಗಳನ್ನು ಗೆಲ್ಲುತ್ತೇವೆ ಎಂದು ಹೇಳಿ ಜನರನ್ನು ಮರುಳು ಮಾಡಲು ಹೊರಟಿದ್ದಾರೆ. ಅವರೇ ಸರ್ವೆ ಮಾಡಿಸಿದ್ದಾರೆ. ಆ ಸರ್ವೆಯಲ್ಲಿ ಅವರಿಗೆ 200 ಸ್ಥಾನಗಳು ಮಾತ್ರವೇ ದೊರಕಲಿದೆ ಎಂದು ಬಂದ ನಂತರ ಜನರಿಗೆ ಮಂಕು ಬೂದಿ ಎರಚಲು 400 ಸ್ಥಾನ ಗೆಲ್ಲುತ್ತೇವೆ ಎಂದು ಸುಳ್ಳು ಹೇಳುತ್ತಿದ್ದಾರೆ ಎಂದು ಸಿದ್ದು ವ್ಯಂಗ್ಯವಾಡಿದರು.

ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿರುವ ಸುನೀಲ್ ಬೋಸ್ ಅವರನ್ನು ಗೆಲ್ಲಿಸಿ ಸಂಸತ್‌ಗೆ ಕಳುಹಿಸುವ ಜವಾಬ್ದಾರಿ ನಿಮ್ಮದಾಗಿದ್ದು ಕನಿಷ್ಠ ಒಂದು ಲಕ್ಷ ಮತಗಳ ಅಂತರದಲ್ಲಿ ಅವರನ್ನು ಗೆಲ್ಲಿಸಿ ಎಂದು ಮನವಿ ಮಾಡಿದರು.

ಅಭ್ಯರ್ಥಿ ಸುನೀಲ್ ಬೋಸ್ ಮಾತನಾಡಿ, ಚಾಮರಾಜನಗರದಲ್ಲಿ ಸ್ಪರ್ಧಿಸಲು ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ನನಗೆ ಅವಕಾಶ ಮಾಡಿಕೊಟ್ಟಿದ್ದಾರೆ. ನಾವೇನಾದರೂ ಈ ಬಾರಿ ಎಡವಿದರೆ ಟೀಕೆಗೆ ಗುರಿಯಾಗಬೇಕಾಗುತ್ತದೆ. ಮಹತ್ವದ ಚುನಾವಣೆಯಲ್ಲಿ ಕಾರ್ಯಕರ್ತರು ಪಕ್ಷದ ಗೆಲುವಿಗೆ ಶ್ರಮಿಸುವ ಮೂಲಕ ಟಿಕೆಟ್ ಕೊಟ್ಟ ಪಕ್ಷದ ಹೈಕಮಾಂಡ್‌ಗೆ ಗೆಲುವನ್ನು ಕೊಡುಗೆ ನೀಡಬೇಕಿದೆ ಎಂದರು.

ಕಾರ್ಯಕ್ರಮದಲ್ಲಿ ಸಚಿವ ಕೆ.ವೆಂಕಟೇಶ್, ಶಾಸಕರಾದ ದರ್ಶನ್, ಗಣೇಶ್ ಪ್ರಸಾದ್, ಎ.ಆರ್.ಕೃಷ್ಣಮೂರ್ತಿ, ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮಾಜಿ ಶಾಸಕರಾದ ಡಾ.ಯತೀಂದ್ರ, ಸುನೀತಾ ವೀರಪ್ಪಗೌಡ, ಎಸ್.ಕೃಷ್ಣಪ್ಪ, ಡಾ.ಎನ್.ಎಲ್. ಭಾರತೀ ಶಂಕರ್, ಜಿ.ಎನ್.ನಂಜುಂಡಸ್ವಾಮಿ, ಕಳಲೆ ಕೇಶವಮೂರ್ತಿ, ಮಾಜಿ ಸಚಿವ ಕೋಟೆ ಶಿವಣ್ಣ, ಮಾಜಿ ಸಂಸದ ಕಾಗಲವಾಡಿ ಶಿವಣ್ಣ, ಜಿಲ್ಲಾಧ್ಯಕ್ಷ ವಿಜಯಕುಮಾರ್, ಹುಣಸೂರು ಬಸವಣ್ಣ, ಎಂಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಸಿ.ಬಸವೇಗೌಡ, ಮೈಮಲ್ ನಿರ್ದೇಶಕರಾದ ಆರ್.ಚಲುವರಾಜು, ಸಿ.ಓಂಪ್ರಕಾಶ್, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ, ಬ್ಲಾಕ್ ಅಧ್ಯಕ್ಷ ಎಂ.ಡಿ. ಬಸವರಾಜು, ತಾಪಂ ಮಾಜಿ ಅಧ್ಯಕ್ಷ ಎಂ.ಮಲ್ಲಿಕಾರ್ಜುನಸ್ವಾಮಿ, ಸೋಸಲೆ ಪಿಎಸಿಎಸ್ ಅಧ್ಯಕ್ಷ ಪರಶಿವಮೂರ್ತಿ, ಡೈರಿ ಕಾರ್ಯದರ್ಶಿ ನಿಂಗಯ್ಯ, ಚನ್ನಕೇಶವ, ಮಾರಾಟ ಸಹಕಾರ ಮಹಾಮಂಡಳದ ನಿರ್ದೇಶಕ ವೈ.ಎನ್.ಶಂಕರೇಗೌಡ, ಸಹಾಯಕ ಪ್ರಾಧ್ಯಾಪಕ ಡಾ.ಬಿ.ಕೆ.ಜ್ಞಾನಪ್ರಕಾಶ್, ಜಿಪಂ ಮಾಜಿ ಸದಸ್ಯರಾದ ಎಂ.ಸುಧಾ ಮಹದೇವಯ್ಯ, ಮಂಜುನಾಥನ್, ಶಶಿಕಲಾ ನಾಗರಾಜು, ಬೃಂದಾ, ಸೋಸಲೆ ಮಹದೇವಸ್ವಾಮಿ, ಕೆಪಿಸಿಸಿ ಕಾರ್ಯದರ್ಶಿ ವರುಣ ಮಹೇಶ್, ಮುಖಂಡರಾದ ಉಕ್ಕಲಗೆರೆ ಬಸವಣ್ಣ, ಕೆ.ಮಲ್ಲು, ಮುನಾವರ್ ಪಾಷ, ಮುಸುವಿನಕೊಪ್ಪಲು ಶಿವರಾಂ, ವಾಟಾಳ್ ನಾಗೇಶ್, ವೀಣಾ ಶಿವಕುಮಾರ್, ಅಶೋಕ್ ಪಟೇಲ್, ಕುಕ್ಕೂರು ಗಣೇಶ, ಶಿವ ಮೂರ್ತಿ, ಕೆ.ಎನ್.ಕುಮಾರ್ ಇನ್ನಿತರರಿದ್ದರು.

ಮೋದಿ... ಮೋದಿ ಅನ್ನುವುದು ಸರ್ವಾಧಿಕಾರಿ ಸಂಕೇತ

ತಿ.ನರಸೀಪುರ: ಕೇಂದ್ರದಲ್ಲಿ ಬಿಜೆಪಿ ಆಡಳಿತವಿರುವುದರಿಂದ ದೇಶ ಅಭಿವೃದ್ಧಿ ಕಾಣುತ್ತಿಲ್ಲ. ರೈತರು, ದಲಿತರು, ಬಡವರು, ಮಹಿಳೆಯರು ಹಾಗೂ ಅಲ್ಪಸಂಖ್ಯಾತರ ಆಸೆಗಳು ಈಡೇರಿಲ್ಲ. ವಾಸ್ತವ ಹೀಗಿದ್ದರೂ ಪ್ರಧಾನಿ ಮೋದಿ ಮಾತುಗಳು ಒಂದು ಕಂಡಿಗೆಯಷ್ಟು ಕೇಳಿ ಬರುತ್ತಿವೆ. ಅಭಿವೃದ್ಧಿಯಾಗಲೀ, ಜನರ ಆಶಯಗಳನ್ನು ಈಡೇರಿಸಿದ ಆಡಳಿತವಾಗಲಿ ಇಲ್ಲದೆ ಕೇವಲ ಮೋದಿ ಮೋದಿ ಎಂದು ಕೂಗುವುದು ಸರ್ವಾಧಿಕಾರಿ ಆಡಳಿತದ ಸಂಕೇತ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಟೀಕಿಸಿದರು.

ರಾಜಕಾರಣದಲ್ಲಿ ಭರವಸೆ ಮತ್ತು ಬದಲಾವಣೆ ಎಂದರೆ ಸಿಎಂ ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ಸರ್ಕಾರ. ಸಾಮಾಜಿಕ ಬದ್ಧತೆ ಇರುವುದರಿಂದಲೇ ಚುನಾವಣೆ ಪೂರ್ವ ನೀಡಿದ್ದ ಐದು ಗ್ಯಾರಂಟಿಗಳನ್ನು ಅಧಿಕಾರಕ್ಕೆ ಬಂದ ತಕ್ಷಣ ಜಾರಿಗೊಳಿಸಿದ್ದಾರೆ. ಎರಡನೇ ತಲೆಮಾರಿನ ನಾಯಕತ್ವವನ್ನು ವಿದ್ಯಾವಂತರು ವಹಿಸಲಿ ಎಂಬ ಉದ್ದೇಶದಿಂದ ಚಾಮರಾಜನಗರ ಕ್ಷೇತ್ರದ ಟಿಕೆಟ್ ಅನ್ನು ಸುನೀಲ್ ಬೋಸ್ ಅವರಿಗೆ ನೀಡಿದ್ದಾರೆ. ರಾಜಕಾರಣದ ಬಗ್ಗೆ ಆಸಕ್ತಿ ಇಲ್ಲದ ಸುನೀಲ್ ಬೋಸ್ ಅಭಿವೃದ್ಧಿ, ಜನರಿಗೆ ಸ್ಪಂದಿಸುವ ಗುಣವುಳ್ಳ ವ್ಯಕ್ತಿಯಾಗಿದ್ದಾರೆ. ಸತತ 9 ಚುನಾವಣೆಗಳಲ್ಲಿ ಬೆಂಬಲಿಸಿ 6 ಚುನಾವಣೆಗಳಲ್ಲಿ ಗೆಲ್ಲಿಸಿ, ನಾಲ್ಕು ಬಾರಿ ಸಚಿವರಾಗಲು ಆಶೀರ್ವದಿಸಿರುವ ನರಸೀಪುರ ಕ್ಷೇತ್ರದ ಜನರು ಲೋಕಸಭಾ ಚುನಾವಣೆಯಲ್ಲಿ ನನ್ನ ಪುತ್ರನನ್ನು ಬೆಂಬಲಿಸಿ ಆಯ್ಕೆ ಮಾಡಬೇಕು ಎಂದು ಮನವಿ ಮಾಡಿದರು.

ಸನಾತನ ಧರ್ಮದ ಅರಿವು ಹೆಚ್ಚಿಸಿಕೊಳ್ಳಿ: ವಿಧುಶೇಖರ ಭಾರತಿ ಸ್ವಾಮೀಜಿ

ನಂಜನಗೂಡು, ಏ.1– ಸನಾತನ ಧರ್ಮದ ಬಗ್ಗೆ ಆಸ್ತಿಕರಲ್ಲಿ ತಿಳುವಳಿಕೆ ಕೊರತೆಯಿಂದಾಗಿ ಅದರ ಮಹತ್ವವನ್ನು ಮಕ್ಕಳಿಗೆ ಮನಮುಟ್ಟುವ ಹಾಗೇ ತಿಳಿಸಲು ಸಾಧ್ಯವಾಗದ ಸ್ಥಿತಿಯಲ್ಲಿದ್ದೇವೆ. ಹೀಗಾಗಿ ಸನಾತನ ಧರ್ಮದ ಬಗ್ಗೆ ಅರಿವು ಹೆಚ್ಚಿಸಿಕೊಳ್ಳಬೇಕು ಎಂದು ಶೃಂಗೇರಿ ಶಂಕರ ಮಠದ ವಿಧುಶೇಖರ ಭಾರತಿ ಸ್ವಾಮೀಜಿ ತಿಳಿಸಿದರು.

ನಗರದ ಶೃಂಗೇರಿ ಶಂಕರ ಶಾಖಾ ಮಠದಲ್ಲಿ ಸೋಮವಾರ ನಡೆದ ಗುರು ವಂದನಾ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿ ಮಾತನಾಡಿದ ಅವರು, ಅನೇಕ ಗಂಭೀರ ಪ್ರಶ್ನೆಗಳಿಗೆ ಉತ್ತರವನ್ನು ನಮ್ಮ ಸನಾತನ ಧರ್ಮದಲ್ಲಿ ಕಾಣಬಹುದಾಗಿದೆ. ಮಹರ್ಷಿಗಳು ಕಠೋರ ತಪಸ್ಸು ಮಾಡಿ ಈಶ್ವರನ ಅನುಗ್ರಹಕ್ಕೆ ಪಾತ್ರರಾಗಿ ವಿಷಯಗಳನ್ನು ತಿಳಿದು ನಮಗೆ ಉಪದೇಶ ಮಾಡಿದ್ದಾರೆ. ಸರ್ವ ಸಾರವನ್ನು ಒಳಗೊಂಡಿರುವ ಸನಾತನ ಧರ್ಮ ಅತ್ಯಂತ ಶ್ರೇಷ್ಠ ಧರ್ಮವಾಗಿದೆ. ಅದರಲ್ಲಿನ ಉಪದೇಶಗಳು ಪ್ರಾಮಾಣಿಕವಾಗಿವೆ. ಆದರೆ, ಆಸ್ತಿಕರು ಸನಾತನ ಧರ್ಮದ ಭವ್ಯತೆ ಅರ್ಥ ಮಾಡಿಕೊಳ್ಳುವಲ್ಲಿ ಎಡವಿದ್ದೇವೆ. ನಮ್ಮಲ್ಲಿರುವ ಬುದ್ಧಿ ಪರಿಪಕ್ವತೆ ಕೊರತೆಯಿಂದಾಗಿ ನಮಗೆ ಧರ್ಮದ ವಿಚಾರಗಳನ್ನು ತಿಳಿದುಕೊಳ್ಳಲು ಸಾಧ್ಯವಾಗಿಲ್ಲ. ಅರ್ಧಂಬರ್ಧ ತಿಳಿದ ನಾಸ್ತಿಕರು ಸನಾತನ ಧರ್ಮದ ಬಗ್ಗೆ ಕೇವಲವಾಗಿ ಮಾತನಾಡುತ್ತಾರೆ. ಅವರ ಮಾತುಗಳಿಗೆ ಚಿಂತೆ ಮಾಡುವ ಅಗತ್ಯವಿಲ್ಲ. ನಾವು ದೃಢ ನಂಬಿಕೆಯಿಂದ ಧರ್ಮವನ್ನು ಅರಿತು ಮಕ್ಕಳಿಗೆ ಪರಿಪಾಲಿಸುವ ಜವಾಬ್ದಾರಿಯನ್ನು ತೋರುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಬೇಕು ಎಂದು ತಿಳಿಸಿದರು.



ನಂಜನಗೂಡಿನ ಶಂಕರ ಶಾಖಾ ಮಠದಲ್ಲಿ ವಿಧುಶೇಖರ ಭಾರತಿ ಸ್ವಾಮೀಜಿ ಆಶೀರ್ವಚನ ನೀಡಿದರು.

ನಂಜನಗೂಡು ಮಠ ಜೀರ್ಣೋದ್ಧಾರ: ನಂಜನಗೂಡಿಗೂ, ಶೃಂಗೇರಿ ಶಂಕರ ಮಠಕ್ಕೂ ಅವಿನಾಭಾವ ಸಂಬಂಧವಿದೆ. ಅನೇಕ ಸಂದರ್ಭ ಜಗದ್ಗುರುಗಳು ಶ್ರೀಕಂಠೇಶ್ವರಸ್ವಾಮಿಗೆ ಪೂಜೆ ಸಲ್ಲಿಸಲು ಬಂದಿದ್ದಾರೆ. 92 ವರ್ಷಗಳ ಹಿಂದೆ ಶೃಂಗೇರಿಯ 34ನೇ ಪೀಠಾಧಿಪತಿಗಳಾಗಿದ್ದ ಚಂದ್ರಶೇಖರ ಭಾರತಿ ಸ್ವಾಮೀಜಿ ಅವರು ನಂಜನಗೂಡಿನಲ್ಲಿ ಶೃಂಗೇರಿ ಶಂಕರ ಶಾಖಾ ಮಠ ಸ್ಥಾಪಿಸಿದ್ದರು. ಅದೀಗ ಶಿಥಿಲಾವಸ್ಥೆಯಲ್ಲಿರುವುದರಿಂದ ಮುಂದಿನ ಬಹುವರ್ಷಗಳ ಕಾಲ ಉಳಿಯುವಂತೆ ಮಾಡುವ ನಿಟ್ಟಿನಲ್ಲಿ ಶಾಖಾ ಮಠವನ್ನು ಮುಂದಿನ ವರ್ಷದಲ್ಲಿ ಜೀರ್ಣೋದ್ಧಾರ ಮಾಡಲಾಗುವುದು. ಶತಮಾನೋತ್ಸವ ಹೊತ್ತಿಗೆ ಲೋಕಾರ್ಪಣೆ ಮಾಡುವ ಸಂಕಲ್ಪ ಮಾಡಿರುವುದಾಗಿ ತಿಳಿಸಿದರು.

ಇದಕ್ಕೂ ಮುನ್ನ ನಾರಾಯಣರಾವ್ ಅಗ್ರಹಾರದಲ್ಲಿ ಜೀರ್ಣೋದ್ಧಾರಗೊಂಡ ಗಣಪತಿ ದೇವಾಲಯವನ್ನು ವಿಧುಶೇಖರ ಭಾರತೀ ಸ್ವಾಮೀಜಿ ವಿವಿಧ ಧಾರ್ಮಿಕ ಪೂಜಾ ಕೈಂಕರ್ಯ ನೆರವೇರಿಸಿ ಲೋಕಾರ್ಪಣೆಗೊಳಿಸಿದರು. ಶ್ರೀಕಂಠೇಶ್ವರಸ್ವಾಮಿ ದೇವಾಲಯ ಹಾಗೂ ಗಟ್ಟವಾಡಿಯಲ್ಲಿರುವ ಸುಬ್ರಹ್ಮಣೇಶ್ವರಸ್ವಾಮಿ ದೇವಾಲಯಕ್ಕೆ ಭೇಟಿ ನೀಡಿದರು. ಭಕ್ತರಿಗೆ ಫಲ ಮಂತ್ರಾಕ್ಷತೆ ನೀಡಿ ಆಶೀರ್ವದಿಸಿದರು.

ಬ್ರಾಹ್ಮಣ ಧರ್ಮ ಸಹಾಯ ಸಭಾ ಅಧ್ಯಕ್ಷ ಗೋವರ್ಧನ್, ಪ್ರಥಮ ದರ್ಜೆ ಗುತ್ತಿಗೆದಾರ ಯು.ಎನ್.ಪದ್ಮನಾಭರಾವ್, ಜೆಡಿಎಸ್ ಜಿಲ್ಲಾಧ್ಯಕ್ಷ ಎನ್.ನರಸಿಂಹಸ್ವಾಮಿ, ಖಾದಿ ಗ್ರಾಮೋದ್ಯೋಗ ಮಂಡಳಿ ಮಾಜಿ ಅಧ್ಯಕ್ಷ ಎನ್.ಆರ್.ಕೃಷ್ಣಪ್ಪಗೌಡ, ಎಂ.ಎನ್. ಮೋಹನ್‌ಕುಮಾರ್, ಎನ್.ಎಸ್.ಸುಬ್ರಹ್ಮಣ್ಯ, ಉಮೇಶ್ ಶರ್ಮ ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು.

ಎನ್‌ಎಸ್‌ಎಸ್‌ನಿಂದ ಶಿಸ್ತು, ನಾಯಕತ್ವ ಗುಣ ಬೆಳವಣಿಗೆ



ಹುಣಸೂರು, ಏ.1– ಎನ್‌ಎಸ್‌ಎಸ್ ಶಿಬಿರಗಳು ನಿಮಗೆ ಉತ್ತಮ ಅನುಭವ ನೀಡುವ ಜೊತೆಗೆ ಶಿಸ್ತು ಮತ್ತು ನಾಯಕತ್ವ ಗುಣ ಕಲಿಸುತ್ತದೆ ಎಂದು ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಹೆಚ್.ಆರ್. ಕೃಷ್ಣಕುಮಾರ್ ತಿಳಿಸಿದರು.

ತಾಲೂಕಿನ ಹಿಂಡಗುಡ್ಲು ಗ್ರಾಮದಲ್ಲಿ ಆಯೋಜಿಸಿದ್ದ ಎನ್‌ಎಸ್‌ಎಸ್ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಕಾಲೇಜು ದಿನಗಳಿಂದಲೇ ಯಾವುದು ತಪ್ಪು, ಯಾವುದು ಸರಿ ಎಂಬುದರ ಬಗ್ಗೆ ಅರಿವು ಪಡೆದು ಉತ್ತಮ ವ್ಯಕ್ತಿಯಾಗಿ ರೂಪುಗೊಳ್ಳಬೇಕು. ಆಗ ಮಾತ್ರ ನಿಮ್ಮನ್ನು ಸಾಕಿ ಸಲುಹಿದ ತಂದೆ, ತಾಯಿ ಮತ್ತು ವಿದ್ಯೆ ಕಲಿಸಿದ ಗುರುಗಳಿಗೆ ಕೊಡುವ ಅತ್ಯುತ್ತಮ ಗೌರವವಾಗಿದೆ ಎಂದರು.

ಶಿಬಿರಾಧಿಕಾರಿ ಬಿ.ಕೆ.ಪ್ರಕಾಶ್ ಮಾತನಾಡಿ, ಕೇವಲ ಒಂದು ವಾರದಲ್ಲಿ ನಿಮ್ಮಲ್ಲಿ ಹಲವು ಬದಲಾವಣೆ ಕಂಡಿದ್ದೇನೆ. ಅದು ಇಂದಿಗೆ ಅಂತ್ಯವಾಗದೆ ನಿಮ್ಮ ಜೀವನದಲ್ಲಿ ಹಾಸುಹೊಕ್ಕಾಗಲಿ. ಆಗ ನಿಮ್ಮ ಭವಿಷ್ಯ ಉಜ್ವಲವಾಗಲಿದೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಹನಗೋಡು ಸರ್ಕಾರಿ ಪದವಿ ಕಾಲೇಜಿನ ಪ್ರಾಂಶುಪಾಲ ಡಾ.ರವಿ, ಎನ್‌ಎಸ್‌ಎಸ್ ಶಿಬಿರದ ಸಾರ್ಥಕತೆ ಪಡೆದುಕೊಳ್ಳಬೇಕಾದರೆ ನೀವು ಇಲ್ಲಿ ಕಲಿತ ಜೀವನ ಪಾಠವನ್ನು ವಿದ್ಯಾರ್ಥಿ ಬದುಕಿನ ಆಚೆಗೂ ಅನುಸರಿಸಬೇಕು ಎಂದರು.

ಮನುಷ್ಯನಿಗೆ ಸಾಧನೆ ಮಾಡಬೇಕು ಎಂಬ ತವಕವಿದ್ದರೆ ಯಾವುದೇ ಸವಾಲು ಎದುರಾದರೂ ಅದನ್ನ ಮೆಟ್ಟಿ ಮುನ್ನಡೆ ಯುವ ಪ್ರವೃತ್ತಿ ಬೆಳಸಿಕೊಳ್ಳಬೇಕು. ಹಾಗೆ ನಿಮ್ಮನ್ನು ವಾರಗಳ ಕಾಲ ತಮ್ಮ ಮಕ್ಕಳಂತೆ ಪ್ರೀತಿಯಿಂದ, ಅಕ್ಕರೆಯಿಂದ ನೋಡಿಕೊಂಡ ಜನತೆಯನ್ನು ಮರೆಯಬೇಡಿ ಎಂದರು.

ಕಾರ್ಯಕ್ರಮದಲ್ಲಿ ಗ್ರಾಮದ ಯಜಮಾನ ಶಿವಕುಮಾರ್, ಎಸ್‌ಡಿಎಂಸಿ ಅಧ್ಯಕ್ಷ ಚೇತನ್ ಕುಮಾರ್, ಗ್ರಾಪಂ ಸದಸ್ಯ ಹರೀಶ್, ವಿಎಸ್‌ಎಸ್ ಬ್ಯಾಂಕ್‌ನ ಕಾರ್ಯದರ್ಶಿ ಬೀರಪ್ಪ, ಗ್ರಾಪಂ ಸದಸ್ಯ ರವಿಕುಮಾರ್, ಮಂಜುನಾಥ್, ಶಂಕರ್, ಮಹೇಶ್, ಶಿಬಿರಾಧಿಕಾರಿಗಳಾದ ಅನಿತಾ, ಗೋಪು ಸೇರಿದಂತೆ 65 ಮಂದಿ ವಿದ್ಯಾರ್ಥಿಗಳು ಇದ್ದರು.

ಪಿ.ಪಟ್ಟಣದಲ್ಲಿ ಸಿದ್ಧಗಂಗಾ ಶ್ರೀಗಳ ಜಯಂತಿ



ಬೆಟ್ಟದಪುರ, ಏ.1– ಪಿರಿಯಾಪಟ್ಟಣದ ಬಸವೇಶ್ವರ ಸರ್ಕಲ್ ಬಳಿಯ ದೇವರಾಜ ಅರಸು ಭವನದ ಎದುರು ತುಮಕೂರಿನ ಸಿದ್ಧಗಂಗಾ ಮಠದ ಶ್ರೀಶಿವಕುಮಾರ ಸ್ವಾಮಿಗಳ 117ನೇ ಜಯಂತಿಯನ್ನು ತಾಲೂಕು ವೀರಶೈವ ಲಿಂಗಾಯತ ಸಮಾಜದಿಂದ ಆಚರಿಸಲಾಯಿತು.

ಶ್ರೀಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ತಾಲೂಕು ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷ ಚಂದ್ರಶೇಖರ್, ಶಿವಕುಮಾರಸ್ವಾಮಿಗಳು ಕೋಟ್ಯಂತರ ಮಂದಿಗೆ ಅನ್ನ, ವಿದ್ಯೆ ದಾಸೋಹ ಮಾಡಿದ್ದಾರೆ. ಹೀಗಾಗಿ ಅವರ ತತ್ವಾದರ್ಶಗಳನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಇದೇ ವೇಳೆ ಸಾವಿರಾರು ಮಂದಿಗೆ ಅನ್ನದಾನ, ಮಜ್ಜಿಗೆ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಪುರಸಭಾ ಸದಸ್ಯರಾದ ವಿನೋದ್ ಕುಮಾರ್, ನಿರಂಜನ್ ಕುಮಾರ್, ಮೈಸೂರು ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷೆ ಅನಿತಾ, ತೋಟಪ್ಪಶೆಟ್ಟಿ, ಮಾಜಿ ಟಿಎಪಿಸಿಎಂಎಸ್ ಅಧ್ಯಕ್ಷ ಚಂದ್ರಶೇಖರ್, ತಾಲೂಕು ವೀರಶೈವ ಲಿಂಗಾಯತ ಸಮಾಜದ ಪ್ರಧಾನ ಕಾರ್ಯದರ್ಶಿ ಮುಕೇಶ್, ಬಿಜೆಪಿ ನಾಯಕಿ ಶೋಭಾ, ಮಾಜಿ ತಾಪಂ ಸದಸ್ಯ ರಘುನಾಥ್, ತಾಲೂಕು ಯುವ ಘಟಕದ ಅಧ್ಯಕ್ಷ ಮಂಜು, ಸತೀಶ, ಬೆಟ್ಟದಪುರ ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷ ಶಿವದೇವಪ್ಪ, ಸೌದೆ ರಾಜು, ತಾಲೂಕು ಶಿವಕುಮಾರ ಸ್ವಾಮಿಗಳ ಸಂಘದ ಅಧ್ಯಕ್ಷ ಶಿವಕುಮಾರಸ್ವಾಮಿ, ವರದರಾಜ್, ಸತೀಶ್ ಆರಾಧ್ಯ, ನವೀನ್ ಕುಮಾರ್ ಸೇರಿದಂತೆ ಇನ್ನಿತರರಿದ್ದರು.

ನಾಳೆ ಶ್ರೀಮಾರಮ್ಮ, ಭೈರವೇಶ್ವರ ಜಾತ್ರಾ ಮಹೋತ್ಸವ



ಸರಗೂರು, ಏ.1– ತಾಲೂಕಿನ ಚನ್ನಿಪುರದಲ್ಲಿ ಏ.3ರಂದು ಶ್ರೀಮಾರಮ್ಮ ಮತ್ತು ಭೈರವೇಶ್ವರ ಜಾತ್ರಾ ಮಹೋತ್ಸವ ನಡೆಯಲಿದೆ.

ಜಾತ್ರಾ ಮಹೋತ್ಸವಕ್ಕೆ ಈಗಾಗಲೇ ಸಕಲ ಸಿದ್ಧತೆ ಕೈಗೊಳ್ಳಲಾಗಿದ್ದು, ಏ.2ರ ರಾತ್ರಿಯಿಂದಲೇ ದೇವಾಲಯದಲ್ಲಿ ಗಣಪತಿ ಹೋಮ ಪುಣ್ಯಾಹ, ಕಳಸ ಪ್ರತಿಷ್ಠಾಪನೆ, ದುರ್ಗಾ ಹೋಮ ಸೇರಿದಂತೆ ಹಲವು ಪೂಜಾ ಕೈಂಕರ್ಯಗಳು ನಡೆಯಲಿವೆ. ಏ.3ರಂದು ಬೆಳಗ್ಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ವಿವಿಧ ಜಾನಪದ ಕಲಾತಂಡಗಳೊಂದಿಗೆ ದೇವರ ಮೆರವಣಿಗೆ ನಡೆದು ಪೂಜೆ ಸಲ್ಲಿಸಿ, ಮಹಾ ಮಂಗಳಾರತಿ ಬಳಿಕ ಕೊಂಡೋತ್ಸವ ನಡೆಯಲಿದೆ. ಜಾತ್ರಾ ಮಹೋತ್ಸವಕ್ಕೆ ಆಗಮಿಸುವ ಭಕ್ತರಿಗೆ ಅನ್ನ ಸಂತರ್ಪಣೆ ಆಯೋಜಿಸಲಾಗಿದ್ದು, ಜಾತ್ರೆಗೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ಗ್ರಾಮಸ್ಥರು ಮನವಿ ಮಾಡಿದ್ದಾರೆ.

ನಾವು ಧರ್ಮವನ್ನು ರಕ್ಷಿಸಿದರೆ ಧರ್ಮ ನಮ್ಮನ್ನು ರಕ್ಷಿಸುತ್ತದೆ

ಮುಡುಕುತೊರೆ ತೋಪಿನ ಮಠದ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ

ತಿ.ನರಸೀಪುರ, ಏ.1– ನಾವು ಧರ್ಮ ರಕ್ಷಣೆ ಮಾಡಿದರೆ ಧರ್ಮ ಆಪತ್ಕಾಲದಲ್ಲಿ ನಮ್ಮನ್ನು ರಕ್ಷಣೆ ಮಾಡುತ್ತದೆ. ಹೀಗಾಗಿ ನಾವೆಲ್ಲರೂ ಧರ್ಮ ರಕ್ಷಣೆ ಮಾಡುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕು ಎಂದು ಮುಡುಕುತೊರೆ ತೋಪಿನ ಮಠದ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ವೀರಶೈವ ಸಮಾಜ ಸೇವಾ ಸಮಿತಿ ಆಶ್ರಯದಲ್ಲಿ ಪಟ್ಟಣದ ಶ್ರೀ ತ್ರ್ಯೆಂಬಕೇಶ್ವರ ಮಠ ಮತ್ತು ರೇಣುಕಾ ಶತಮಾನೋತ್ಸವ ಸಭಾ ಭವನದಲ್ಲಿ ಹಮ್ಮಿಕೊಳ್ಳಲಾಗಿದ್ದ ಶ್ರೀಜಗದ್ಗುರು ಪಂಚಾಚಾರ್ಯರ ಯುಗಮಾನೋತ್ಸವ, ರೇಣುಕಾ ಸಭಾ ಭವನದ 20ನೇ ವಾರ್ಷಿಕೋತ್ಸವ ಮತ್ತು ಗೌರವ ಗುರುರಕ್ಷೆ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭದ ನೇತೃತ್ವ ವಹಿಸಿ ಭಕ್ತರಿಗೆ ಆಶೀರ್ವಚನ ನೀಡಿ ಮಾತನಾಡಿದ ಅವರು, ಇಂದು ಯಾವುದೂ ಶಾಶ್ವತವಲ್ಲ. ಎಲ್ಲದಕ್ಕೂ ಕಾಲವೇ ಉತ್ತರ ಕೊಡುತ್ತದೆ. ಅಹಂಕಾರ ಬೆಳೆಸಿಕೊಂಡು ನಾನು ಎನ್ನದೇ ನಾವು ಎಂದು ಮುಂದೆ ಸಾಗಬೇಕು. ಸಮಾಜದ ಕೆಲಸಗಳನ್ನು ಮಾಡುತ್ತಾ ಹೋಗಬೇಕು ಎಂದರು.

ಧಾರ್ಮಿಕ ಕಾರ್ಯಕ್ರಮಗಳಿಂದ ಮಾತ್ರ ಮನುಷ್ಯ ಸಮಾಜಮುಖಿಯಾಗಲು ಸಾಧ್ಯ. ಮನುಷ್ಯ ಎಷ್ಟೇ ದೊಡ್ಡವನಾದರೂ ಸಂಸ್ಕಾರ ಇಲ್ಲದಿದ್ದರೆ ಶೂನ್ಯ ಎನಿಸಿಕೊಳ್ಳುತ್ತಾನೆ. ಅಧಿಕಾರ, ಹಣ ಮುಖ್ಯವಲ್ಲ. ಸಂಸ್ಕಾರ ಮುಖ್ಯ. ಮಕ್ಕಳಿಗೆ ಗುರು ಹಿರಿಯರನ್ನು ಗೌರವಿಸುವ ಸಂಸ್ಕಾರ, ಸಂಪ್ರದಾಯ ಕಲಿಸದಿದ್ದರೆ ಎಷ್ಟೇ ಆಸ್ತಿ ಸಂಪಾದಿಸಿದರೂ, ವಿದ್ಯಾವಂತರನ್ನಾಗಿ ಮಾಡಿಯೂ ಪ್ರಯೋಜನವಿಲ್ಲ. ಕೆಲವರು ತಾವು ವಿದ್ಯಾವಂತರಾಗಿದ್ದೇವೆಂದು ಅಹಂಕಾರ ಬೆಳೆಸಿಕೊಂಡಿರುತ್ತಾರೆ, ಇದು ಸಲ್ಲದು ಎಂದರು.

ರೇಣುಕರು ನಮ್ಮ ಮನೆ ಸ್ವತ್ತಲ್ಲ. ಇಡೀ ಸಮಾಜದ ಸ್ವತ್ತಾಗಿದ್ದಾರೆ. ಅವರೆಂದೂ ನನಗೆ ಜಯವಾಗಲಿ ಎಂದು ಹೇಳಿಲ್ಲ. ಮಾನವ ಧರ್ಮಕ್ಕೆ ಜಯವಾಗಲಿ ಎಂದಿದ್ದಾರೆ. ಇಂದು ಯಾವುದೇ ದೇಶ ಅವನತಿ ಹಾದಿ ಹಿಡಿದಿರಬಹುದು. ಆದರೆ ಭಾರತ ದೇಶ ಅವನತಿ ಹೊಂದಲು ಸಾಧ್ಯವಿಲ್ಲ. ಎಷ್ಟೇ ದಾಳಿಗಳಾದರೂ ದೇಶವನ್ನು ಯಾರಿಂದಲೂ ಹಾಳು ಮಾಡಲು ಆಗದು. ಏಕೆಂದರೆ ಸನಾತನ ಹಿಂದೂ ಧರ್ಮದಲ್ಲಿ ಅನೇಕ ಋಷಿ ಮುನಿಗಳು ವಾಸ ಮಾಡಿ ಭದ್ರ ಬುನಾದಿ ಹಾಕಿಕೊಟ್ಟಿದ್ದಾರೆ. ಆದ್ದರಿಂದ ಮಣ್ಣಿನಲ್ಲೇ ಧರ್ಮದ ವಾಸನೆ ಇದೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಆಶೀರ್ವಚನ ನೀಡಿದ ಶ್ರೀಕ್ಷೇತ್ರ ಗುಮ್ಮಳಾಪುರ ಸಂಸ್ಥಾನ ಮಠದ ಡಾ.ಶಿವಾನಂದ ಶಿವಾಚಾರ್ಯ ಸ್ವಾಮೀಜಿ, ಕೆಲವರಿಗೆ ರೇಣುಕಾ ಜಯಂತಿ ಗೊತ್ತೆ ಇಲ್ಲ. ಬಸವಣ್ಣ ಜಯಂತಿ ಆಚರಣೆ ಮಾಡುತ್ತಾರೆ. ಆದರೆ ರೇಣುಕಾದಿ ಪಂಚಾಚಾರ್ಯರ ಜಯಂತಿ ಆಚರಣೆಗೆ ಆಸಕ್ತಿ ತೋರುತ್ತಿಲ್ಲ. ಮಠಗಳು ಭಕ್ತರ ಆಸ್ತಿ. ಹೆಸರಿಗೆ ಸ್ವಾಮೀಜಿಗಳು ಮಠದಲ್ಲಿರುತ್ತಾರೆ ಅಷ್ಟೇ. ಮಠಗಳು ಉದ್ಧಾರವಾಗಬೇಕು. ಧರ್ಮ ಬೆಳೆಯಬೇಕು ಎಂದು ಭಕ್ತರು ಮಠಗಳಿಗೆ ಸಹಕಾರ ನೀಡುತ್ತಾರೆ. ಸ್ವಾಮೀಜಿಗಳು ಸಹ ಭಕ್ತರಿಗೆ ಶ್ರೇಯಸ್ಸಾಗಲಿ ಎಂದು ಬಯಸುತ್ತಾರೆ ಎಂದರು.



ಸಮಾರಂಭವನ್ನು ಗುಮ್ಮಳಾಪುರ ಸಂಸ್ಥಾನ ಮಠದ ಡಾ.ಶಿವಾನಂದ ಶಿವಾಚಾರ್ಯ ಸ್ವಾಮೀಜಿ ಉದ್ಘಾಟಿಸಿದರು.

ಇದೇ ವೇಳೆ ವಿದ್ಯೋದಯ ಶಿಕ್ಷಣ ಸಂಸ್ಥೆಯಲ್ಲಿ ವ್ಯಾಸಂಗ ಮಾಡಿ ಉತ್ತಮ ಸಾಧನೆ ತೋರಿದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಮೈಸೂರಿನ ಸಿಗ್ಮಾ ಆಸ್ಪತ್ರೆ ನಿರ್ದೇಶಕ ಎಸ್.ಜ್ಞಾನಶಂಕರ್, ಹಲಗೂರು ವೀರಶೈವ ಸಮಾಜದ ಅಧ್ಯಕ್ಷ ಎನ್.ಮಹದೇವಸ್ವಾಮಿ, ಕಸಬಾ ಪಿಎಸಿಎಸ್ ಅಧ್ಯಕ್ಷ ಮಲ್ಲಣ್ಣ, ಕೆಪಿಟಿಸಿಎಲ್ ಲೆಕ್ಕಾಧಿಕಾರಿ ಜಿ.ಎಂ.ಜಗದೀಶ್, ಡಾ.ಎಂ.ಅರ್ಜುನ್, ಡಾ.ಸುಷ್ಮಾ, ಕು.ಇಂಚರ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದ ಸಾನ್ನಿಧ್ಯವನ್ನು ತ್ರ್ಯೆಂಬಕೇಶ್ವರ ಮಠದ ವೀರೇಶ ಶಿವಾಚಾರ್ಯ ಸ್ವಾಮೀಜಿ ವಹಿಸಿದ್ದರು. ಚಂದೂಪುರ ರೇಣುಕಾ ಆಶ್ರಮದ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ, ವೀರಶೈವ ಸಮಾಜ ಸೇವಾ ಸಮಿತಿ ಅಧ್ಯಕ್ಷ ಟಿ.ಎಸ್.ಶಾಂತರಾಜು, ಉಪಾಧ್ಯಕ್ಷ ಎಸ್.ಶಿವಪ್ರಸಾದ್, ಕಾರ್ಯದರ್ಶಿ ಸಿ.ವೀರೇಶ್, ಸಂಚಾಲಕ ಬಿ.ನಂದೀಶ್, ಖಜಾಂಚಿ ಆರ್.ಸಿದ್ದಲಿಂಗಸ್ವಾಮಿ, ಅಂಗಡಿ ನಾಗೇಶ್, ಫ್ಯಾನ್ಸಿ ಮೋಹನ್, ಶೇಖರ್, ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ತೊಂಟೇಶ್, ಚಾಮರಾಜನಗರ ಮಂಜುನಾಥ್, ಪಾಲಾಕ್ಷ ಸೇರಿದಂತೆ ಇನ್ನಿತರರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಟಿಲ್ಲು–2 (ತೆ)	4 ಪ್ರದರ್ಶನಗಳು,
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಯುವ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸೈತಾನ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಯುವ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ಗಾಡ್ಜಿಲ್ಲಾ ಕಾಂಗ್ (ಇಂ)	4 ಪ್ರದರ್ಶನಗಳು
ಸಂಗಂ	
ಟಿಲ್ಲು–2 (ತೆ)	4 ಪ್ರದರ್ಶನಗಳು
ಲಿಡೋ	
Mr. & Mrs. ಮನ್ಮಥ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಮಗಧೀರ (ತೆ)	4 ಪ್ರದರ್ಶನಗಳು
ಪ್ರಭಾ	
ದಿ ಗೋಟ್ ಲೈಫ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಯುವ (ಕ): ಬೆ.10.30ಕ್ಕೆ, ಸಂ.4ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ)(ಇಂ): ಮ.1.30ಕ್ಕೆ, ರಾ.7.05ಕ್ಕೆ, ಆಡುಜೀವಿತಂ (ಮ): ರಾ.9.30ಕ್ಕೆ.
ಸ್ಕ್ರೀನ್ 2	ಯುವ (ಕ): ಬೆ.9.50ಕ್ಕೆ, ಕುಂಗ್ ಫು ಪಾಂಡ 4(3ಡಿ) (ಇಂ): ಮ.12.50ಕ್ಕೆ, ಮ.2.50ಕ್ಕೆ, ಕ್ರೂವ್ (ಹಿಂ): ಸಂ.4.50ಕ್ಕೆ, ರಾ.7.20ಕ್ಕೆ, ಟಿಲ್ಲು ಸ್ಕ್ವೇರ್ (ತೆ): ರಾ.9.55ಕ್ಕೆ.
ಸ್ಕ್ರೀನ್ 3	ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ)(ಇಂ): ಬೆ.10.25ಕ್ಕೆ, ರಾ.10.10ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಮ.12.45ಕ್ಕೆ, ಸ್ವತಂತ್ರ್ಯ ವೀರ ಸಾವರ್ಕರ್ (ಹಿಂ): ಮ.3.30ಕ್ಕೆ, ಆಡುಜೀವಿತಂ (ಮ): ಸಂ.6.50ಕ್ಕೆ.
ಸ್ಕ್ರೀನ್ 4	ಯುವ (ಕ): ಬೆ.9.50ಕ್ಕೆ, ಮ.1.10ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಟಿಲ್ಲು ಸ್ಕ್ವೇರ್ (ತೆ): ಸಂ.4.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಟಿಲ್ಲು ಸ್ಕ್ವೇರ್ (ತೆ): ಬೆ.9.05ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ)(ಇಂ): ಮ.12.05ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಮ.2.45ಕ್ಕೆ, ಯುವ (ಕ): ಸಂ.6ಕ್ಕೆ, ಆಡುಜೀವಿತಂ (ಮ): ರಾ.9.15ಕ್ಕೆ.
ಸ್ಕ್ರೀನ್ 2	ಯುವ (ಕ): ಬೆ.9ಕ್ಕೆ, ಮ.12.15ಕ್ಕೆ, ಮ.3.30ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ.
ಸ್ಕ್ರೀನ್ 3	ಕ್ರೂವ್ (ಹಿಂ): ಬೆ.10.55ಕ್ಕೆ, ಮ.1.40ಕ್ಕೆ, ರಾ.7.25ಕ್ಕೆ, ಟಿಲ್ಲು ಸ್ಕ್ವೇರ್ (ತೆ): ಸಂ.4.25ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 4	ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ)(ಇಂ): ಬೆ.11.25ಕ್ಕೆ, ಸಂ.5ಕ್ಕೆ, ರಾ.7.40ಕ್ಕೆ, ರಾ.10.20ಕ್ಕೆ, ಕುಂಗ್ ಫು ಪಾಂಡ 4(3ಡಿ) (ಇಂ): ಮ.2.45ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಆರ್ಟಿಕಲ್ 370 (ಹಿಂ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ಡ್ಯೂನ್ ಪಾರ್ಟ್ 2 (ಇಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ಡೆಮೋನ್ ಸ್ಲೇಯರ್ (ಜ): ಸಂ.4.30ಕ್ಕೆ, ಆಪರೇಷನ್ ವ್ಯಾಲೆಂಟೈನ್ (ತೆ & ಹಿಂ): ಬೆ.9.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ, ಲಾಪತಾ ಲೇಡಿಸ್ (ಹಿಂ): ಬೆ.10.35ಕ್ಕೆ, ಸಂ.4.10ಕ್ಕೆ, ರಾ.9.45ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಬೆ.10.20ಕ್ಕೆ, ಮ.1.25ಕ್ಕೆ, ರಾ.7.25ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಬೆ.11.55ಕ್ಕೆ, ಕ್ರೀಂ (ಕ): ಸಂ.6.55ಕ್ಕೆ, ಪ್ರೇಮಲು (ಮ): ರಾ.10.20ಕ್ಕೆ, ಜೋಶುವಾ (ತ): ಮ.1.20ಕ್ಕೆ, ಸಂ.6.55ಕ್ಕೆ, ಭ್ರಮಯುಗಂ (ಮ): ರಾ.9.45ಕ್ಕೆ, ವಾರನಂ ಆಯಿರಂ (ತ): ಮ.3.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.



ಮೈಸೂರು ನಗರ ಚಾಮರಾಜ ವಿಧಾನಸಭಾ ಕ್ಷೇತ್ರ
ಮೈಸೂರು-ಕೊಡಗು ಲೋಕಸಭಾ ಅಭ್ಯರ್ಥಿಯ
ಚುನಾವಣಾ ಪ್ರಚಾರ ಸಭೆ ಮತ್ತು ಕಾಂಗ್ರೇಸ್
ಪಕ್ಷ ಸೇರ್ಪಡೆ ಕಾರ್ಯಕ್ರಮ
ದಿನಾಂಕ 2-4-2024 ಮಂಗಳವಾರ
ಬೆಳಿಗ್ಗೆ 11 ಗಂಟೆಗೆ
ಪ್ರಕಟಣೆ:
ಐಶ್ವರ್ಯ ಫೌಂಡೇಶನ್, ಅಧ್ಯಕ್ಷರು ಗೋಪಾಲಸ್ವಾಮಿ
ಸ್ಥಳ:
ವಿಜಯನಗರ ವಾಣಿವಿಲಾಸ ಬಡಾವಣೆ,
ಆಟದ ಮೈದಾನದಲ್ಲಿ
ಮಂಚೇಗೌಡನಕೊಪ್ಪಲು (ಅಭಿಷೇಕ್ ವೃತ್ತದ ಬಳಿ)
ಬನ್ನಿ ಹರಸಿ ಹಾರೈಸಿ
9663725000, 0821-4054824